
ವಿಬಿಎಸ್
ಒಂಟೆಯ
ಸಾಹಸಗಳು
ದಾನಿಯೇಲ ಮತ್ತು ಸ್ನೇಹಿತರೊಂದಿಗೆ ಧೈರ್ಯಶಾಲಿಗಳಾಗಿರುವದು
ನಿರ್ದೇಶಕರ ಕೈಪಿಡಿ

# ಒಂಟೆಯ ಸಾಹಸಗಳು

**ದಾನಿಯೇಲ ಮತ್ತು ಸ್ನೇಹಿತರೊಂದಿಗೆ ಧೈರ್ಯಶಾಲಿಗಳಾಗಿರುವದು**

**ಮಕ್ಕಳೇ ಪ್ರಮುಖರು**

**ವತಿಯಿಂದ**

**ರಜಾದಿನದ ಸತ್ಯವೇದ ಶಾಲೆ (ವಿಬಿಎಸ್)**

**ನಿರ್ದೇಶಕರ ಕೈಪಿಡಿ**

**ವೆಬ್ ಸೈಟ್:** childrenareimportant.com/camel


**“ಮಕ್ಕಳೇ ಪ್ರಮುಖರು” ತಂಡದವರಿಗೆ ಧನ್ಯವಾದಗಳು!**

Founders, Dwight y Kristina Krauss
Creative Team Manager, Flor Boldo
Creative Editorial Team, Jennifer Sánchez, Areli Salinas, Ramón Martínez, Marlon Hernández.
Designer, Julio Sánchez
Contributing Designer Suzanna Kangas (Suki)
Consulting Emeritus, Miguel y Vickie Kangas
Facebook Page Spanish Admin, Ramón Martínez and Verónica Toj
Facebook Page English Admin, Marlon Hernández and Flor Boldo

Translation Team, alineviera, Annupama Wankhede, Anton Klymyk, Araz Mammadzadeh, Aroma Publications and Media, Arturo Jr Boron, Blessy Jacob, Carmela Dawn Flores, Chrisbresnahan, David Raju, Ephraim Njuguna Mirobi, Finny Jacob, Geenav, HamidReza Azimi (hamid.azimi1364 at gm#ail com), Heyaudrey, I-clever.com, iqbalman, Jacob Kuruvilla, kamilturk, Karunguru Mwangi, kiran, Maitrayi Mondal, Marco Chu, Marcos Rocha, Mathew Das, Mitesh Mandaliya, mrramlama, Mrs.Geethashree NavaneethaKrishnan, Nassim Bougtaia, nicbenk, Paul Mwangi, Paul Septan, Rana922, Rubina Rai, Safdar Khan, shahroshan15, Talento-Unido, ueritom, Verdia Juliansyah Cancerika, Yeoh Jung Chin, Zeina Mirella Barzaga Arencibia

# ಒಂಟೆ ಸಾಹಸಗಳಿಗೆ ಸ್ವಾಗತ!

"ಒಂಟೆ ಸಾಹಸಗಳು", ಎಂಬ ಹೊಸದಾದ ಮತ್ತು ಆಕರ್ಷಕವಾದ ವಿಬಿಎಸ್ ಕಾರ್ಯಕ್ರಮಕ್ಕೆ ಸ್ವಾಗತ! ಇಸ್ರಾಯೇಲ್ಯರು ಸೆರೆಯಲ್ಲಿದ್ದ ಸಮಯದಲ್ಲಿ ಮಾಡಿದ ಹಾಗೆ, ಭ್ರಷ್ಟವಾದ ಲೋಕದಲ್ಲಿ ದೇವರನ್ನು ಧೈರ್ಯವಾಗಿ ಹಿಂಬಾಲಿಸಲು ಕಲಿತುಕೊಳ್ಳುವದರಿಂದ ನಿಮ್ಮ ಮಕ್ಕಳನ್ನು ಒಂಟೆಗಳು ಹಾಗೂ ಸಾಮ್ರಾಜ್ಯಗಳ ಸಾಹಸಕ್ಕೆ ನಡೆಸಿರಿ. ಈ ಕಾರ್ಯಕ್ರಮದಲ್ಲಿ, ನಾವು ದಾನಿಯೇಲ ಮತ್ತು ಆತನ ಸ್ನೇಹಿತರಾದ ಶದ್ರಕ್, ಮೆಷೆಕ್ ಮತ್ತು ಅಬೆದ್ನೆಗೊರನ್ನು ಹಿಂಬಾಲಿಸೋಣ. ಎಸ್ತೇರ್ ರಾಣಿಯು ಸಹ 4 ನೇ ಪಾಠದಲ್ಲಿ ನಿಮ್ಮ ವಿಬಿಎಸ್ ಗೆ ಅತಿಥಿಯಾಗಿ ಬರುತ್ತಾಳೆ.

ಈ ವಿಬಿಎಸ್ ನಲ್ಲಿ ಪ್ರತಿದಿನ, ಮಕ್ಕಳು ನಿಜಜೀವನದ ಆಧುನಿಕ ತಿರುವುಗಳೊಂದಿಗೆ ತಮಾಷೆಯ ಒಂಟೆಗಳನ್ನು (ಕೈಗೊಂಬೆಗಳು ಅಥವಾ ನಟರು) ತಿಳಿದುಕೊಳ್ಳಲು ಇಷ್ಟಪಡುವರು. ಈ ವಿಬಿಎಸ್ ನ ಧ್ಯೇಯವನ್ನು ಪ್ರೋತ್ಸಾಹಪಡಿಸುವ ಮೂಲ ಆಕ್ಷನ್ ಹಾಡುಗಳನ್ನು ಕೇಳಿ ಆನಂದಿಸಿರಿ. ಪಾಠದ ಶೀರ್ಷಿಕೆಯೊಂದಿಗೆ ಸಾಗಲು ಮಕ್ಕಳಿಗೆ ತಮಾಷೆಯ ಆಕ್ಷನ್ ಕಲಿಸಿರಿ ಮತ್ತು ಅದನ್ನು ಮುಖ್ಯ ಪಾಠದಾದ್ಯಂತ ಹಾಗೂ ದಿನದಾದ್ಯಂತ ಅಭ್ಯಾಸ ಮಾಡಿಸಿರಿ. ಸುಲಭವಾಗಿ ದೊರೆಯುವ ಆರ್ಥಿಕ ಸಾಮಗ್ರಿಗಳ ಉಪಯೋಗ ಅಥವಾ ಲೋಕದ ಯಾವುದೇ ಭಾಗದಲ್ಲಾದರೂ ಸುಲಭವಾಗಿ ಪರ್ಯಾಯ ಮಾಡಿಕೊಳ್ಳಲು ಸಾಧ್ಯವಾಗುವಂಥ ಸಾಮಗ್ರಿಗಳಿಂದ ಸಾಮ್ರಾಜ್ಯದ ಕರಕುಶಲ ಸ್ಟೇಷನ್ ನಲ್ಲಿ ತಮಾಷೆಯ ಕರಕುಶಲಗಳನ್ನು ಮಾಡಿರಿ. ಅರಮನೆಯ ತರಗತಿಯಲ್ಲಿ, ಗೊಂದಲಮಯವಾದ ಜಟಿಲ ಮಾರ್ಗ ಜಾಲ ಮತ್ತು ವಿವಿಧ ಒಗಟುಗಳನ್ನು ಬಿಡಿಸುವ ಮೂಲಕ ಮಕ್ಕಳು ಸಂತೋಷಿಸುವರು. ದೊಡ್ಡ ವಯಸ್ಸಿನ ಮಕ್ಕಳಿಗೆ ಪಾಠದೊಂದಿಗೆ ನಿಜಜೀವನದ ಸಮಸ್ಯೆಗಳ ಬಗ್ಗೆ ಆಲೋಚಿಸಲು ಮತ್ತು ಪಾಠವನ್ನು ಅಭ್ಯಾಸ ಮಾಡಲು ಸಣ್ಣದಾದ ಹೋಮ್ ವರ್ಕ್ ಅಸೈನ್ಮೆಂಟ್ ಮಾಡುವ ಅವಕಾಶ ಪ್ರತಿದಿನ ಎಲ್ಲರಿಗೂ ಸಿಗುತ್ತದೆ. ದಾನಿಯೇಲ ಮತ್ತು ಎಸ್ತೇರಳನ್ನು ಭೇಟಿ ಮಾಡುವಾಗ ಮತ್ತು ಅವರಿಂದ ಸತ್ಯವೇದದ ಕಥೆಯನ್ನು ಕೇಳುವಾಗ ಮಕ್ಕಳಿಗೆ ಬಹಳ ಇಷ್ಟವಾಗುತ್ತದೆ, ನಂತರ ದಾನಿಯೇಲ ಸ್ಟೇಷನ್ ನಲ್ಲಿ ಬರುವ ನಾಟಕಗಳಲ್ಲಿ ಆಸಕ್ತಿಕರವಾದ ಚಟುವಟಿಕೆ ಮಾಡುವದು ಆಸಕ್ತಿಕರವಾಗಿರುತ್ತದೆ. ಆಟಗಳಿಲ್ಲದೆ ಯಾವ ವಿಬಿಎಸ್ ಸಹ ಸಂಪೂರ್ಣವಾಗುವದಿಲ್ಲ! ತೋಟದ ಆಟಗಳು ಮತ್ತು ರಾಜಮನೆತನದ ಔತಣ ಸ್ಟೇಷನ್ ಗಳಲ್ಲಿ ಆಟಗಳು ಮತ್ತು ತಮಾಷೆಯಾಗಿ ತಿಂಡಿ ಮಾಡುವ ಆಲೋಚನೆಗಳು ಸಿಗುತ್ತವೆ. ನಿಮ್ಮ ವಿಬಿಎಸ್ ಅಲಂಕರಿಸಲು ಮತ್ತು ಇನ್ನಷ್ಟು ಸಂತೋಷದಲ್ಲಿ ಭಾಗಿಯಾಗಲು ಹೆಚ್ಚಿನ ಆಲೋಚನೆಗಳನ್ನು ತಿಳಿದುಕೊಳ್ಳಲು ಮರೆಯದಿರಿ!

ನಿಮ್ಮ ಸಭೆಯು ಐದು ಪಾಠಗಳ ಮೂಲಕ ಕಾರ್ಯಮಾಡುವಾಗ, ಪ್ರೀತಿ ಮತ್ತು ಧೈರ್ಯದ ನಡುವೆಯಿರುವ ಸಂಬಂಧವನ್ನು ತಿಳಿದುಕೊಳ್ಳಿರಿ ಹಾಗೂ ಅದನ್ನು ಮಕ್ಕಳಿಗೆ ತಿಳಿಯಪಡಿಸಿರಿ.

1 ಯೋಹಾನ 4:18 "ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ."

ದೇವರಿಗೆ ನಮ್ಮ ಮೇಲಿರುವ ಅಪಾರವಾದ ಪ್ರೀತಿ ಮತ್ತು ಆತನ ಮಹೋನ್ನತೆಯ ತಿಳುವಳಿಕೆಯಲ್ಲಿ ಕ್ರೈಸ್ತರಾಗಿ ನಾವು ಬೆಳೆಯುವಾಗ, ಆತನನ್ನು ಹಿಂಬಾಲಿಸುವವರಾದ ಆತನಲ್ಲಿ ನಮಗಿರುವ ಆತ್ಮವಿಶ್ವಾಸ ಬೆಳೆಯುತ್ತದೆ. ದೇವರು ಮತ್ತು ಇತರರ ಮೇಲೆ ನಮಗಿರುವ ಪ್ರೀತಿ ನಮ್ಮೆಲ್ಲರಲ್ಲಿಯೂ ಬೆಳೆಯುವಾಗ, ದಾನಿಯೇಲನು ಮತ್ತು ಅವನ ಸ್ನೇಹಿತರಂತೆ ಧೈರ್ಯವಾಗಿ ನಡೆದುಕೊಳ್ಳುವಂತೆ ಆ ಪ್ರೀತಿಯು ನಮ್ಮನ್ನು ಪ್ರೋತ್ಸಾಹಪಡಿಸುತ್ತದೆ ಹಾಗೂ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಧೈರ್ಯದಿಂದ ಅರ್ಪಿಸಿದ ಹಾಗೆಯೇ ಧೈರ್ಯವಂತರಾಗಿ ಜೀವಿಸಲು ಸಹಾಯ ಮಾಡುತ್ತದೆ.

ಈ ಕಾರ್ಯದಲ್ಲಿ ರಕ್ಷಣೆಯ ಸಂದೇಶವನ್ನು ಸಾರುವ 2 ನೇ ಪಾಠವು ಅತ್ಯಂತ ಪ್ರಾಮುಖ್ಯವಾದ ಪಾಠವಾಗಿದೆ. ನಿಮ್ಮ ವಿಬಿಎಸ್ ಗೆ ಸಾಧ್ಯವಾದಷ್ಟು ಹೆಚ್ಚು ಮಕ್ಕಳನ್ನು ಆಹ್ವಾನಿಸಿರಿ ಮತ್ತು ತಮ್ಮ ಜೀವಿತಗಳನ್ನು ಯೇಸು ಕ್ರಿಸ್ತನಿಗೆ ಅರ್ಪಿಸಲು ಅವರಿಗೆ ಅವಕಾಶ ಕೊಡಿರಿ. ಒಂದುವೇಳೆ ನೀವು ಇದೊಂದೇ ಕಾರ್ಯವನ್ನು ಮಾಡಿದರೂ, ನಿಮ್ಮ ವಿಬಿಎಸ್ ದೊಡ್ಡ ಯಶಸ್ಸನ್ನು ಕಾಣುತ್ತದೆ. ನಿಮ್ಮ ವಿಬಿಎಸ್ ನಿಮಿತ್ತವಾಗಿ ಜನರನ್ನು ಪರಲೋಕದಲ್ಲಿ ಸಂಧಿಸುವಾಗ

ಹೇಗಿರುವದು ಎಂದು ಊಹಿಸಿರಿ! ದೇವರು ಬಹಳವಾಗಿ ಪ್ರೀತಿಸುವ ಮಕ್ಕಳನ್ನು ನೀವು ವಿಬಿಎಸ್ ಗೆ ಆಹ್ವಾನಿಸಿದ್ದರಿಂದ ದೇವರು ನಿಮ್ಮ ವಿಷಯದಲ್ಲಿ ಎಷ್ಟು ಖುಷಿಪಡುವನು ಎಂಬದನ್ನು ಊಹಿಸಿರಿ!

ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡುವ ಮತ್ತು ಆತನಿಗೆ ವಿಧೇಯರಾಗುವದನ್ನು ಮಕ್ಕಳಿಗೆ ಕಲಿಸುವ ಕರ್ತನ ಆಜ್ಞೆಯನ್ನು ನೀವು ಅನುಸರಿಸುವದರಿಂದ ದೇವರು ನಿಮ್ಮ ವಿಬಿಎಸ್ ಅನ್ನು ಬಹಳವಾಗಿ ಆಶೀರ್ವದಿಸಲಿ. ಮಕ್ಕಳ ಸೇವೆಯಲ್ಲಿ ನಮ್ಮ ಗುರಿ ರಜಾಸಮಯದಲ್ಲಿ ಮಕ್ಕಳನ್ನು ಉಚಿತವಾಗಿ ನೋಡಿಕೊಳ್ಳುವದಲ್ಲ, ಬದಲಾಗಿ ಮಕ್ಕಳಿಗೆ ದೇವರ ಬಗ್ಗೆ ಕಲಿಸಲು ದೊರೆಯುವ ಅವಕಾಶವನ್ನು ಉಪಯೋಗಿಸಿಕೊಳ್ಳುವದಾಗಿದೆ. ವಿಬಿಎಸ್ ಚಟುವಟಿಕೆಗಳಿಗಾಗಿ ಪ್ರಾರ್ಥನೆ ಮಾಡಲು ನಿಮ್ಮ ತಂಡದವರನ್ನು ಒಟ್ಟಾಗಿ ಸೇರಿಸಿಕೊಳ್ಳಿರಿ, ನಂತರ ದೇವರು ನಿಮ್ಮ ವಿದ್ಯಾರ್ಥಿಗಳ ಜೀವಿತದಲ್ಲಿ ಹೇಗೆ ಕಾರ್ಯಮಾಡುತ್ತಾನೆ ಎಂಬದನ್ನು ನೋಡಿರಿ.





ನೀವು ಜೀವಿತಗಳನ್ನು ಬದಲಾಯಿಸಲು ಇಲ್ಲಿದ್ದೀರಿ; ನಾವು ನಿಮಗೆ ಸಹಾಯ ಮಾಡಲು ಇದ್ದೇವೆ.

ಮಕ್ಕಳೇ ಪ್ರಮುಖರು ಸೇವೆಯಲ್ಲಿರುವ ತಂಡದವರಿಂದ.

1. **ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ**

ರೋಮನರಿಗೆ 12:2 “ಇಹಲೋಕದ ಆಚಾರವಿಚಾರಗಳಿಗೆ ಮಾರುಹೋಗಬೇಡಿ. ಬದಲಿಗೆ, ಮಾನಸಾಂತರಗೊಂಡು ನೂತನ ಜೀವಿಗಳಾಗಿ ಬಾಳಿರಿ. ಆಗ ನೀವು ದೇವರ ಚಿತ್ತಾನುಸಾರ ಯಾವುದು ಉತ್ತಮವಾದುದು, ಯಾವುದು ಉನ್ನತವಾದುದು, ಯಾವುದು ಉತ್ಕೃಷ್ಟವಾದುದು ಎಂಬುದನ್ನು ಅರಿತುಕೊಳ್ಳುವಿರಿ.”





2. **ಧೈರ್ಯವು ದೇವರಲ್ಲಿ ಭರವಸೆಯನ್ನಿಡುತ್ತದೆ**

ಕೀರ್ತನೆಗಳು 47:2 “ಪರಾತ್ಪರನಾದ ಪ್ರಭುವು ಘನಗಂಭೀರನು। ಪ್ರಪಂಚಕ್ಕೆಲ್ಲ ರಾಜಾಧಿರಾಜನು ॥.”





3. **ಧೈರ್ಯವು ಸತ್ಯವನ್ನು ಹೇಳುತ್ತದೆ**

1 ಕೊರಿಂಥಿಯರಿಗೆ 13:6 “ನಲಿಯದು ಪ್ರೀತಿ ಅನೀತಿಯಲಿ ನಲಿಯದಿರದದು ಸತ್ಯದ ಜಯದಲಿ.”





4. **ಧೈರ್ಯವು ತನಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುತ್ತದೆ**

1 ಯೊವಾನ್ನನು 3:16 “ಕ್ರಿಸ್ತಯೇಸು ನಮಗೋಸ್ಕರ ತಮ್ಮ ಪ್ರಾಣವನ್ನೇ ತೆತ್ತರು. ಇದರಿಂದ ಪ್ರೀತಿ ಎಂತಹುದೆಂದು ನಾವು ಅರಿತುಕೊಂಡೆವು. ನಾವೂ ಕೂಡ ಸಹೋದರರಿಗಾಗಿ ಪ್ರಾಣಾರ್ಪಣೆ ಮಾಡಲು ಬದ್ಧರಾಗಿದ್ದೇವೆ.”





5. **ಧೈರ್ಯವು ರಕ್ಷಿಸುತ್ತದೆ**

ಹಿಬ್ರಿಯರಿಗೆ 10:36 “ದೇವರ ಚಿತ್ತವನ್ನು ನೆರವೇರಿಸಿ, ಅವರು ವಾಗ್ದಾನಮಾಡಿರುವುದನ್ನು ಪಡೆದುಕೊಳ್ಳುವಂತೆ, ನೀವೂ ದೃಢಮನಸ್ಕರಾಗಿರಬೇಕು.”





# ಸಾಮಗ್ರಿಯನ್ನು ಉಪಯೋಗಿಸುವದು ಹೇಗೆ

## ನಿರ್ದೇಶಕ

ವಿಬಿಎಸ್ ನಿರ್ದೇಶಕನಾಗಿ, ನಿಮ್ಮ ಮುಖ್ಯ ಕೆಲಸ ವಿಬಿಎಸ್ ನಡೆಸುವದಾಗಿದೆ. ಎಲ್ಲಾ ರೀತಿಯ ವೇಳಾಪಟ್ಟಿಗಳು, ಕಾರ್ಯಕ್ರಮಗಳು ಮತ್ತು ವಾಲಂಟಿಯರ್ ಗಳು ಹಾಗೂ ಸಾಮಗ್ರಿಗಳ ಮೇಲ್ವಿಚಾರಣೆಯೊಂದಿಗೆ, ವಿಬಿಎಸ್ ನಲ್ಲಿ ಯಾವುದೇ ರೀತಿಯ ಚಟುವಟಿಕೆಯನ್ನು ನಡೆಸಲು ನಿಮ್ಮಿಂದ ಆಗುವದಿಲ್ಲ. ವಾಲಂಟಿಯರ್ ಗಳನ್ನು ಸೇರಿಸಿಕೊಳ್ಳಿರಿ ಮತ್ತು ನಿಮ್ಮ ಸಭೆಯ ಸದಸ್ಯರಿಗೆ ವಿಬಿಎಸ್ ಕಾರ್ಯಕ್ರಮದ ವಿವಿಧ ಕಾರ್ಯಗಳನ್ನು ಒಪ್ಪಿಸಿರಿ. ಇದರಿಂದ ಕಾರ್ಯಕ್ರಮದ ಕುರಿತು ಆಸಕ್ತಿ ಹೆಚ್ಚಾಗುತ್ತದೆ ಮತ್ತು ಮಕ್ಕಳನ್ನು ತಲುಪಲು ನಿಮ್ಮ ಸಭೆಯ ಸದಸ್ಯರಿಗೆ ಸಹಾಯವಾಗುತ್ತದೆ.

## ನೇಮಕಮಾಡುವದು

ನಿಮ್ಮ ಸಭೆಯಿಂದ ಸಾಧ್ಯವಾದಷ್ಟು ಜನರನ್ನು ನೇಮಕಮಾಡಿರಿ. ವಿಬಿಎಸ್ ನಲ್ಲಿ ಸಹಜವಾದ ಸಹಾಯವನ್ನು ಕೇಳಬೇಡಿರಿ ಬದಲಾಗಿ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ನೇರವಾಗಿ ಮಾತನಾಡಿರಿ ಮತ್ತು ನಿರ್ದಿಷ್ಟವಾದ ವಿಷಯಗಳಲ್ಲಿ ಸಹಾಯವನ್ನು ಕೇಳಿರಿ. ಬಹುಶಃ ನಿಮ್ಮ ಸಭೆಯಲ್ಲಿ ಯಾರಿಗಾದರು ಕಲಿಸಲು ಭಯವಾಗುತ್ತಿರಬಹುದು ಆದರೆ ಕರಕುಶಲತೆಯ ವಿಷಯದಲ್ಲಿ ಕಲಿಸುವ ಆಸಕ್ತಿ ಅವರಿಗಿರಬಹುದು.

ಕೆಲವು ಜವಾಬ್ದಾರಿಕೆಗಳು ಯಾವುವೆಂದರೆ (10+ ಜನರಿಗೆ):

- ಎಮ್ ಸಿ, "ಕಾರ್ಯಕ್ರಮವನ್ನು ನಡೆಸುವಾತನು" – ವಿಬಿಎಸ್ ನಿರ್ದೇಶಕನಾಗಿರಬಹುದು
- ಒಂಟೆಯ ನಾಟಕ ಮತ್ತು ಪ್ರಕಟನೆಗಳನ್ನು ಮಾಡಲು (ಯಾರಾದರು) 2 ಪಾತ್ರಧಾರಿಗಳು/ಕೈಗೊಂಬೆ ಆಡಿಸುವವರು
- ಮಕ್ಕಳಿಗೆ ಆಕ್ಷನ್ ಹಾಡುಗಳನ್ನು ಕಲಿಸಲು ಮ್ಯೂಸಿಕ್ ಲೀಡರ್
- ಮಕ್ಕಳೆಲ್ಲರನ್ನು ಒಟ್ಟಿಗೆ ಸೇರಿಸಿ ಮುಖ್ಯ ಪಾಠವನ್ನು ಕಲಿಸಿರಿ – ವಿಬಿಎಸ್ ನಿರ್ದೇಶಕ ಇದನ್ನು ಮಾಡಬಹುದು
- ವಿದ್ಯಾರ್ಥಿ ಪುಸ್ತಕಗಳು ಮತ್ತು ಹಿರಿಯ ವಿದ್ಯಾರ್ಥಿಗಳ ಚರ್ಚೆಯನ್ನು ನಡೆಸಲು ತರಗತಿ ಸ್ಟೇಷನ್ ಟೀಚರ್
- ದಾನಿಯೇಲ ಸ್ಟೇಷನ್ ನಾಟಕದಲ್ಲಿ ದಾನಿಯೇಲ ಮತ್ತು ಎಸ್ತೇರಳು ಪಾತ್ರ ಮಾಡಲು 2 ಪಾತ್ರಧಾರಿಗಳು
- ದಾನಿಯೇಲ ಸ್ಟೇಷನ್ ನಾಟಕಗಳನ್ನು ನಡೆಸಲು ಚಟುವಟಿಕೆಯ ನಾಯಕ
- ಕರಕುಶಲ ನಾಯಕ
- ತಿಂಡಿ ಮೇಲ್ವಿಚಾರಕ
- ಆಟಗಳ ನಾಯಕ

ಅಧಿಕ ಜನರಿರುವಾಗ, ಯೌವನಸ್ಥ ವಿದ್ಯಾರ್ಥಿಗಳೊಂದಿಗೆ ಕಾರ್ಯಮಾಡುವ, ಧ್ವನಿ ಹಾಗೂ ದೃಶ್ಯ ಮಾಧ್ಯಮಗಳನ್ನು ಉಪಯೋಗಿಸುವ, ಪ್ರತಿಯೊಂದು ಸ್ಟೇಷನ್ ನಲ್ಲಿ ಸಂಗೀತ ಕಲಿಸಲು ಅಥವಾ ಸಹಾಯ ಮಾಡಲು ಮತ್ತು ಇನ್ನಿತರೆ ಕಾರ್ಯಗಳನ್ನು ನಡೆಸಲು ನೀವು ಒಬ್ಬರು ಅಥವಾ ಅಧಿಕರನ್ನು ಸಹಾಯಕರನ್ನಾಗಿ ನೇಮಿಸಬಹುದು.

## ತರಬೇತಿ

ವಾಲಂಟಿಯರ್ಸ್ ಗಳಿಗೆ ತಾವು ಮಾಡುತ್ತಿರುವ ಕಾರ್ಯದ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯಿರುವದಾದರೆ ಅವರು ಅವುಗಳನ್ನು ಸಂತೋಷವಾಗಿ ಮಾಡುವರು. ನಮ್ಮ ಯೂಟ್ಯೂಬ್ ಚಾನೆಲ್ ನಿಂದ ವೀಡಿಯೊಗಳನ್ನು ತೆಗೆದು ಒಂದು ದಿನವನ್ನು ತರಬೇತಿಯ ದಿನವಾಗಿ ಏರ್ಪಡಿಸಿರಿ. ವಿಬಿಎಸ್ ಬಗ್ಗೆ ಅವರಿಗೆ ವಿಸ್ತಾರವಾದ ಮಾಹಿತಿಯನ್ನು ಕೊಡಿರಿ ಅಂದರೆ ವೇಳಾಪಟ್ಟಿ ಹಾಗೂ ಅವರು ನಿಭಾಯಿಸಬೇಕಾದ ಪಾತ್ರದ ಬಗ್ಗೆ ನಿರ್ದಿಷ್ಟವಾದ ಮಾಹಿತಿಯನ್ನು ಕೊಡಿರಿ.

## ಆಹ್ವಾನ ಮತ್ತು ನೋಂದಣಿ

ವಿಬಿಎಸ್ ಸುವಾರ್ತೀಕರಣಕ್ಕೆ ದೊರೆಯುವ ದೊಡ್ಡ ಅವಕಾಶವಾಗಿದೆ. ನಿಮ್ಮ ವಿಬಿಎಸ್ ನಿಮಿತ್ತವಾಗಿ ನಾನು ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ಇದ್ದೇನೆ ಎಂದು ಮುಂದೊಂದು ದಿನ ನಿಮಗೆ ಯಾರಾದರು ಹೇಳಿದರೆ ಹೇಗಿರುವದೆಂದು ಊಹಿಸಿರಿ! ನಿಮ್ಮ ವಿಬಿಎಸ್ ಸಭೆಯ ಮಕ್ಕಳಿಗೆ ಮಾತ್ರವೇ ಸೀಮಿತವಾಗಿರಬಾರದು. ಜಾಹಿರಾತಿನ ಸಾಮಗ್ರಿಗಳನ್ನು ಸೃಷ್ಟಿಸಿರಿ ಮತ್ತು ಮಕ್ಕಳಿಗೆ ಅವರ ಜೊತೆಯಲ್ಲಿ ಓದುವವರನ್ನು ಆಹ್ವಾನಿಸುವಂತೆ ಹೇಳಿರಿ ಮತ್ತು ಯಾರು ತಮ್ಮ ಸ್ನೇಹಿತರನ್ನು ವಿಬಿಎಸ್ ಗೆ ಕರೆದುಕೊಂಡು ಬರುತ್ತಾರೋ ಅವರಿಗೆ ಬಹುಮಾನ ಕೊಡಿರಿ. ಒಂದುವೇಳೆ ನಿಮ್ಮ ವಿಬಿಎಸ್ ಗೆ ಬರುವವರಿಂದ ನೀವು ಚಿಕ್ಕದಾಗಿ ಶುಲ್ಕವನ್ನು ಪಡೆಯುವದಾದರೆ, ತಮ್ಮ ಮಕ್ಕಳ ಸ್ನೇಹಿತರಿಗೆ ಸ್ಕಾಲರ್ ಶಿಪ್ ಕೊಡುವ ಸಲುವಾಗಿ ತಂದೆತಾಯಿಗಳನ್ನು ಆಹ್ವಾನಿಸಿರಿ, ಇದರಿಂದ ಅವರು ಸಹ ಯೇಸು ಕ್ರಿಸ್ತನನ್ನು ತಿಳಿದುಕೊಳ್ಳಬಹುದು.

ನಿಮ್ಮ ವಿಬಿಎಸ್ ಗೆ ಎಷ್ಟು ಮಕ್ಕಳು ಬರಬಹುದು ಎಂಬದನ್ನು ಮೊದಲೇ ಯೋಚಿಸಿ ತಿಳಿದುಕೊಳ್ಳಿರಿ ಆಗ ಅವಶ್ಯವಾದ ಸಾಮಗ್ರಿಗಳನ್ನು ತರಲು ಸಾಧ್ಯವಾಗುತ್ತದೆ.

### ವೇಳಾಪಟ್ಟಿ

5 ದಿನಗಳಿಗೂ ವೇಳಾಪಟ್ಟಿ ಏಕರೀತಿಯಾಗಿರುತ್ತದೆ. ಅವಶ್ಯಕತೆಗನುಸಾರ ಈ ವೇಳಾಪಟ್ಟಿಗೆ ಹೊಂದಿಕೊಳ್ಳಲು ಮುಂದಾಗಿರಿ.

ವಿದ್ಯಾರ್ಥಿಗಳನ್ನೆಲ್ಲಾ ಒಟ್ಟುಗೂಡಿಸಿ ದಿನವನ್ನು ಪ್ರಾರಂಭಿಸಿರಿ.

ಪ್ರಾರಂಭ (ಎಲ್ಲರೂ ಒಟ್ಟಾಗಿ):


- ಪ್ರಾರ್ಥನೆ
- ಹಾಡು (ಆಯ್ಕೆ)
- ಚಪ್ಪಾಳೆ ಪರಿಚಯಪಡಿಸಿರಿ / ಗಮನ ಸೆಳೆಯುವದು
- ಒಂಟೆ ನಾಟಕ
- ಹಾಡುಗಳು
- ಪಾಠ

ಮಕ್ಕಳಿಗೆ ಅತ್ತಿತ್ತ ಚಲಿಸಲು ಅವಕಾಶ ಕೊಡುವ ಸಲುವಾಗಿ ಒಂಟೆ ನಾಟಕ ಮತ್ತು ಮುಖ್ಯ ಪಾಠದ ನಡುವೆ ಹಾಡು ಹಾಡಿಸುವದು ಉತ್ತಮ ಎಂಬದು ನಮ್ಮ ಅಭಿಪ್ರಾಯವಾಗಿದೆ.

ನಂತರ ಮಕ್ಕಳನ್ನು ರೊಟೇಷನ್ ಸ್ಟೇಷನ್ ಗಾಗಿ ಗುಂಪುಗಳಾಗಿ ವಿಭಾಗಿಸಿರಿ.

ರೊಟೇಷನ್ (ವಯಸ್ಸಿನ ಗುಂಪುಗಳು)

- ಅರಮನೆಯಲ್ಲಿ ತರಗತಿ (ವಿದ್ಯಾರ್ಥಿ ಪುಸ್ತಕಗಳು)
- ದಾನಿಯೇಲನೊಂದಿಗೆ ನಾಟಕ
  - ನಾಟಕ – ದಾನಿಯೇಲ, ಎಸ್ತೇರಳು



    - ಚಟುವಟಿಕೆ
- ಸಾಮ್ರಾಜ್ಯದಲ್ಲಿ ಕರಕುಶಲತೆ

ನಂತರ ಮಕ್ಕಳೆಲ್ಲರೂ ಮುಕ್ತಾಯದ ಚಟುವಟಿಕೆಯಲ್ಲಿ ಭಾಗವಹಿಸಬಹುದು.

ಎಲ್ಲರೂ ಒಟ್ಟಾಗಿ, ದೊಡ್ಡ ಗುಂಪು:

- ತಿಂಡಿ
- ಹಾಡುಗಳು (ಆಯ್ಕೆ)
- ಆಟಗಳು

ಪಾಠವನ್ನು ಬೇಗನೇ ವಿಮರ್ಶೆ ಮಾಡಿ ಪ್ರಾರ್ಥನೆಯೊಂದಿಗೆ ದಿನವನ್ನು ಮುಗಿಸಿರಿ.

## ಒಂಟೆ ನಾಟಕಗಳು

ಈ ವಿಬಿಎಸ್ ನಲ್ಲಿ ದಿನಕ್ಕೆ ಎರಡು ನಾಟಕಗಳಿರುತ್ತವೆ! ಮೊದಲನೆಯದು ದಿನದ ಪ್ರಾರಂಭದಲ್ಲಿ ಮಕ್ಕಳೆಲ್ಲರೂ ಒಟ್ಟಾಗಿರುವಾಗ ಎರಡು ಒಂಟೆಗಳ ಮೂಲಕ ಮಾಡುವ ಕೈಗೊಂಬೆಯಾಟವಾಗಿದೆ. ಎರಡನೆಯದು ದಿನದ ನಂತರದಲ್ಲಿ ಸ್ಟೇಷನ್ ನಲ್ಲಿ ದಾನಿಯೇಲನ ಪಾತ್ರದಲ್ಲಿರುವ ನಟನ ಸಂದರ್ಶನವಾಗಿದೆ. ರೊಟೇಷನ್ ಸ್ಟೇಷನ್ ಕುರಿತಾದ ಮಾಹಿತಿಯಲ್ಲಿ ದಾನಿಯೇಲನ ನಾಟಕಗಳ ಬಗ್ಗೆ ಹೆಚ್ಚಾಗಿ ಓದಿರಿ.

ಪ್ರತಿದಿನದ ಕೈಗೊಂಬೆಯಾಟದಲ್ಲಿ ಬರುವ ನಮ್ಮ ಇಬ್ಬರು ಒಂಟೆ ಸ್ನೇಹಿತರ ಬಗ್ಗೆ ತಿಳಿದುಕೊಳ್ಳುವಾಗ ನಿಮ್ಮ ಮಕ್ಕಳಿಗೆ ಬಹಳ ಇಷ್ಟವಾಗಬಹುದು! ಮೂಲವಾದ ಈ ನಾಟಕಗಳು ಪ್ರತಿಯೊಂದು ಪಾಠದ ಮುಖ್ಯ ಅಂಶವನ್ನು ತಿಳಿಸುವವುಗಳಾಗಿವೆ. ನಿಮಗೆ ಎರಡು ಒಂಟೆಯ ಕೈಗೊಂಬೆಗಳು (ಅಥವಾ ನಟರು) ಮತ್ತು ವೇದಿಕೆಯ ಹಿಂದಿನಿಂದ ಪ್ರಕಟಿಸುವಾತನು ಬೇಕು.

- ಕಾಮೆಲೊಟ್: ಗೂಫಿ ಹುಡುಗ ಒಂಟೆ ಯಾವಾಗಲೂ ಟೀಕಿಸಲು ಬಯಸುತ್ತಾನೆ, ದುರ್ವಾಸನೆಯುಳ್ಳವನು ಮತ್ತು ಯಾವಾಗಲೂ ಹಸಿವೆಯಲ್ಲಿರುತ್ತಾನೆ.
- ಕ್ಯಾಮೆಲಿಯ: ಹುಡುಗಿ ಒಂಟೆ ಸ್ವಲ್ಪ ಅಭದ್ರತೆಯಲ್ಲಿದ್ದಾಳೆ ಆದರೆ ದೇವರನ್ನು, ಹುಡುಗಿಯರ ಕಾರ್ಯಗಳನ್ನು ಮತ್ತು ಕುಣಿಯುವದನ್ನು ಇಷ್ಟಪಡುತ್ತಾಳೆ.
- ಪ್ರಕಟಿಸುವಾತನು

ಪಾತ್ರಗಳ ಹೆಸರುಗಳನ್ನು ಬೇಕಾದರೆ ನೀವು ಬದಲಾಯಿಸಬಹುದು, ತಮಾಷೆಗಳನ್ನು ಸೇರಿಸಬಹುದು, ಅಥವಾ ಈ ನಾಟಕಗಳನ್ನು ನಿಮ್ಮ ಅವಶ್ಯಕತೆಗಳಿಗನುಸಾರ ಹೊಂದಿಸಿಕೊಳ್ಳಬಹುದು. ಮಕ್ಕಳ ವಯಸ್ಸಿನ ಆಧಾರದ ಮೇರೆಗೆ (ಒಂದೊಂದು ವರ್ಷಕ್ಕೆ ಒಂದೊಂದು ನಿಮಿಷ) ಸುಮಾರು 8 ನಿಮಿಷಗಳು ಮಾತ್ರವೇ ಒಂದು ವಿಷಯದ ಕಡೆಗೆ ಗಮನ ಕೊಡುವವರಾಗಿರುತ್ತಾರೆ ಎಂಬದನ್ನು ತಿಳಿದುಕೊಳ್ಳಿರಿ. ಆದ್ದರಿಂದ, ಆ ಸಮಯದೊಳಗೆ ನಾಟಕವನ್ನು ಮುಗಿಸಿರಿ, ಆಗ ಅವರು ವಾರದ ಇತರೆ ದಿನಗಳಲ್ಲಿ ಬರುವ ನಾಟಕಗಳಿಗೆ ಗಮನ ಕೊಡುತ್ತಾರೆ. ಮತ್ತು ಖಂಡಿತವಾಗಿಯೂ ಮರೆಯದೆ ಖುಷಿಪಡುತ್ತಾರೆ!

ಈ ವಿಬಿಎಸ್ ಗಾಗಿ ನಮ್ಮ ವೆಬ್ ಸೈಟ್ ನಲ್ಲಿರುವ ಮಾದರಿಗಳನ್ನು ಉಚಿತವಾಗಿ ಡೌನ್ ಲೋಡ್ ಮಾಡಿಕೊಂಡು ನೀವೇ ಸ್ವಂತವಾಗಿ ಒಂಟೆಯ ಕೈಗೊಂಬೆಗಳನ್ನು ಮಾಡಿರಿ. ಹಾಗೆಯೇ ಕೈಗೊಂಬೆಗಳನ್ನು ಆಡಿಸುವದು ಹೇಗೆ ಎಂಬದನ್ನು ತಿಳಿಯಲು ಕ್ಲುಪ್ತವಾದ ಮಾಹಿತಿಯಿರುವ ವೀಡಿಯೋ ನೋಡಿರಿ: https://youtube/G7NWA7VUZAI

## ಗಮನ ಸೆಳೆದುಕೊಳ್ಳುವವರು

ಪ್ರೇಕ್ಷಕರ ಗಮನವನ್ನು ಸೆಳೆಯುವ ಸಲುವಾಗಿ ಪ್ರತಿದಿನ ನಾವೊಂದು ಆಕ್ಷನ್ ಒದಗಿಸಿದ್ದೇವೆ. ಉದಾಹರಣೆಗೆ, ಪ್ರತಿಬಾರಿ ನೀವು "ಧೈರ್ಯವು ದೇವರಿಗೆ ಪ್ರಥಮ ಸ್ಥಾನ ಕೊಡುತ್ತದೆ" ಎಂದು ಪಾಠದ ಶೀರ್ಷಿಕೆಯನ್ನು ಹೇಳುವಾಗ, ಮಕ್ಕಳು ಕ್ರಿಯೆಗಳನ್ನು ಮಾಡುವ ಮೂಲಕ ಅದನ್ನು ಹೇಳಬೇಕು. ದಿನದ ಪ್ರಾರಂಭದಲ್ಲಿ ಗಮನ ಸೆಳೆದುಕೊಳ್ಳುವದು ಹೇಗೆ ಎಂದು ವಿದ್ಯಾರ್ಥಿಗಳಿಗೆ ಕಲಿಸಿರಿ, ದಿನದಾದ್ಯಂತ ಅನೇಕ ಸಲ ಅದನ್ನು ಪುನರಾವರ್ತಿಸಿರಿ ಮತ್ತು ಹಿಂದಿನ ದಿನದ ಕ್ರಿಯೆಗಳನ್ನು ವಿಮರ್ಶಿಸಿರಿ. ಕ್ರಿಯೆಗಳನ್ನು ನಡೆಸುವದು ಹೇಗೆ ಎಂದು ತಿಳಿಯಲು ಯೂಟ್ಯೂಬ್ ನಲ್ಲಿ ನಮ್ಮ ವೀಡಿಯೋಗಳನ್ನು ನೋಡಿರಿ.


# ರೊಟೇಷನ್ ಸ್ಟೇಷನ್ಸ್

“ರೊಟೇಷನ್ ಸ್ಟೇಷನ್ಸ್” ನಿಮ್ಮ ವಿಬಿಎಸ್ ಏರ್ಪಡಿಸುವ ಮಾರ್ಗವಾಗಿದ್ದು ಇದರಿಂದ ಮಕ್ಕಳೆಲ್ಲರೂ ಒಂದೇ ಸಮಯದಲ್ಲಿ ಕರಕುಶಲಗಳನ್ನು ಮಾಡಲು ನಿಮಗೆ ಗ್ಲೂಇತ್ಯಾದಿಗಳು ಹೆಚ್ಚಾಗಿ ,ಪೆನ್ಸಿಲ್ , ಬೇಕಾಗುವದಿಲ್ಲ. ಮಕ್ಕಳನ್ನು 3 ಅಥವಾ ಅಧಿಕ ಗುಂಪುಗಳಾಗಿ ವಿಭಾಗಿಸಿರಿ ಮತ್ತು ಅವರೆಲ್ಲರೂ ಸರದಿಯ ಪ್ರಕಾರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಿರಿ. ಉದಾಹರಣೆಗೆ, ಮಧ್ಯಮ ತರಗತಿ ವಿದ್ಯಾರ್ಥಿ ಪುಸ್ತಕದಲ್ಲಿ ಕಾರ್ಯಮಾಡುವಾಗ ಮತ್ತು ಸುಲಭ ತರಗತಿ “ದಾನಿಯೇಲನೊಂದಿಗೆ ನಾಟಕ” ಸ್ಟೇಷನ್ ನಲ್ಲಿ ಚಟುವಟಿಕೆಗಳನ್ನು ಮಾಡುವಾಗ ಅಡ್ವಾನ್ಸಡ್ ಮತ್ತು ಕಷ್ಟದ ತರಗತಿಗಳಿಂದ ಕರಕುಶಲ ಕಾರ್ಯಗಳನ್ನು ಮಾಡಿಸಿರಿ. ಪ್ರತಿಯೊಂದು ಸ್ಟೇಷನ್ ಅನ್ನು ಸುಮಾರು 20 ನಿಮಿಷಗಳಿಗೆ ರಚಿಸಲಾಗಿರುತ್ತದೆ. ನಿರ್ದೇಶಕ ಅಥವಾ ಬೇರೆಯಾರಾದರು ಸ್ಟೇಷನ್ ಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಕೆಯನ್ನು ಹೊಂದಿರುವವರು ಗಡಿಯಾರವನ್ನು ಗಮನಿಸುತ್ತಾ ಇರಬೇಕು ಮತ್ತು ಸಮಯವಾದ ಕೂಡಲೇ ಮುಂದಿನ ಸರದಿಯವರಿಗೆ ಅವಕಾಶ ಕೊಡುವಂತೆ ಪ್ರಕಟಿಸಬೇಕು.

ಒಂದುವೇಳೆ ಸ್ಥಳಾವಕಾಶ ಇರುವದಾದರೆ, ಅದೇ ಚಟುವಟಿಕೆಯನ್ನು ಅದೇ ಸ್ಥಳದಲ್ಲಿ ನಡೆಸಿರಿ ಮತ್ತು ಮಕ್ಕಳು ಪ್ರತಿ 20 ನಿಮಿಷಕ್ಕೊಮ್ಮೆ ಸರದಿ ಪ್ರಕಾರ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಿರಿ. ಮಕ್ಕಳು ಎದ್ದು ನಿಲ್ಲಲು ಮತ್ತು ಚಲಿಸಲು ಇದರಿಂದ ಸಮಯ ಸಿಗುತ್ತದೆ. ಒಂದುವೇಳೆ ಬೇಕಾಗುವಷ್ಟು ಸ್ಥಳ ಇಲ್ಲದಿರುವದಾದರೆ, ವಿದ್ಯಾರ್ಥಿಗಳನ್ನು ಅದೇ ಸ್ಥಳಗಳಲ್ಲಿ ಇರಿಸಿರಿ ಆದರೆ ಅವರು ಮಾಡುವ ಚಟುವಟಿಕೆಗಳನ್ನು ಬದಲಾಯಿಸಿರಿ. ಚಟುವಟಿಕೆಗಳ ನಡುವೆ ಎದ್ದು ನಿಲ್ಲಲು ಮತ್ತು ಕೈಕಾಲುಗಳನ್ನು ಆಡಿಸಲು ಅಥವಾ ಆಸನಗಳನ್ನು ಬದಲಾಯಿಸಲು ಅವಕಾಶ ಕೊಡಿರಿ ಇದರಿಂದ ಅವರಿಗೆ ಚಲಿಸಲು ಸಾಧ್ಯವಾಗುತ್ತದೆ.

ಉದಾಹರಣೆಗೆ:

ಮೊದಲ 20 ನಿಮಿಷಗಳು




ನಂತರದ 20 ನಿಮಿಷಗಳು




ಒಂದುವೇಳೆ ನಿಮಗೆ ಹೆಚ್ಚು ಸ್ಥಳ ಇರುವದಾದರೆ, 4 ವಿವಿಧ ವಯಸ್ಸಿನ ಗುಂಪುಗಳನ್ನು ವಿಭಾಗಿಸಲು ಇತರೆ ರೊಟೇಷನ್ ಸ್ಟೇಷನ್ ನಂತೆ ಆಟಗಳನ್ನು ಸೇರಿಸಿರಿ. ರೊಟೇಷನ್ ಸ್ಟೇಷನ್ ನಡುವೆ ಯಾವಾಗಲಾದರೂ ತಿಂಡಿ ಕೊಡುವ ಸಮಯವನ್ನು ನಿಗದಿಪಡಿಸಿಕೊಳ್ಳಿರಿ.

ವಿವಿಧ ಚಟುವಟಿಕೆ ಸ್ಟೇಷನ್ ಗಳ ಸ್ಥಳ ಮತ್ತು ಸಮಯವನ್ನು ನೀವು ಒಮ್ಮೆ ತೀರ್ಮಾನಿಸಿದ ನಂತರ, ಪ್ರತಿದಿನ ಅದೇ ವೇಳಾಪಟ್ಟಿಯನ್ನು ಪಾಲಿಸಿರಿ. ಮಕ್ಕಳು ಬೇಗನೇ ಕಲಿತುಕೊಳ್ಳುವರು ಮತ್ತು ಸಹಜವಾಗಿ ಟೀಚರ್ ಗಳಿಗಿಂತ ಮುಂಚಿತವಾಗಿಯೇ, ಎಲ್ಲಿಗೆ ಹೋಗಬೇಕೆಂದು ತಿಳಿದಿರುವರು.

ಅರಮನೆಯ ಸ್ಟೇಷನ್ ನಲ್ಲಿ ತರಗತಿಯನ್ನು ನಡಿಸಲು ಟೇಬಲ್ ಅಥವಾ ಬೆಂಚುಗಳನ್ನು ಹಾಕಿ ಯಾವುದಾದರೊಂದು ಸ್ಥಳವನ್ನು ಉಪಯೋಗಿಸಿರಿ.

## ಅರಮನೆಯಲ್ಲಿ ತರಗತಿ



ಒಗಟುಗಳು

ಈ ಸ್ಟೇಷನ್ ನಲ್ಲಿ, ವಿದ್ಯಾರ್ಥಿ ಪುಸ್ತಕದಲ್ಲಿರುವ ಒಗಟುಗಳನ್ನು ಬಗೆಹರಿಸುವ ಮೂಲಕ ಖುಷಿಪಡಬಹುದು. ಕೆಳಗಿನ ವಯಸ್ಸಿನವರಿಗಾಗಿ ನಮ್ಮ ಪುಸ್ತಕಗಳನ್ನು ಏರ್ಪಡಿಸಲಾಗಿದೆ:

ಸುಲಭ – 4-6 ವರ್ಷಗಳು

ಮಧ್ಯಮ – 7-9 ವರ್ಷಗಳು

ಕಷ್ಟ – 10-12 ವರ್ಷಗಳು

ಅಡ್ವಾನ್ಸಡ್ – 13+ ವರ್ಷಗಳು

ಹೋಮ್ ವರ್ಕ್

ಒಂಟೆ ಸಾಹಸಗಳ ವಿಬಿಎಸ್ ನಲ್ಲಿ, ಆ ದಿನ ಕಲಿತ ಪಾಠವನ್ನು ಅಭ್ಯಾಸ ಮಾಡುವ ಸಲುವಾಗಿ ಪ್ರತಿಯೊಂದು ಪಾಠದಲ್ಲಿಯೂ ಸಣ್ಣ ಅಸೈನ್ಮೆಂಟ್ ಇರುತ್ತದೆ. ನಿನ್ನೆಯ ಅಸೈನ್ಮೆಂಟ್ ಮಾಡಿದ್ದಾರೋ ಇಲ್ಲವೋ ಎಂದು ಮಕ್ಕಳನ್ನು ಕೇಳಿರಿ, ನಂತರ ಇಂದಿನ ಅಸೈನ್ಮೆಂಟ್ ಮಾಡಲು ನಿರ್ದಿಷ್ಟವಾದ ಮಾರ್ಗಗಳ ಬಗ್ಗೆ ಚರ್ಚಿಸಿರಿ. ಯಾಕೋಬ 1:22 ಹೇಳುವದೇನೆಂದರೆ "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ."

ಚರ್ಚೆಯ ಪ್ರಶ್ನೆಗಳು


ಮಕ್ಕಳು ದೊಡ್ಡವರಾಗಿ ಬೆಳೆಯುವಾಗ, ಜೀವನದ ಗೊಂದಲಗಳನ್ನು ನೋಡಲು ಪ್ರಾರಂಭಿಸುತ್ತಾರೆ ಮತ್ತು ಸತ್ಯವೇದದ ಕಥೆಗಳಿಂದ ಕಲಿಯುವ ವಿಷಯಗಳನ್ನು ಅಳವಡಿಸಿಕೊಳ್ಳಲು ಕಷ್ಟಪಡುತ್ತಾರೆ. ಈ ಕಾರಣಕ್ಕಾಗಿ, ಹಿರಿಯ ವಿದ್ಯಾರ್ಥಿಗಳಿಗೆ ಕೆಲವು ಕಠಿಣ ಪ್ರಶ್ನೆಗಳಲ್ಲಿ ಸಹಾಯ ಮಾಡುವ ಸಲುವಾಗಿ ಪ್ರಶ್ನೆ ಉತ್ತರದ ಭಾಗವನ್ನು ಏರ್ಪಡಿಸಿ, ಪಾಠಗಳು ಅವರಿಗೆ ವಾಸ್ತವವಾಗಿ ತೋರುವಂತೆ ಮಾಡಲು ಪ್ರಯತ್ನಿಸಿದ್ದೇವೆ. ಉದಾಹರಣೆಯ ಉತ್ತರವನ್ನು ಕೂಡಲೇ ತಿಳಿಸಬೇಡಿರಿ, ಮಕ್ಕಳು ತಾವಾಗಿಯೇ ಉತ್ತರವನ್ನು ಯೋಚಿಸಲಿ, ತಾವು ಕಲಿತಿರುವ ವಿಷಯವನ್ನು ನೆನಪಿಗೆ ತಂದುಕೊಳ್ಳಲು ಅವಕಾಶ ಕೊಡಿರಿ. ಒಂದುವೇಳೆ ಸಾಧ್ಯವಾದರೆ, ಉತ್ತರವನ್ನು ಹೇಳಲೇಬೇಡಿರಿ ಬದಲಾಗಿ ಅವರಿಗೆ ನೀವು ಕೊಡುವ ಸಲಹೆಗಳಿಂದ ಅವರು ತಾವಾಗಿಯೇ ತೀರ್ಮಾನಗಳಿಗೆ ಬರಲಿ. ಚಾರಿತ್ರಿಕವಾದ ಸತ್ಯವೇದ ವಿಷಯಗಳಿಗೆ ಮಾತ್ರವಲ್ಲ ಬದಲಾಗಿ ಆ ದಿನದ ಅಳವಡಿಸುವಿಕೆಯ ಬಗ್ಗೆ ಯೋಚಿಸಲು ಪ್ರೋತ್ಸಾಹಪಡಿಸಿರಿ. ನಿಮ್ಮ ತರಗತಿಯಲ್ಲಿ ಭರವಸೆಯ ವಾತಾವರಣವನ್ನು ಅಭಿವೃದ್ಧಿಪಡಿಸಿರಿ ಆಗ ಮಕ್ಕಳಿಗೆ ಒಂದುವೇಳೆ ಅವರ ಉತ್ತರಗಳು ತಪ್ಪಾಗಿದ್ದರೂ ಧೈರ್ಯವಾಗಿ ಅವುಗಳನ್ನು ಹೇಳುವ ಅವಕಾಶ ಸಿಗುತ್ತದೆ. ಈ ಪ್ರಶ್ನೆಗಳಿಗೆ ಅವರು ವೈಯಕ್ತಿಕವಾಗಿ ಮತ್ತು ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಿದರೆ ಅವರು ಬೆಳೆಯುತ್ತಾರೆ ಹಾಗೂ ಹೆಚ್ಚು ಪ್ರಬುದ್ಧರಾಗುತ್ತಾರೆ.

## ದಾನಿಯೇಲನೊಂದಿಗೆ ನಾಟಕಗಳು



ಈ ಸ್ಟೇಷನ್ ನಲ್ಲಿ 2 ಚಟುವಟಿಕೆಗಳಿರುತ್ತವೆ, ಇತರೆ ಸ್ಟೇಷನ್ ಗಳು ತೆಗೆದುಕೊಳ್ಳುವ ಸಮಯವನ್ನೇ ಇಲ್ಲಿಯೂ ತೆಗೆದುಕೊಳ್ಳಬೇಕು. ಮೊದಲನೆಯದು ದಾನಿಯೇಲನೊಂದಿಗೆ ನಾಟಕ ನಂತರ ಪಾಠವನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುವ ಚಟುವಟಿಕೆ. ಮಕ್ಕಳಿಗೆ ಸತ್ಯವೇದದವರಾಗಿರುವ ನಮ್ಮ ಸ್ನೇಹಿತರಾದ ದಾನಿಯೇಲ ಮತ್ತು ಎಸ್ತೇರಳನ್ನು ಭೇಟಿಯಾಗುವಾಗ ಖುಷಿಯಾಗುವದು. ಇವರ ಪಾತ್ರಗಳನ್ನು ನಿಭಾಯಿಸುವ ವಾಲಂಟಿಯರ್ ನಟರು ಸೂಕ್ತ ವಸ್ತ್ರಗಳನ್ನು ಧರಿಸಿಕೊಳ್ಳಲು ಸಹಾಯ ಮಾಡಿರಿ. ದಾನಿಯೇಲನು ಬಾಬೆಲ್, ಮೇದ್ಯ ಮತ್ತು ಪಾರಸಿಯ ಸಾಮ್ರಾಜ್ಯಗಳಲ್ಲಿ ಜೀವಿಸಿದ ಉನ್ನತ ಮಟ್ಟದ ಅಧಿಕಾರಿಯಾಗಿದ್ದಾನೆ. ಎಸ್ತೇರಳು ಪಾರಸಿಯ ಸಾಮ್ರಾಜ್ಯದ ಸುಂದರ ರಾಣಿಯಾಗಿದ್ದಾಳೆ.

ನಾವು ನಾಟಕಗಳಿಗೆ ಕೆಲವು ವಿವರಣೆಗಳನ್ನು ಕೊಟ್ಟಿದ್ದೇವೆ. ನಾಟಕಗಳಲ್ಲಿ ಬೇಕಾಗುವ ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು ಅಥವಾ ಅದನ್ನು ಟೀಚರ್ ನೊಂದಿಗಿನ ಸಂದರ್ಶನವಾಗಿ ಬದಲಾಯಿಸಿರಿ. ಒಂದುವೇಳೆ ಹೇಚ್ಚು ಜನರಿರುವದಾದರೆ, ನೀವು ಶ್ರದ್ರಕ್, ಮೇಷಕ್ ಮತ್ತು ಅಬೇದ್ನೆಗೊ ಅಥವಾ ನೆಬೂಕದ್ನೇಚ್ಚರನನ್ನು ಸಹ ಆಹ್ವಾನಿಸಬಹುದು.



ಸ್ಟೇಷನ್ ನಲ್ಲಿ ನಾಟಕದ ಭಾಗ ಮುಗಿದ ನಂತರ, ಮಕ್ಕಳೊಂದಿಗೆ ಚಟುವಟಿಕೆಯನ್ನು ಮಾಡಿರಿ. ಚಟುವಟಿಕೆಯು ತಮಾಷೆಯ ಸಾಧನವಾಗಿದ್ದು ಅವರು ಕಲಿತಿರುವ ವಿಷಯವನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಪ್ರತಿಯೊಂದು ಚಟುವಟಿಕೆಯು ಆ ದಿನದ ಪಾಠದೊಂದಿಗೆ ಸಾಗುತ್ತದೆ. ಈ ಚಟುವಟಿಕೆಯ ಪ್ರಾಮುಖ್ಯತೆ ಏನೆಂದರೆ ಇದು ಕೇವಲ ಖುಷಿ ಕೊಡುವದು ಮಾತ್ರವಲ್ಲ ಬದಲಾಗಿ ವಿವಿಧ ಪರಿಸ್ಥಿತಿಗಳಲ್ಲಿ ಏನು ಮಾಡಬೇಕೆಂದು ಯೋಚಿಸಲು ಹಾಗು ಪ್ರತಿಬಿಂಬಿಸಲು ಅವಕಾಶವನ್ನು ಕೊಡುತ್ತದೆ.

## ಸಾಮ್ರಾಜ್ಯದಲ್ಲಿ ಕರಕುಶಲತೆ

ಸಾಮ್ರಾಜ್ಯದ ಸ್ಟೇಷನ್ ನಲ್ಲಿ ಮಾಡುವ ಕರಕುಶಲತೆಯು ನಿಮಗೆ ಬಹಳ ಸಂತೋಷಕರವಾಗಿರುವದು, ಸರಳವಾದ ಕರಕುಶಲತೆಯೊಂದಿಗೆ ಕ್ರಿಯಾತ್ಮಕವಾದ ಕಲೆಯನ್ನು ಅಭ್ಯಾಸ ಮಾಡಲು ಈ ಸಮಯ ಸಹಕಾರಿಯಾಗಿರುತ್ತದೆ. ಪ್ರತಿಯೊಂದು ಕರಕುಶಲವನ್ನು ಚಿಕ್ಕವರು ಮತ್ತು ದೊಡ್ಡವರಿಗೆ ಸಮಾನವಾಗಿ ರೂಪಿಸಲಾಗಿರುತ್ತದೆ; ಅವುಗಳನ್ನು ಒಟ್ಟುಗೂಡಿಸಲು ಮತ್ತು ಅವುಗಳಿಗೆ ವೈಯಕ್ತಿಕ ಸ್ಪರ್ಶವನ್ನು ಕೊಡಲು ಪ್ರತಿಯೊಬ್ಬರು ಖುಷಿಪಡುವರು.






## ತೋಟದ ಆಟಗಳು

ಆಟಗಳಿಲ್ಲದೆ ವಿಬಿಎಸ್ ಪೂರ್ಣವಾಗುವದಿಲ್ಲ! ಈ ಸ್ಟೇಷನ್ ನಲ್ಲಿ, ಬಹಳಷ್ಟು ಸತ್ವವಿರುವ ಅದ್ಭುತವಾದ ಆಟಗಳು ನಿಮಗೆ ಸಿಗುತ್ತವೆ. ಮಕ್ಕಳು ಖಂಡಿತವಾಗಿಯೂ ಖುಷಿಪಡುವರು ಮತ್ತು ಅವುಗಳನ್ನು ನೀವು ಸುಲಭವಾಗಿ ಆಡಬಹುದು. ಈ ಆಟಗಳಿಗೆ ಸರಳವಾದ, ಸುಲಭವಾಗಿ ದೊರೆಯುವ ಸಾಮಗ್ರಿಗಳು ಸಾಕು. ಸಂತೋಷಕರವಾದ ಈ ವಿಬಿಎಸ್ ನಲ್ಲಿ ಉತ್ತಮವಾದ ಅನುಭವಗಳನ್ನು ಪಡೆಯಿರಿ.

## ರಾಜಮನೆತನದ ಔತಣ

ಈ ಸ್ಟೇಷನ್ ನಲ್ಲಿ ನೀವು ಪ್ರತಿಯೊಂದು ಪಾಠದೊಂದಿಗೆ ಸಂಬಂಧವಿರುವ ಆರೋಗ್ಯಕರ, ಸ್ವಾದಿಷ್ಟಕರ ಮತ್ತು ತಮಾಷೆಯ ತಿಂಡಿಯನ್ನು ಕೊಡಬಹುದು. ಅತ್ಯಂತ ಸುಲಭ ಮತ್ತು ಕಡಿಮೆ ಬೆಲೆಯಲ್ಲಿ ದೊರೆಯುವ ಪದಾರ್ಥಗಳನ್ನು ಬಳಸಲು ನೀವು ತಿನಿಸುಗಳನ್ನು ಬೇಕಾದರೆ ಬದಲಾಯಿಸಬಹುದು. ಅವುಗಳನ್ನು ತಿನ್ನುವಾಗ ಅವರು ಖುಷಿಪಡುವದು ಮಾತ್ರವಲ್ಲ, ಬದಲಾಗಿ ಪಾಠವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಅವರು ಅದನ್ನು ಮತ್ತೊಂದು ತಮಾಷೆಯ ಚಟುವಟಿಕೆಯಾಗಿಯೂ ಮಾಡಬಹುದು.



# ಹೆಚ್ಚುವರಿ ಆಲೋಚನೆಗಳು

### ಇಟ್ಟಿಗೆಯ ದೃಶ್ಯ

ಅಲಂಕರಿಸಲು ಮತ್ತು ಅರಮನೆಯ ಗೋಡೆಗಳನ್ನು ಕಟ್ಟಲು ಇಟ್ಟಿಗೆಯ ಗೋಡೆಗಳು.





### ಕಾರ್ಡ್ ಬೋರ್ಡ್ ಒಂಟೆ

ಮಕ್ಕಳ ಬೆಂಚ್ ಗಳು ಅಥವಾ ವರ್ಕ್ ಟೇಬಲ್ ಗಳನ್ನು ಅಲಂಕಾರ ಮಾಡಲು ನೀವು ಹಲವಾರು ಸಣ್ಣ ಒಂಟೆಗಳನ್ನು ಮಾಡಬಹುದು.

### ಚಟುವಟಿಕೆಯ ಚಕ್ರ

ಮಕ್ಕಳು ಅಭ್ಯಾಸ ಮಾಡಬೇಕಾಗಿರುವ ಆಕ್ಷನ್ ಪದಗಳನ್ನು ಬರೆಯಲು ರೂಲೆಟ್ ಮಾಡಿರಿ, ಅದನ್ನು ಕೋಣೆಯೊಳಗೆ ಯಾವ ಭಾಗದಲ್ಲಿ ಬೇಕಾದರೂ ಇಡಿರಿ, ಅದು ಅವರಿಗೆ ಪರಸ್ಪರ ಅಲಂಕಾರವಾಗಿರುವದು!






### ಬೆಂಕಿಯ ಕುಂಡ

ಕೋಣೆಯನ್ನು ಅಲಂಕರಿಸುವ ಭಾಗವಾಗಿ ಪಾಠ 2 ರಲ್ಲಿ ಕಾರ್ಡ್ ಬೋರ್ಡ್ ಬಾಕ್ಸ್ ನಿಂದ ಬೆಂಕಿ ಕುಂಡವನ್ನು ಮಾಡಿರಿ.




### ರಮನೆಯಲ್ಲಿ ಊಟ

ನೀವು ಮಕ್ಕಳಿಗೆ ಕಿರೀಟಗಳನ್ನು ಹಾಕಬಹುದು, ಟೇಬಲ್ ಮೇಲೆ ಬಟ್ಟೆ ಹಾಕಿ ಅದನ್ನು ಅಲಂಕಾರ ಮಾಡಬಹುದು. ಮಕ್ಕಳು ಸ್ವಾದಿಷ್ಟವಾದ ತಿನಿಸನ್ನು ಸವಿಯುವಾಗ, ಅರಮನೆಯಲ್ಲಿ





### ಪಿಕ್ಚರ್ ಫ್ರೇಮ್

ಮಕ್ಕಳು ಸೆಲ್ಫೀ ತೆಗೆದುಕೊಳ್ಳಲು ಒಂದು ಸ್ಥಳವನ್ನು ನಿಗದಿಪಡಿಸಿರಿ.



### ಸಿಂಹದ ಗವಿ

ಕಾರ್ಡ್ ಬೋರ್ಡ್ ಬಾಕ್ಸ್ ಅಲಂಕರಿಸಿ ಅದರ ಎಡಬಲ ಹಾಗೂ ಮೇಲ್ಭಾಗದಲ್ಲಿ ಗ್ರೇ ಅಥವಾ ಬ್ರೌನ್ ಬಣ್ಣದ ಹಾಳೆಗಳನ್ನು ಅಂಟಿಸಿ, ಗವಿಯ ಗೋಡೆಗಳಂತೆ ಬಿಂಬಿಸಿರಿ. ಹಿಂಭಾಗದಲ್ಲಿ ಸಿಂಹಗಳ ಮತ್ತು ದಾನಿಯೇಲನನ್ನು ಪ್ರತಿನಿಧಿಸುವ ವ್ಯಕ್ತಿಯ ಚಿತ್ರವನ್ನು ಅಂಟಿಸಿರಿ, ಇದನ್ನು ನೀವು 5 ನೇ ಪಾಠದಲ್ಲಿ ಬರುವ ಸಿಂಹದ ಗವಿಗೆ ಉಪಯೋಗಿಸಬಹುದು. ಇದು ನಿಮ್ಮ ತರಗತಿಯ ಅಲಂಕಾರದ ಭಾಗವಾಗಿರುವದು ಮತ್ತು ಇದನ್ನು ಕೆಲವು ಚಟುವಟಿಕೆಗೆ ನೀವು ಉಪಯೋಗಿಸಬಹುದು.



### ಅರಸನ ಸಿಂಹಾಸನ

ಇದನ್ನು ಸಿಂಹಾಸನದಂತೆಯೇ ಅಲಂಕಾರ ಮಾಡಿರಿ.





### ಪೇಪರ್ ತೋಟ

ಬಾಬೆಲಿನ ತೂಗುವ ತೋಟದ ಪ್ರೇರಣೆಯಂತೆ ಅಲಂಕಾರವನ್ನು ಮಾಡಬಹುದು ಮತ್ತು ತರಗತಿಯನ್ನು ಹಾಗೆ ತೋರಿಸಲು ಪ್ರಯತ್ನಿಸಬಹುದು. ಮಕ್ಕಳಿಗೆ ತಾವು ಬಾಬೆಲಿನಲ್ಲಿಯೇ ಇರುವಂತೆ ಅನ್ನಿಸುವದು!



### ಬೆಣೆಯಾಕಾರದ ಅಲಂಕಾರಗಳು

ನಿಮ್ಮ ಮಕ್ಕಳಿೊಂದಿಗೆ ಬೆಣೆಯಾಕಾರದ ಕರಕುಶಲಗಳನ್ನು ಮಾಡಿರಿ ಮತ್ತು ಮೂಲ ಅಂಕಾರಗಳಂತೆ ಅವುಗಳನ್ನು ಕೋಣೆಯೊಳಗೆ ಜೋಡಿಸಿರಿ.



### ಪೇಪರ್ ಬೆಂಕಿ

ಬಣ್ಣಬಣ್ಣದ ಕಂಬಳಿ ಅಥವಾ ಹೊದಿಕೆಗಳನ್ನು ನೆಲದ ಮೇಲೆ ವೃತ್ತಾಕಾರದಲ್ಲಿ ಹಾಸಿರಿ, ಅವುಗಳ ಮೇಲೆ ದಿಂಬುಗಳನ್ನು ಇಡಿರಿ ಮತ್ತು ಮಧ್ಯದಲ್ಲಿ ಪೇಪರ್ ಬೆಂಕಿಯನ್ನು ಇಡಿರಿ. "ಒಂಟೆ ಸಾಹಸಗಳು" ಎಂಬ ಅದ್ಭುತವಾದ ವಿಬಿಎಸ್ ನ ಪಾತ್ರಧಾರಿಗಳ ಬಗ್ಗೆ ಹೇಳಲು ಈ ಸಮಯವನ್ನು ಉಪಯೋಗಿಸಿಕೊಳ್ಳಿರಿ.



# ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ

## ದಾನಿಯೇಲ 1: ಹೊಸ ಮನೆ ಮತ್ತು ಶಾಲೆ

### ಗಮನ ಸೆಳೆಯುವವರು/ಚಪ್ಪಾಳೆಗಳು 1

"ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ"

1. "ಧೈರ್ಯ" = ಮುಷ್ಠಿ ಹಿಡಿದು ಬಾಗುತ್ತಾ ಕೈಗಳನ್ನು ಮೇಲೆತ್ತಿರಿ
2. "ದೇವರಿಗೆ" = ಎರಡು ಸಲ ಚಪ್ಪಾಳೆ ಹೊಡೆಯಿರಿ
3. "ಪ್ರಥಮ ಸ್ಥಾನ ಕೊಡುತ್ತದೆ" = ಮೇಲೆ ಆಕಾಶದ ಕಡೆಗೆ ತೋರಿಸಿರಿ

### ಕಂಠಪಾಠ ವಚನ 1

ರೋಮನರಿಗೆ 12:2 "ಇಹಲೋಕದ ಆಚಾರವಿಚಾರಗಳಿಗೆ ಮಾರುಹೋಗಬೇಡಿ. ಬದಲಿಗೆ, ಮಾನಸಾಂತರಗೊಂಡು ನೂತನ ಜೀವಿಗಳಾಗಿ ಬಾಳಿರಿ. ಆಗ ನೀವು ದೇವರ ಚಿತ್ತಾನುಸಾರ ಯಾವುದು ಉತ್ತಮವಾದುದು, ಯಾವುದು ಉನ್ನತವಾದುದು, ಯಾವುದು ಉತ್ಕೃಷ್ಟವಾದುದು ಎಂಬುದನ್ನು ಅರಿತುಕೊಳ್ಳುವಿರಿ."

### ನಾಟಕ 1: ಒಂಟೆ ಓಟ

ಕಾಮೆಲಿಯಾ ತೆರೆಯ ಮೇಲೆ ಬಂದಳು: ಆಹಾ, ಆ ಒಂಟೆಗಳನ್ನೆಲ್ಲಾ ನೋಡಿರಿ! ಇಂಥ ದೊಡ್ಡ ಓಟದ ಸ್ಪರ್ಧೆಯನ್ನು ನೋಡಲು ನಾನು ಬಹಳ ದಿನದಿಂದ ಕಾಯುತ್ತಿದ್ದೆನು. ಅಯ್ಯೋ, ಏನಿದು ವಾಸನೆ?

ಕಾಮೆಲೊಟ್ ತೆರೆಯ ಮೇಲೆ ಬಂದನು: ಕ್ಷಮಿಸಿ, ಇವತ್ತು ಡಿಯೊಡ್ರೆಂಟ್ ಹಾಕಿಕೊಳ್ಳಲು ನಾನು ಮರೆತು ಹೋದೆನು. ನಾನು ಬಹಳ ಬಲವುಳ್ಳವನು. ನಿಮ್ಮ ಹೆಸರೇನು, ಮೇಡಮ್?

ಕಾಮೆಲಿಯಾ: ನಾನು ಕಾಮೆಲಿಯಾ. ಮತ್ತು ನೀವು ಯಾರು ಸರ್?

ಕಾಮೆಲೊಟ್: ಕಾಮೆಲೊಟ್, ಓಟದ ಸ್ಪರ್ಧೆಗೆ ಸಿದ್ಧನಾಗಿದ್ದೇನೆ! ನಾನು ಒಂದು ವರ್ಷದಿಂದ ಅಭ್ಯಾಸ ಮಾಡುತ್ತಾ ಇದ್ದೇನೆ: ಓಡುತ್ತಾ ಇದ್ದೇನೆ, ಓಡುತ್ತಾ ಇದ್ದೇನೆ, ಓಡುತ್ತಾ ಇದ್ದೇನೆ ಮತ್ತು ಓಡುತ್ತಾ ಇದ್ದೇನೆ (ಏದುಸಿರು!) ಮುಗ್ಗರಿಸಿ ಬೀಳುತ್ತಾ ಇದ್ದೇನೆ ಮತ್ತು ಓಡುತ್ತಾ ಇದ್ದೇನೆ, ಆಗಾಗ ಸ್ವಲ್ಪ ನೀರು ಕುಡಿಯುತ್ತೇನೆ ಮತ್ತು ಓಡುವದನ್ನೇ, ಓಡುವದನ್ನೇ ಕನಸು ಕಾಣುತ್ತಾ ಇರುತ್ತೇನೆ . . .

ಕಾಮೆಲಿಯಾ: ಆಹಾ, ಹಾಗಾದರೆ ನೀವು ಬಹಳ ಸಮಯದಿಂದ ಓಡುತ್ತಾ ಇದ್ದೀರಿ! ನಿಮ್ಮ ಬೆನ್ನ ಹಿಂದೆ ಏನಿದೆ?

ಕಾಮೆಲೊಟ್: ರೊಬೋಟ್ ಬಡ್ಡಿ ಮತ್ತು ನಾನು ಸಂಖ್ಯೆ 7, ನೋಡಿರಿ? ಆದರೆ ನನ್ನ ರೊಬೋಟ್ ಯಾಕೆ ನನ್ನ ಯಜಮಾನನ ಹಾಗೆ ನಡೆದುಕೊಳ್ಳುತ್ತದೆ ಎಂಬದು ನನಗೆ ಅರ್ಥವೇ ಆಗುತ್ತಾ ಇಲ್ಲ. ಓಟದ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ಕೆಲವು ದೊಡ್ಡ ಒಂಟೆಗಳು ಬಲಿಷ್ಠವಾಗಿರಲು ಮತ್ತು ವೇಗವಾಗಿ ಓಡಲು ಗುಳಿಗೆ ತೆಗೆದುಕೊಳ್ಳುವ ಬಗ್ಗೆ ಮಾತನಾಡುವದನ್ನು ನಾನು ಕೇಳಿಸಿಕೊಂಡೆನು. ಅದರ ಹೆಸರು . . . ಸ್ರೆಡಾಡಿಡ್? ಬ್ಲೆಫೋಡ್? ಜೆಫ್ಲಾಪೊಡ್? ಅನ್ನಿಸುತ್ತದೆ. (ಕಾಮೆಲೊಟ್ ಸ್ಟೆರಾಯ್ಡ್ ಪದವನ್ನು ತಪ್ಪಾಗಿ ಉಚ್ಚರಿಸಿದನು). ಸ್ವಲ್ಪ ಮೋಸ ಮಾಡಿದರೆ ಯಾರಿಗೂ ತೊಂದರೆ ಆಗುವದಿಲ್ಲ, ಅಲ್ಲವೇ? ನಾನೇನು ಸಿಕ್ಕಿಕೊಳ್ಳುವದಿಲ್ಲ . . . ನಾನು ತುಂಬಾ ವೇಗವಾಗಿ ಓಡುತ್ತೇನೆ, ಹಾಹ್ಹಾ!

ಕಾಮೆಲಿಯಾ: ಆದರೆ ಇದು ಇತರರಿಗೆ ಮಾಡುವ ಮೋಸವಾಗಿದೆ. ನಿಮ್ಮಿಂದಾಗುವ ಉತ್ತಮವಾದ ಕಾರ್ಯವನ್ನು ಮಾಡಿರಿ ಮತ್ತು ದೇವರಿಗೆ ವಿಧೇಯರಾಗುವ ಮೂಲಕ ಆತನಿಗೆ ಪ್ರಥಮ ಸ್ಥಾನವನ್ನು ಕೊಡಿರಿ ಹಾಗೂ ಇತರರಿಗೆ ಮೋಸ ಮಾಡಬೇಡಿರಿ. ನೀವು ಗೆಲ್ಲಬಹುದು ಅಥವಾ ಸೋಲಬಹುದು, ದೇವರು ನಿಮ್ಮ ಸಂಗಡ ಇರುವನು. ಇದು ಎಲ್ಲದಕ್ಕಿಂತಲೂ ದೊಡ್ಡ ಜಯ ಅಲ್ಲವೇ?

ಕಾಮೆಲೊಟ್: (ನಿಟ್ಟುಸಿರು) ನಿಮ್ಮ ಮಾತು ಸರಿ. ನಾನು ಓಟದ ಸ್ಪರ್ಧೆಯ ಪ್ರಾರಂಭದ ಗೆರೆಯ ಬಳಿಗೆ ಹೋದೆನು! (ವೇದಿಕೆಯಿಂದ ಹೊರಗೆ ಹೋಗುವಾಗ, ಜಾರಿ ಬೀಳುತ್ತದೆ) ಪರವಾಗಿಲ್ಲ ನನ್ಗೇನೂ ಆಗಿಲ್ಲ!

ಕಾಮೆಲಿಯಾ: ಎಲ್ಲವೂ ಸರಿಯಾಗಿರುತ್ತದೆ ಎಂದು ನಿರೀಕ್ಷಿಸುತ್ತೇನೆ! (ಕಾಮೆಲಿಯಾ ವೇದಿಕೆಯಿಂದ ತನ್ನ ಸ್ನೇಹಿತನಿಗಾಗಿ ಚಪ್ಪಾಳೆ ತಟ್ಟುತ್ತಿದ್ದಳು)

ಪ್ರಕಟಿಸುವವನು: ಇಗೋ ಅವರು ಹೊರಟಿದ್ದಾರೆ! ಸಂಖ್ಯೆ 3 ಮುಂದೆ ಹೋಗುತ್ತಿದ್ದಾನೆ, ಸಂಖ್ಯೆ 1 ಅವನ ಹಿಂದೆ ಇದ್ದಾನೆ. ಇಗೋ ಸಂಖ್ಯೆ 27 ಬರುತ್ತಿದ್ದಾನೆ! ಸಂಖ್ಯೆ 3 ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಕಷ್ಟಪಡುತ್ತಿದ್ದಾನೆ. ಇನ್ನೇನು 100 ಮೀಟರ್ ಅಂತರ ಮಾತ್ರವೇ ಇದೆ . . . ಸಂಖ್ಯೆ 27, ಸಂಖ್ಯೆ ಒಂದನ್ನು ದಾಟಿದ್ದಾನೆ . . . ಸಂಖ್ಯೆ 3 ಜಯದ ಗೆರೆಯನ್ನು ದಾಟಿದ್ದಾನೆ! ಅವನ ಹಿಂದೆ ಸಂಖ್ಯೆ 27 ಮತ್ತು ಸಂಖ್ಯೆ 1 ಬಂದಿದ್ದಾರೆ!

ಕಾಮೆಲೊಟ್ ಏದುಸಿರು ಬಿಡುತ್ತಾ ಬಂದನು.

ಕಾಮೆಲಿಯಾ: ನೀವೆಲ್ಲರೂ ಟ್ರಾಕ್ ಮೇಲೆ ವೇಗವಾಗಿ ಓಡುತ್ತಾ ಇದ್ದಿರಿ! ಅದನ್ನು ನೋಡುವದು ಅದ್ಭುತವಾಗಿತ್ತು. ಎಲ್ಲವೂ ಹೇಗೆ ನಡೆಯಿತು?

ಕಾಮೆಲೊಟ್: ನಾನು ಗೆಲುವಿನ ಸಮೀಪಕ್ಕೂ ಬರಲಿಲ್ಲ. ನಾನು ನಾಲ್ಕನೆಯವನಾಗಿ ಓಟವನ್ನು ಮುಗಿಸಿದೆನು.

ಪ್ರಕಟಿಸುವವನು: ಸ್ವಲ್ಪ ತಡೆಯಿರಿ! ಇಲ್ಲಿ ಸ್ವಲ್ಪ ಅಡಚಣೆಯಾಗಿದೆ ಯಾಕಂದರೆ ಕೆಲವು ಒಂಟೆಗಳು ತಮ್ಮ ಪ್ರದರ್ಶನಗಳು ಉತ್ತಮವಾಗಿರಲೆಂದು ಸಹಾಯಕಗಳನ್ನು ತೆಗೆದುಕೊಂಡಿದ್ದಾರೆಂಬ ವರದಿ ಬಂದಿದೆ. ಸಂಖ್ಯೆ 3, 27 ಮತ್ತು 1 ಅನರ್ಹರಾಗಿದ್ದಾರೆ! ಆದ್ದರಿಂದ ಸಂಖ್ಯೆ 7 ಅಧಿಕೃತವಾಗಿ ಜಯಶಾಲಿಯಾಗಿದ್ದಾನೆ!

ಕಾಮೆಲಿಯಾ: ಕಾಮೆಲೊಟ್, ನೀನೇ ಗೆದ್ದಿರುವೆ!

ಕಾಮೆಲೊಟ್: ಆಹಾ!! ದೇವರಿಗೆ ಸ್ತೋತ್ರ! ಕಾಮೆಲಿಯಾ, ನೀನು ಮಾಡಿದ ಸಹಾಯಕ್ಕಾಗಿ ಧನ್ಯವಾದಗಳು. ನಾನು ನನ್ನ ಯಥಾರ್ಥತೆಯನ್ನು ಬಿಟ್ಟುಬಿಡಬೇಕೆಂದಿದ್ದೆನು, ಆದರೆ ಈಗ ನಾನು ದೇವರಿಗೆ ಮೆಚ್ಚಿಕೆಯಾದ ರೀತಿಯಲ್ಲಿ ಓಡಿದ್ದರಿಂದ ಬಹಳ ಖುಷಿಯಾಗುತ್ತಿದೆ. ಅಬ್ಬಾ! ನನಗೆ ಬಹಳ ಬಾಯಾರಿಕೆಯಾಗಿದೆ! (ವೇದಿಕೆಯ ಹಿಂದೆ ತನ್ನ ಮೂಗನ್ನು ನೀರಿನೊಳಗೆ ಅದ್ದಿ ಒಂದು ಗುಟುಕು ನೀರು ಹೀರಿಕೊಂಡೀತು). ಅಬ್ಬಾ ಈ ವಾರಕ್ಕೆ ಇಷ್ಟು ನೀರು ಸಾಕು. ಈಗ ಸದ್ಯಕ್ಕೆ ನನಗೆ ಬಹಳ ಹಸಿವೆಯಾಗಿದೆ.

## ಮುಖ್ಯ ಪಾಠ 1

ಈ ವಿಬಿಎಸ್ ಗೆ ನಿಮೆಲ್ಲರಿಗೂ ಸ್ವಾಗತ, ಇಲ್ಲಿ ನಾವು ದೇವರಿಗಾಗಿ ಧೈರ್ಯಶಾಲಿಗಳಾಗಿರುವದು ಹೇಗೆ ಎಂಬದನ್ನು ಕಲಿತುಕೊಳ್ಳೋಣ! ಬಹಳ ವರ್ಷಗಳ ಹಿಂದೆ, ಇಸ್ರಾಯೇಲ್ಯರನ್ನು ಸೆರೆಹಿಡಿದು ಅರಸನಾದ ನೆಬೂಕದ್ನೇಚ್ಚರನು ಅವರನ್ನು ಬಾಬೆಲಿಗೆ ಕರೆದುಕೊಂಡು ಹೋದನು. ಎಂಥಾ ದುಃಖದ ಪರಿಸ್ಥಿತಿ! ದೇವಜನರು ಅನ್ಯದೇಶದಲ್ಲಿ ನಿಜವಾದ ದೇವರು ಯಾರೆಂದು ಗೊತ್ತಿರದ ಜನರ ಮಧ್ಯದಲ್ಲಿ ವಾಸಿಸುತ್ತಿದ್ದರು. ಅದೇ ಪ್ರಕಾರ, ನಿಜವಾದ ದೇವರು ಯಾರೆಂದು ಗೊತ್ತಿರದ ಅಥವಾ ಆತನ ಹಿಂಬಾಲಿಸಲು ಪ್ರಯತ್ನಿಸದ ಲೋಕದ ಜನರ ನಡುವೆ ಜೀವಿಸುತ್ತಾ ಇದ್ದೇವೆ. ಆದರೆ ದೇವರು ಬಾಬೆಲಿನಲ್ಲಿದ್ದ ಇಸ್ರಾಯೇಲ್ಯರೊಂದಿಗೆ ಇದ್ದನು ಮತ್ತು ಅದ್ಭುತವಾದ ಕಾರ್ಯಗಳನ್ನು ಮಾಡಿದನು; ಅದೇ ಪ್ರಕಾರ, ಆತನು ಭ್ರಷ್ಟವಾಗಿರುವ ಈ ಲೋಕದಲ್ಲಿ ಈಗ ನಮ್ಮೊಂದಿಗಿದ್ದಾನೆ. "ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ನೀವು ಶಾಲೆಯಲ್ಲಿ ಎಂದಾದರು ಯಾರ ಹೆಸರನ್ನಾದರೂ ಕರೆದಿದ್ದೀರೋ, ಅಥವಾ ಯಾರಾದರೂ ಹೆಸರುಗಳ ಕರೆಯುವದನ್ನು ನೋಡಿದ್ದೀರೋ? ನಿಮ್ಮ ಶಿಕ್ಷಕರು ಎಂದಾದರು ದೇವರಿಗೆ ವಿರುದ್ಧವಾದ ಕಾರ್ಯಗಳನ್ನು ನಿಮಗೆ ಕಲಿಸಿದ್ದಾರೋ? ಜನರು ಎಂದಾದರು ನಿಮ್ಮಿಂದ ಕೆಟ್ಟ ಕಾರ್ಯಗಳನ್ನು ಮಾಡಲು ಪ್ರಯತ್ನಿಸಿದ್ದಾರೋ? ಬಾಬೆಲಿನಲ್ಲಿ ಇಂಥ ಕಾರ್ಯಗಳೇ ನಡೆಯುತ್ತಿದ್ದವು.. ಅರಸನಾದ ನೆಬೂಕದ್ನೇಚ್ಚರನು ಇಸ್ರಾಯೇಲ್ಯರಲ್ಲಿ ಉತ್ತಮರಾದ ಯೌವನಸ್ಥರನ್ನು ಆರಿಸಿಕೊಂಡರು ಮತ್ತು ಅರಸನ ಸೇವೆಮಾಡುವದು ಹೇಗೆ ಎಂದು ಕಲಿತುಕೊಳ್ಳಲು ಅವರನ್ನು ಬಾಬೆಲಿನ ಯೂನಿವರ್ಸಿಟಿಗೆ ಸೇರಿಸಿದನು. ಹಾಗೆ ಆರಿಸಿಕೊಂಡವರಲ್ಲಿ ದಾನಿಯೇಲ, ಹನನ್ಯ, ಮಿಶಾಯೇಲ ಮತ್ತು ಅಜರ್ಯ ಇದ್ದರು. "ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ಅರಸನು ಅವರ ಹೆಸರುಗಳನ್ನು ಬದಲಾಯಿಸಿದನು, ಅವರಿಗೆ ದೇವರ ನಿಯಮಗಳಿಗಿಂತ ವ್ಯತ್ಯಾಸವಾದ ಆಲೋಚನೆಗಳನ್ನು ಕಲಿಸಿದನು, ಮತ್ತು ಅವರಿಗೆ ವ್ಯತ್ಯಸ್ಥವಾದ ಆಹಾರವನ್ನು ಕೊಟ್ಟನು. ಆ ಯೌವನಸ್ಥರು ತಮ್ಮ ಹೆಸರುಗಳನ್ನು ಬದಲಾಯಿಸಿದರೂ, ತಮಗೆ ಸಲಹೆಗಳನ್ನು ಕೊಡುತ್ತಿದ್ದವರ

ಮಾತುಗಳನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುತ್ತಿದ್ದರು, ಆದರೆ ಊಟದ ವಿಷಯದಲ್ಲಿ ಮಾತ್ರ ದೃಢವಾದ ತೀರ್ಮಾನ ತೆಗೆದುಕೊಂಡರು ಯಾಕಂದರೆ ಅದು ದೇವರ ವಾಕ್ಯಗಳಿಗೆ ನೇರವಾದ ಅವಿಧೇಯತೆಯಾಗಿತ್ತು. ಇದೇ ಪ್ರಕಾರ ಲೋಕವು ನಾವು ಸುಳ್ಳುಗಾರರು, ಮೋಸಗಾರರು, ಕಳ್ಳರು, ಇತರರ ಸಂಗಡ ಕೆಟ್ಟದಾಗಿ ನಡೆದುಕೊಳ್ಳುವವರು ಅಥವಾ ದೇವರನ್ನು ಬಿಟ್ಟು ವಸ್ತುಗಳನ್ನು ಆರಾಧಿಸುವವರನ್ನಾಗಿ ಮಾಡಲು ಪ್ರಯತ್ನಿಸುತ್ತದೆ. ನಾವು ಇವುಗಳನ್ನು ಯಾವ ಕಾರ್ಯಗಳನ್ನೂ ಮಾಡಬಾರದೆಂದು ದೇವರು ನಮಗೆ ಹೇಳಿದ್ದಾನೆ ಆದ್ದರಿಂದ ಲೋಕವು ನಮ್ಮ ಮೇಲೆ ಎಷ್ಟೋ ಒತ್ತಡಗಳನ್ನು ಹಾಕಿದರೂ ನಾವು ಆತನಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. "ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ದಾನಿಯೇಲನು ಬುದ್ಧಿವಂತನಾಗಿ ದೃಢವಾದ ತೀರ್ಮಾನ ತೆಗೆದುಕೊಂಡನು. ಅವನು ತಮ್ಮ ಮೇಲ್ವಿಚಾರಕನಿಗೆ ನೀನು ನಮಗೆ 10 ದಿನಗಳು ನಾವು ಹೇಳುವ ಆಹಾರವನ್ನು ಕೊಟ್ಟು ನೋಡು ಎಂದು ಹೇಳಿದನು. ಉತ್ತಮವಾದ ತೀರ್ಮಾನಗಳನ್ನು ತೆಗೆದುಕೊಂಡು ದೇವರಿಗೆ ವಿಧೇಯರಾಗಿ ನಡೆದುಕೊಳ್ಳಬೇಕೆಂದು ನೀವು ಬಯಸುವದಾದರೆ ದೇವರಿಂದ ಜ್ಞಾನವನ್ನು ಬೇಡಿಕೊಳ್ಳಬೇಕು. "ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ಕಾಲೇಜ್ ಮುಗಿಸಿದ ನಂತರ, ಈ ಯೌವನಸ್ಥರು ಅರಸನ ಸೇವೆಗೆ ಸೇರಿ, ಸರ್ಕಾರ ಮತ್ತು ಆಡಳಿತದಲ್ಲಿ ಕೆಲಸ ಮಾಡುವವರಾದರು. ಅವರು ತಮ್ಮ ಕೆಲಸವನ್ನು ಉತ್ತಮವಾಗಿ ನಿರ್ವಹಿಸಿದ ಕಾರಣ ಬಾಬೆಲ್ ರಾಜ್ಯದಲ್ಲಿ ಅವರನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದರಿಂದ ಅವರು ಜನರೆಲ್ಲರ ಹಿತಕ್ಕಾಗಿ ಮತ್ತಷ್ಟು ಉತ್ತಮ ಕಾರ್ಯಗಳನ್ನು ಮಾಡಿದರು. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ಆತನಲ್ಲಿ ನಂಬಿಕೆಯುಳ್ಳವರಾದ ನಾವು ಲೋಕಕ್ಕೆ ಬೆಳಕಾಗಿದ್ದೇವೆ. ಲೋಕದಲ್ಲಿ ದೇವರ ಬೆಳಕನ್ನು ಉತ್ತಮವಾಗಿ ತೋರಿಸಲು ಸಾಧ್ಯವಾಗುವ ಸ್ಥಳಕ್ಕೆ ದೇವರು ನಿಮ್ಮನ್ನು ಕಳುಹಿಸುವನು, ಅದು ರಾಜಕೀಯ, ವ್ಯಾಪಾರ, ಇಂಜನಿಯನಿಂಗ ಮತ್ತು ಟೆಕ್ನಾಜಲಿ, ವೈದ್ಯಕೀಯ, ಮನೆಯಲ್ಲಿ ಮಕ್ಕಳನ್ನು ಬೆಳೆಸುವದು, ಕ್ರೀಡೆ, ಸಭಾಪಾಲನ ಸೇವೆ, ನಿಯೋಗಗಳು, ಬೋಧನೆ ಅಥವಾ ಆಡಳಿತ ಕ್ಷೇತ್ರವಾಗಿರಬಹುದು. ಇತರರಿಗಾಗಿ ಲೋಕವನ್ನು ಉತ್ತಮಗೊಳಿಸುವ ಸಲುವಾಗಿ ದೇವರು ನಿಮ್ಮನ್ನು ಶಾಲೆಯಲ್ಲಿ, ಮನೆಯಲ್ಲಿ ಮತ್ತು ನಿಮ್ಮ ನೆರೆಹೊರೆಯಲ್ಲಿ ಉಪಯೋಗಿಸಿಕೊಳ್ಳಲು ಪ್ರಾರಂಭಿಸುವನು. ನೀವು ಏನೇ ಮಾಡುವವರಾದರೂ, ದೇವರಿಗೆ ಪ್ರಥಮ ಸ್ಥಾನವನ್ನು ಕೊಡಿರಿ ಮತ್ತು ಏನೇ ಆದರೂ ಆತನಿಗೆ ವಿಧೇಯರಾಗಿ ನಡೆದುಕೊಳ್ಳಿರಿ. "ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

# ರೊಟೇಷನ್ ಸ್ಟೇಷನ್ಸ್

## ಸಾಮ್ರಾಜ್ಯದಲ್ಲಿ ಕರಕುಶಲತೆ 1

### ಹೃದಯ





### ಸಾಮಗ್ರಿಗಳು


- ಕರ್ಲಿ ರಿಬ್ಬನ್, 50 cm
- ಪೇಪರ್ ಹೃದಯ
- ಸತ್ಯವೇದ ವಾಕ್ಯವಿರುವ ಬ್ಯಾನರ್
- ಗ್ಲೂ
- ಬಣ್ಣಗಳು


## ಸೂಚನೆಗಳು


- ಹೃದಯ ಮತ್ತು ಬಾವುಟವನ್ನು ಕತ್ತರಿಸಿರಿ. ನಿಮ್ಮ ಮೆಚ್ಚಿನ ಬಣ್ಣವನ್ನು ಅವುಗಳಿಗೆ ಹಚ್ಚಿರಿ.
- ನೇತಾಡುವಂತೆ ಮಾಡುವ ಸಲುವಾಗಿ ಹೃದಯದ ಹಿಂಭಾಗಕ್ಕೆ ರಿಬ್ಬನ್ ನ ಎರಡೂ ಮೂಲೆಗಳನ್ನು ಗ್ಲೂನಿಂದ ಅಂಟಿಸಿರಿ, ರಿಬ್ಬನ್ ಮಧ್ಯದಲ್ಲಿ ಬಾವುಟನ್ನು ಅಂಟಿಸಿರಿ.

## ಅರಮನೆಯಲ್ಲಿ ತರಗತಿ 1















| | |
|---|---|
| 5 | 1 |
| 14 | 4 |
| 6 | 7 |
| 12 | 11 |
| 8 | 13 |
| 9 | 2 |
| 10 | 3 |



## ಪ್ರಶ್ನೆಗಳು ಮತ್ತು ಉತ್ತರಗಳು 1

1. **“ಎಲ್ಲರೂ ಮಾಡುವದರಿಂದ” ಯಾವ ಕೆಟ್ಟ ಕಾರ್ಯಗಳು “ಸರಿ” ಎಂದು ಅನ್ನಿಸುತ್ತವೆ?**
   ಉದಾಹರಣೆಗಳು: ಕ್ಯಾಂಡಿ ಕದಿಯುವದು, ಕಸ ಎಸೆಯುವದು, ಶಿಕ್ಷೆ ತಪ್ಪಿಸಿಕೊಳ್ಳಲು ಸುಳ್ಳು ಹೇಳುವದು, ನೆರವೇರಿಸಲು ಆಗದ ವಾಗ್ದಾನಗಳನ್ನು ಮಾಡುವದು.
2. **ಅರಸನ ಆಸ್ಥಾನದ ಪ್ರಮುಖ ಅಧಿಕಾರಿಗಳು ಈ ಹುಡುಗರನ್ನು ಯಾಕೆ ಆರಿಸಿದರು? ಜನರು ಅವರಲ್ಲಿ ಗಮನಿಸಿದ್ದಕ್ಕಿಂತ ವಿಶೇಷವಾದ ಯಾವ ಸಂಗತಿಯನ್ನು ದೇವರು ಅವರಲ್ಲಿ ಗಮನಿಸಿದನು?**
   ಅವರು ಇಸ್ರಾಯೇಲ್ಯರಲ್ಲಿ ಉತ್ತಮರು ಮತ್ತು ಬುದ್ಧಿವಂತರು ಆಗಿದ್ದರು. ದಾನಿಯೇಲ 1:3-4. ಅವರು ದೇವರಿಗೆ ನಂಬಿಗಸ್ಥರಾಗಿರುವದು ದೇವರಿಗೆ ಗೊತ್ತಿತ್ತು. ಆತನೇ ಅವರಿಗೆ ವಿಶೇಷ ಸಾಮರ್ಥ್ಯಗಳನ್ನು ಕೊಟ್ಟಿದ್ದನು. ದಾನಿಯೇಲ 1:17
3. **ದೇವರು ನಿಮಗೆ ಏನು ಕೊಟ್ಟಿದ್ದಾನೆ?**
   ಉದಾಹರಣೆಗಳು: ಗಲಾ 5:22-23 ದೇವರಾತ್ಮನ ಫಲಗಳು, ತಲಾಂತುಗಳು, ಸಾಮರ್ಥ್ಯಗಳು, ಸ್ವಾಸ್ಥ್ಯ.
4. **“ದೇವರಿಗೆ ಪ್ರಥಮ ಸ್ಥಾನ ಕೊಡುವದು” ಅಂದರೆ ಏನು?**
   ಉದಾಹರಣೆಗಳು: ಅರಿಕೆ ಮತ್ತು ಪುನರ್ ಸ್ಥಾಪನೆ, ಇತರರೊಂದಿಗೆ ಸಂಧಾನ, ಸ್ನೇಹಿತರಿಗೆ ವಿಧೇಯರಾಗುವದಕ್ಕಿಂತ ದೇವರಿಗೆ ವಿಧೇಯರಾಗುವದು.
5. ಈ ಕಥೆಯಲ್ಲಿ ಬರುವ ಜನರು ಯಾರು?
   ಉತ್ತರ: ಅರಸನಾದ ನೆಬೂಕದ್ನೆಚ್ಚರನು, ದಾನಿಯೇಲ, ಹನನ್ಯ, ಮಿಶಾಯೇಲ ಮತ್ತು ಅಜರ್ಯ (ಅಥವಾ ಬೆಲ್ತಚ್ಚರನು, ಶದ್ರಕ್, ಮೇಷಕ್ ಮತ್ತು ಅಬೇದ್ನಗೊ)

## ಅಸೈನ್ಮೆಂಟ್ 1

ದೇವರಿಗೆ ವಿಧೇಯರಾಗಲು ಯಾವ ವಿಷಯದಲ್ಲಿ ನಿಮಗೆ ತೊಂದರೆಯಾಗುತ್ತಿದೆ ಎಂದು ಯೋಚಿಸಿರಿ. ದೇವರಿಂದ ಸಹಾಯವನ್ನು ಬೇಡಿಕೊಳ್ಳಿರಿ, ನಂತರ ದಿನವೆಲ್ಲಾ ಆತನಿಗೆ ವಿಧೇಯರಾಗಿ ನಡೆದುಕೊಳ್ಳಿರಿ.

## ದಾನಿಯೇಲನೊಂದಿಗೆ ನಾಟಕಗಳು 1

ಟೀಚರ್: ದೊಡ್ಡ ಸಾಮ್ರಾಜ್ಯದಲ್ಲಿ ಉನ್ನತ ಅಧಿಕಾರಿಯಾಗಿರುವ ದಾನಿಯೇಲನು ತನ್ನ ಜೀವನದ ಬಗ್ಗೆ ನಮ್ಮೊಂದಿಗೆ ಹಂಚಿಕೊಳ್ಳಲು ಬಿಡುವು ಮಾಡಿಕೊಂಡು ಬಂದಿರುವದು ಆಕರ್ಷಕ ವಿಷಯವಾಗಿದೆ. ಎಲ್ಲರೂ, ದಯವಿಟ್ಟು ದಾನಿಯೇಲನನ್ನು ಸ್ವಾಗತ ಮಾಡಿರಿ.

ದಾನಿಯೇಲ: ಎಲ್ಲರಿಗೂ ನಮಸ್ಕಾರ. ನಾನು ದಾನಿಯೇಲ, ನಿಮ್ಮನ್ನೆಲ್ಲಾ ನೋಡಿ ನನಗೆ ಬಹಳ ಖುಷಿಯಾಗುತ್ತಿದೆ. ತರಗತಿ ತುಂಬಾ ಇರುವ ವಿದ್ಯಾರ್ಥಿಗಳೊಂದಿಗೆ ನಮಗೆ ಸಂದರ್ಶನವಿದೆ ಎಂದು ನನ್ನ ಸಹಾಯಕನು ಹೇಳಿದಾಗ ನನಗೆ ಬಹಳ ಖುಷಿಯಾಯಿತು. ನಿಮ್ಮೆಲ್ಲರಿಗೆ ಬಹಳ ಸಾಮರ್ಥ್ಯವಿದೆ! ದೇವರು ನಿಮಗಾಗಿ ಎಂಥಾ ಅಧ್ಭುತ ಕಾರ್ಯಗಳನ್ನು ಯೋಚಿಸಿದ್ದಾನೆ ಎಂಬ ಆಲೋಚನೆ ನಿಮಗೆ ಇಲ್ಲ. ನನ್ನ ವಿಷಯದಲ್ಲಿ ದೇವರ ಆಲೋಚನೆ ಏನು ಎಂದು ನನಗೆ ಗೊತ್ತಿರಲಿಲ್ಲ. ಉದಾಹರಣೆಗೆ . . . ನಾನು ಯೌವನಸ್ಥನಾಗಿದ್ದಾಗ, ನಾನು ಮತ್ತು ನನ್ನ ಸ್ನೇಹಿತರು ಇಸ್ರಾಯೇಲಿನಲ್ಲಿದ್ದೆವು. ನಾವು ದೇವಜನರಾಗಿದ್ದೆವು, ಆದರೆ ಬಹುತೇಕ ಇಸ್ರಾಯೇಲ್ಯರು ಕೇಳಲು ಅಥವಾ ಮಾತನಾಡಲು ಅಥವಾ ಕೆಲಸ ಮಾಡಲು ಆಗದ ಸುಳ್ಳು ದೇವರುಗಳನ್ನು ಆರಾಧನೆ ಮಾಡುತ್ತಿದ್ದರು. ನಾನು ಗಣ್ಯ ಕುಟುಂಬದವನಾಗಿದ್ದೆನು ಮತ್ತು ನಮ್ಮ ಪೂರ್ವ ದಿಕ್ಕಿನಲ್ಲಿದ್ದ ಜನಾಂಗಗಳನ್ನು ಜಯಿಸುತ್ತಾ ಬರುತ್ತಿದ್ದ ಅರಸನಾದ ನೆಬೂಕದ್ನೆಚ್ಚರನ ಬಗ್ಗೆ ನಾವು ಕೇಳಿಸಿಕೊಳ್ಳುತ್ತಿದ್ದೆವು. ನಮ್ಮ ಸಮುದಾಯದ ಜನರು, “ನಮ್ಮನ್ನು ಜಯಿಸಲು ಯಾರಿಂದಲೂ ಆಗುವದಿಲ್ಲ” ಎಂದು ಹೇಳುತ್ತಲೇ ಇದ್ದರು. ನೀವು ಹೇಗೆ ಬೇಕಾದರೂ ಜೀವಿಸಬಹುದು, ಅವಿಧೇಯರಾಗಬಹುದು ಮತ್ತು ನಿಮಗಿಷ್ಟ ಬಂದ

ಕಾರ್ಯಗಳನ್ನು ಮಾಡಬಹುದು ದೇವರು ನಿಮ್ಮನ್ನು ಕಾಪಾಡುವನು ಎಂದು ಪ್ರವಾದಿಸುತ್ತಿದ್ದ ಸುಳ್ಳು ಪ್ರವಾದಿಗಳ ಮಾತುಗಳನ್ನು ಅವರು ಕೇಳುತ್ತಿದ್ದರು. ನೆಬೂಕದ್ನೇಚ್ಚರನು ನಮ್ಮನ್ನು ಜಯಿಸಿ, ಸೆರೆಯಾಗಿ ಒಯ್ಯುವನು ಎಂದು ಯೆರೆಮೀಯ ಮತ್ತು ಇತರರು ಹೇಳುತ್ತಿದ್ದರು. ನಾವು ಸಾಯುತ್ತೇವೆ ಅಥವಾ ದಾಸರಾಗುತ್ತೇವೆ ಎಂದು ನಾನು ಯೋಚಿಸುತ್ತಿದ್ದೆನು . . . ಹೀಗಿರುವಾಗ ಅವರು ನನ್ನನ್ನು ಮತ್ತು ನನ್ನ ಕೆಲವು ಸ್ನೇಹಿತರನ್ನು ಬಾಬೆಲಿನ ಯೂನಿವರ್ಸಿಟಿಗೆ ಕರೆದುಕೊಂಡು ಹೋದ ಸಮಯದಲ್ಲಿ ನಮಗೆಷ್ಟು ಆಶ್ಚರ್ಯವಾಗಿರಬಹುದು ಊಹಿಸಿರಿ! ನಾವು 3 ವರ್ಷಗಳ ಕಾಲ ತರಬೇತಿಯನ್ನು ಪಡೆದ ನಂತರ ಅರಸನ ಸೇವೆ ಮಾಡಬೇಕಾಗಿತ್ತು. ದೇವರು ನಮ್ಮನ್ನು ಯಾವುದೇ ಪರಿಸ್ಥಿತಿಯಲ್ಲಿ ಇಟ್ಟರೂ ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದು ನಾವು ತೀರ್ಮಾನಿಸಿದೆವು. ನಮಗೆ ಬಹಳ ಕಷ್ಟವಾಯಿತು, ಯಾಕಂದರೆ ದೇವರನ್ನು ಘನಪಡಿಸುವ ಅರ್ಥವಿದ್ದ ನಮ್ಮ ಹೆಸರುಗಳನ್ನು ಬದಲಿಸಿ, ಸುಳ್ಳು ದೇವರುಗಳನ್ನು ಘನಪಡಿಸುವ ಅರ್ಥವಿದ್ದ ಹೆಸರುಗಳನ್ನು ನಮಗೆ ಇಟ್ಟರು. ದಾನಿಯೇಲನೆಂಬ ನನಗೆ ಬೆಲ್ತೆಶೆಚ್ಚರ್ ಎಂದು ಹೆಸರಿಟ್ಟರು. ಪ್ರಾರಂಭದಲ್ಲಿ ಅದನ್ನು ಹೇಳಲೂ ಸಹ ನನಗೆ ಬರುತ್ತಿರಲಿಲ್ಲ. ಇದಲ್ಲದೆ ಶಾಲೆಯಲ್ಲಿ ಅನೇಕ ವ್ಯತಿರಿಕ್ತ ಸಂಪ್ರದಾಯಗಳನ್ನು ಪಾಲಿಸುತ್ತಿದ್ದರು. ಆದರೆ ನಮಗೆ ನಿಷಿದ್ಧವಾಗಿದ್ದ ಆಹಾರವನ್ನು ತಿನ್ನುವಂತೆ ಅವರು ನಮಗೆ ಹೇಳಿದಾಗ, ಅದು ಸರಿಯಲ್ಲ ಎಂದು ನಾವು ತೀರ್ಮಾನಿಸಿದೆವು. ಏನೇ ಆದರೂ

ದೇವರಿಗೆ ಪ್ರಥಮಸ್ಥಾನ ಕೊಡಲು ಮತ್ತು ನಮ್ಮೊಂದಿಗೆ ಯಾರೂ ಬಾರದಿದ್ದರೂ ಆತನಿಗೆ ಮಾತ್ರ ವಿಧೇಯರಾಗಬೇಕೆಂದು ತೀರ್ಮಾನಿಸಿಕಂಡೆವು. ನಮ್ಮನ್ನು ನೋಡಿಕೊಳ್ಳುತ್ತಿದ್ದವನು ನಮ್ಮ ಆಹಾರವನ್ನು ಬದಲಾಯಿಸಲು ಹೆದರಿಕೊಂಡನು. ಕೆಲವು ದಿನಗಳು ಪ್ರಯತ್ನಿಸುವಂತೆ ನಾನು ಮನವಿ ಮಾಡಿಕೊಂಡೆನು, ಅದು ಸಫಲವಾಯಿತು! ದೇವರು ನಮ್ಮ ಸಂಗಡ ಇದ್ದು ನಮಗೆ ಸಹಾಯ ಮಾಡಿದನು. ನಾವು ಇತರೆ ಯೌವನಸ್ಥರಿಗಿಂತಲೂ ಆರೋಗ್ಯವಾಗಿದ್ದೆವು ಮತ್ತು ಶಾಲೆಯಲ್ಲಿ ಅಗ್ರಸ್ಥಾನ ಪಡೆಯಲು ದೇವರು ನಮಗೆ ಸಹಾಯ ಮಾಡಿದನು. ಪದವಿ ಮುಗಿಸಿದ ನಂತರ, ಅರಸನು ನಮ್ಮನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳಲು ಸಂದರ್ಶನ ಮಾಡಿದನು. ನನ್ನ ಕುಟುಂಬದವರು ಇಸ್ರಾಯೇಲಿನ ಅರಸನನ್ನು ಭೇಟಿಮಾಡಲು ಹೋಗುವಾಗ ಅನೇಕ ನಿಯಮಗಳನ್ನು ಪಾಲಿಸಬೇಕಾಗಿದ್ದು ನನಗೆ ನೆನಪಾಯಿತು, ಆದರೆ ಬಾಬೆಲಿನ ನಿಯಮಗಳು ಕೊಂಚ ಭಿನ್ನವಾಗಿದ್ದವು. ನಂತರ ಅರಸನು ನಮ್ಮನ್ನು ತನ್ನ ಸೇವೆಗೆ ನೇಮಿಸಿಕೊಂಡನು ಮತ್ತು ಅಂದಿನಿಂದ ನಾವು ಆತನ ಸಾಮ್ರಾಜ್ಯದಲ್ಲಿ ಸೇವೆ ಮಾಡುತ್ತಾ ಇದ್ದೇವೆ.

ಟೀಚರ್: ಇಷ್ಟೆಲ್ಲಾ ಕಾರ್ಯಗಳು ನಿಮ್ಮ ಜೀವನದಲ್ಲಿ ಸಂಭವಿಸುವಾಗ ನೀವು ಬಾಬೆಲ್ ಸಾಮ್ರಾಜ್ಯದ ಉನ್ನತ ಅಧಿಕಾರಿಯಾಗುವಿರಿ ಎಂದು ನಿಮಗೆ ಅನ್ನಿಸಿತೇ?


ದಾನಿಯೇಲ: ಇಲ್ಲ, ಖಂಡಿತವಾಗಿಯೂ ಇಲ್ಲ. ಮಹಾನ್ ವ್ಯಕ್ತಿಯಾಗಲು ಪ್ರಯತ್ನಿಸಬೇಡಿರಿ ಬದಲಾಗಿ ದೇವರಿಗೆ ಪ್ರಥಮ ಸ್ಥಾನ ಕೊಡಲು ಗಮನ ಹರಿಸಿರಿ ಮತ್ತು ನೀವು ಮಾಡುವ ಕೆಲಸವನ್ನು ಶ್ರೇಷ್ಠವಾಗಿ ಯಥಾರ್ಥತೆಯಿಂದ ಮಾಡಿರಿ. ಜನರು ನಿಮ್ಮನ್ನು ಗಮನಿಸುವರು ಮತ್ತು ದೇವರೂ ಗಮನಿಸುವನು.

ಟೀಚರ್: ದಾನಿಯೇಲ್ ನೀವು ಬಂದದ್ದಕ್ಕೆ ಬಹಳ ಧನ್ಯವಾದಗಳು! ಬಾಬೆಲ್ ಸಾಮ್ರಾಜ್ಯದಲ್ಲಿ ನಿಮಗೆ ಬಹಳ ಕೆಲಸಗಳಿರುತ್ತವೆ ಎಂದು ನನಗೆ ಗೊತ್ತು. ನಾಳೆ ನಿಮ್ಮನ್ನು ಭೇಟಿಯಾಗುತ್ತೇವೆ.

## ಚಟುವಟಿಕೆ 1


ಆದ್ಯತೆಗಳು

ಪ್ರತಿಯೊಂದು ಮಗುವಿಗೆ ಒಂದೊಂದು ಹಾಳೆಯನ್ನು ಕೊಟ್ಟು ಕೆಳಗೆ ಕೊಡಲಾಗಿರುವ ಗೋಪುರದ ಚಿತ್ರವನ್ನು ನೋಡಿ ಅದನ್ನು ಬಿಡಿಸುವಂತೆ ಮತ್ತು ತಮ್ಮ ಜೀವನದ ಐದು ಆದ್ಯತೆಗಳನ್ನು ಅದರಲ್ಲಿ ಬರೆಯುವಂತೆ ಹೇಳಿರಿ. ಮೊದಲನೆಯದನ್ನು ಬರೆಯುವ ಮೊದಲು, ದೇವರಿಗೆ ಪ್ರಥಮ ಆದ್ಯತೆ ಕೊಡುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ. ಸತ್ಯವೇದವು ದೇವರ ಬಗ್ಗೆ ಏನು ಹೇಳುತ್ತದೆ ಎಂದು ಅವರಿಗೆ ಜ್ಞಾಪಕಪಡಿಸಿರಿ (ಆತನು ನಮ್ಮ ರಕ್ಷಕನು, ಮಾರ್ಗದರ್ಶಕನು, ಬಲ, ಆತನು ಒಳ್ಳೆಯವನು ಮತ್ತು ನಾವಿರುವ ಹಾಗೆಯೇ ನಮ್ಮನ್ನು ಪ್ರೀತಿಸುವವನು, ಇತ್ಯಾದಿ). ನಂತರ ಮಕ್ಕಳು ಬರೆಯುವದನ್ನು ಪ್ರಾರಂಭಿಸಬಹುದು ಮತ್ತು ತಮ್ಮ ಇತರೆ ಆದ್ಯತೆಗಳನ್ನು ಇತರರೊಂದಿಗೆ ಹಂಚಿಕೊಳ್ಳಬಹುದು.



## ರಾಜಮನೆತನದ ಔತಣ 1

### ಸಾಂಡ್ ವಿಚ್ ಕಿರೀಟ



ಸಾಮಗ್ರಿಗಳು:

- ಒಂದು ಲೋಫ್ ಬ್ರೆಡ್
- ಪೇಪರ್
- ಕತ್ತಿ
- ನಿಮ್ಮಿಷ್ಟದ ಪದಾರ್ಥ ತುಂಬಿಸಬಹುದು (ತರಕಾರಿಗಳು ಅಥವಾ ಜಾಮ್)

ಸೂಚನೆಗಳು:

1. ಪೇಪರ್ ನಿಂದ ಕಿರೀಟದ್ ಮೋಲ್ಡ್ ಮಾಡಿರಿ.
2. ಎರಡು ಪೀಸ್ ಬ್ರೆಡ್ ನಿಂದ ಸ್ಯಾಂಡ್ ವಿಚ್ ಮಾಡಿರಿ ಮತ್ತು ತುಂಬಿಸಿರಿ.
3. ಪೇಪರ್ ಕಿರೀಟದ ಮೋಲ್ಡ್ ಸ್ಯಾಂಡ್ ವಿಚ್ ಒಳಗೆ ಇಡಿರಿ ಮತ್ತು ಸ್ಯಾಂಡ್ ವಿಚ್ ಕತ್ತರಿಸಿರಿ.

**ಆಹಾ ಸಿದ್ಧವಾಯಿತು! ಈಗ ನೀವು ನಿಮ್ಮ ಮೊದಲ ರಾಜಮೆತನದ ಔತಣದ ಭೋಜನವನ್ನು ಸವಿಯಬಹುದು!**

## ತೋಟದ ಆಟಗಳು 1

### ಲೋಕದ ಬೆಳಕಾಗಿರುವದು



ತರಗತಿಯನ್ನು ಎರಡು ತಂಡಗಳಾಗಿ ವಿಭಾಗಿಸಿರಿ. ದೀಪವನ್ನು ಹಚ್ಚಿಸಿ ಅದರ ಬೆಳಕು ಹೊರಗೆ ಕಾಣದಂತೆ ಮಂದವಾದ ವಸ್ತುವಿನಿಂದ ಅದನ್ನು ಮುಚ್ಚಿರಿ (ಬೆಂಕಿ ಅವಘಡ ಸಂಭವಿಸದಂತೆ ಎಚ್ಚರವಹಿಸಿರಿ). ನಂತರ ಕೋಣೆಯ ಪ್ರಮುಖ ದೀಪವನ್ನು ಆರಿಸಿರಿ ಮತ್ತು ಪ್ರತಿಯೊಂದು ತಂಡದ ಮಕ್ಕಳಿಗೆ ಬೆಳಕನ್ನು ಹುಡುಕಲು ಹೇಳಿರಿ. ಇತರೆ ಮಕ್ಕಳಿಗೂ ಆಡುವ ಅವಕಾಶವನ್ನು ಒದಗಿಸಲು ಇದೇ ಆಟವನ್ನು ಮತ್ತೆಮತ್ತೆ ಆಡಿಸಿರಿ. ನಾವು ಲೋಕಕ್ಕೆ ಬೆಳಕಾಗಿದ್ದೇವೆ, ನಾವು ಆ ಬೆಳಕನ್ನು ಮರೆಮಾಡಬಾರದು ಬದಲಾಗಿ ಎಲ್ಲಾ ಪರಿಸ್ಥಿತಿಗಳಲ್ಲಿಯೂ ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವದನ್ನು ಮುಂದುವರೆಸಬೇಕು ಎಂದು ಯೇಸು ಕ್ರಿಸ್ತನು ಹೇಳಿರುವದನ್ನು ಅವರಿಗೆ ವಿವರಿಸಿರಿ. ನಾವು ದೇವರಿಗಾಗಿ ಧೈರ್ಯಶಾಲಿಗಳಾಗಿರಬೇಕು!

### ಒಂಟೆ ಹೇಳುವದೇನೆಂದರೆ . . .



ಟೀಚರ್ ಅಥವಾ ಮಕ್ಕಳು ಸರದಿಯ ಪ್ರಕಾರ "ಒಂಟೆಯಾಗಬೇಕು." ಆ ವ್ಯಕ್ತಿ ಎಲ್ಲರನ್ನು ಆಕ್ಷನ್ ನಲ್ಲಿ ಮುನ್ನಡೆಸಬೇಕು, ಉದಾಹರಣೆಗೆ, ತಿರುಗುವದು, ಒಂದು ಕಾಲಿನಲ್ಲಿ ಜಿಗಿಯುವದು, ಅಥವಾ ಒಂಟೆಯಂತೆ ಶಬ್ದ ಮಾಡುವದು. ಆಕ್ಷನ್ ಗೆ ಮೊದಲು "ಒಂಟೆ ಹೇಳುವದೇನೆಂದರೆ . . ." ಎಂದು ಆತನು ಹೇಳುವಾಗ, ಮಕ್ಕಳೆಲ್ಲರೂ ಆಕ್ಷನ್ ಮಾಡಬೇಕು ಅಥವಾ ಅವರು ಆಟದಿಂದ ಹೊರಗುಳಿಯುತ್ತಾರೆ. ಹಲವು ಮಕ್ಕಳಿಗೆ ಒಂಟೆಯಾಗುವ ಅವಕಾಶವನ್ನು ಕೊಡಿರಿ. ಹೆಚ್ಚು ತಮಾಷೆಯನ್ನಾಗಿಸುವ ಸಲುವಾಗಿ ಸೂಚನೆಗಳನ್ನು ವೇಗವಾಗಿ ಕೊಡಿರಿ.

## ಗಮನ ಸೆಳೆಯುವವರು/ಚಪ್ಪಾಳೆಗಳು 2

"ಧೈರ್ಯವು ದೇವರಲ್ಲಿ ಭರವಸೆಯನ್ನಿಡುತ್ತದೆ"

1. "ಧೈರ್ಯ" = ಮುಷ್ಠಿಯನ್ನು ಬಿಗಿಯಾಗಿ ಹಿಡಿಯಿರಿ ಮತ್ತು ಮುಷ್ಠಿ ಕುಲುಕುತ್ತಾ ಜೊತೆಗಾರನನ್ನು ಮಾಡಿಕೊಳ್ಳಿರಿ
2. "ಭರವಸೆಯಿಡುತ್ತದೆ" = ಮುಷ್ಠಿ ಹಿಡಿದು ಮತ್ತೊಮ್ಮೆ ಮೇಲೆ ಮತ್ತು ಕೆಳಗೆ ಕುಲುಕಿರಿ
3. "ದೇವರು" = ಎರಡೂ ಕೈಗಳಿಂದ ಆಕಾಶದ ಒಂದು ಕಡೆಯನ್ನು ತೋರಿಸಿರಿ

## ಕಂಠಪಾಠ ವಚನ 2

ಕೀರ್ತನೆಗಳು 47:2 "ಪರಾತ್ಪರನಾದ ಪ್ರಭುವು ಘನಗಂಭೀರನು ǀ ಪ್ರಪಂಚಕ್ಕೆಲ್ಲ ರಾಜಾಧಿರಾಜನು ǁ."

## ನಾಟಕ 2: ರಣರಂಗದಲ್ಲಿ ಒಂಟೆ

**ಕಾಮೆಲೊಟ್: (ವೇದಿಕೆಯ ಮೇಲೆ ಹಿಂದಕ್ಕೂ ಮುಂದಕ್ಕೂ ಸೇನೆಯ ನಡಿಗೆ ಮಾಡುತ್ತಿದ್ದಾನೆ) ಹುಟ್! 2,3,4, ಹುಟ್! 2,3,4....**

**ಕಾಮೆಲಿಯಾ: ಏನು ಮಾಡುತ್ತಿರುವೆ?**

**ಕಾಮೆಲೊಟ್: ನಾನು ಸೇನೆಯ ನಡಿಗೆ ಮಾಡುತ್ತಿದ್ದೇನೆ. ನೀನು ಇದಕ್ಕೂ ಮೊದಲು ಸೇನೆಯ ನಡಿಗೆ ನೋಡಿಲ್ಲವೇ?**

**ಕಾಮೆಲಿಯಾ: ನೀನು ಮಾಡುತ್ತಿರುವ ರೀತಿ ಸರಿಯಲ್ಲ.**

**ಕಾಮೆಲೊಟ್: ಇಂದು ಸೇನೆಗೆ ಒಂಟೆಗಳ ಹೊಸ ಘಟಕವನ್ನು ಆಯ್ಕೆ ಮಾಡುತ್ತಿದ್ದಾರೆ. ವೈರಿಗಳ ಕುದುರೆಗಳು ಖಂಡಿತವಾಗಿಯೂ ನಮ್ಮ ವಾಸನೆಯಿಂದ ಹೆದರಿಕೊಳ್ಳುತ್ತವೆ.**

**ಕಾಮೆಲಿಯಾ: ಅಯ್ಯೋ, ಇಲ್ಲ, ನಿನ್ನಿಂದ ಬಹಳ ವಾಸನೆ ಬರುತ್ತದೆ ಅವರು ನಿನ್ನನ್ನು ಆಯ್ಕೆ ಮಾಡುತ್ತಾರೆ!**

**ಕಾಮೆಲೊಟ್: ನನಗೆ ಗೊತ್ತು, ಆದರೆ ನಿಜವಾಗಿಯೂ ರಣರಂಗಕ್ಕೆ ಹೋಗಲು ನನಗೆ ಇಷ್ಟವಿಲ್ಲ. ನನ್ನ ದೇಶಕ್ಕೆ ಸಹಾಯ ಮಾಡಬೇಕೆಂಬ ಆಸೆ ನನಗೆ ಬಹಳ ಇದೆ, ಆದರೆ ಬೇರೆಯವರಿಗೆ ತೊಂದರೆ ಕೊಡಲು ನನಗೆ ಇಷ್ಟವಿಲ್ಲ. ಏನು ಮಾಡಬೇಕೆಂದೇ ನನಗೆ ತಿಳಿಯುತ್ತಿಲ್ಲ! ಸಹಜವಾಗಿ ಯೋಚಿಸಲೂ ಆಗುತ್ತಿಲ್ಲ.**

**ಕಾಮೆಲಿಯಾ: ಈಗೇನು ಮಾಡುವೆ?**

**ಕಾಮೆಲೊಟ್: ನಾನು ಹಾರುವ ಬಗ್ಗೆ ಯೋಚಿಸುತ್ತಿರುವೆ, ಆದರೆ ಎತ್ತರಕ್ಕೆ ಹೋಗಲು ಭಯವಾಗುತ್ತದೆ. ಆದರೂ, ನಾನು ಬಚ್ಚಿಟ್ಟುಕೊಂಡರೆ ಅವರಿಗೆ ಕಾಣಿಸುವದಿಲ್ಲ. (ವೇದಿಕೆಯ ಮೇಲಿರುವ ಪರದೆಯ ಹಿಂದೆ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತದೆ ಆದರೂ ಅದರ ತಲೆ ಮತ್ತು ಕಿವಿಗಳು ಕಾಣಿಸುತ್ತಿರುತ್ತದೆ).**

**ಕಾಮೆಲಿಯಾ: ಅಯ್ಯೋ,,,, ನನಗೆ ನೀನು ಕಾಣಿಸುತ್ತಿರುವೆ.**

**ಕಾಮೆಲೊಟ್: ಆಹಾ! ನಿನಗೆ ಎಕ್ಸ್ ರೇ ಕಣ್ಣುಗಳಿವೆ ಅನ್ನಿಸುತ್ತದೆ. ನಾನು ನವಿಲಿನಂತೆ ವೇಷ ಬದಲಾಯಿಸಿಕೊಳ್ಳುತ್ತೇನೆ. (ಕಾಮೆಲೊಟ್ ಹಿಂದೆ ಬೀಸಣಿಗೆಯನ್ನು ಹಿಡಿದುಕೊಳ್ಳಿರಿ)**

**ಕಾಮೆಲಿಯಾ: ಆಹಾ, ಉದ್ದ ಕೂದಲಿನ ಅಸಹ್ಯವಾದ ನವಿಲು.**

**ಕಾಮೆಲೊಟ್: ಏಯ್! ನವಿಲುಗಳ ಬಗ್ಗೆ ಹಾಗೆ ಹೇಳುವದು ಒಳ್ಳೇದಲ್ಲ! ಇದರಿಂದಲೂ ಯಾವುದೇ ಪ್ರಯೋಜನವಿಲ್ಲ ಅನ್ನಿಸುತ್ತದೆ. ಇದರಿಂದ ಹೊರಬರಲು ದಾರಿಯೇ ಕಾಣಿಸುತ್ತಿಲ್ಲವಲ್ಲ.**

ಕಾಮೆಲಿಯಾ: ನೀನು ಪ್ರಾರ್ಥನೆ ಮಾಡಿ ದೇವರ ಸಹಾಯ ಬೇಡಿಕೊಳ್ಳಬಹುದು! ನಮಗೆ ಯಾವುದೇ ದಾರಿ ಕಾಣಿಸದಿದ್ದರೂ ಆತನು ದಾರಿ ತೋರಿಸುತ್ತಾನೆ.

ಕಾಮೆಲೊಟ್: ಪ್ರೀತಿಯ ದೇವರೇ, ದಯವಿಟ್ಟು ನನಗೆ ಸಹಾಯ ಮಾಡು, ನನ್ನನ್ನು ಕಾಪಾಡು! ಏನೇ ಆದರೂ, ನಾನು ನಿನ್ನಲ್ಲಿ ಭರವಸೆಯನ್ನಿಡುತ್ತೇನೆ. ಅಯ್ಯೋ ಸಮಯವಾಯಿತು. ನಾನು ಹೊರಡಬೇಕು. (ವೇದಿಕೆಯಿಂದ ಹೊರಗೆ ಹೋಗುತ್ತಾನೆ)

ಕಾಮೆಲಿಯಾ: ಹೌದು, ದೇವರೇ ದಯವಿಟ್ಟು ಸಹಾಯ ಮಾಡು.

ಪ್ರಕಟಿಸುವವನು: ಸ್ವಲ್ಪ ಸಮಯ ಗತಿಸುತ್ತದೆ . . .

ಕಾಮೆಲೊಟ್ ಪರದೆಯ ಮೇಲೆ ಬಂದನು: ಅಬ್ಬಾ ಇದು ಆಕರ್ಷಕವಾದ ರಣರಂಗವಾಗಿದೆ!

ಕಾಮೆಲಿಯಾ: ನೀನು ಯುದ್ಧಕ್ಕೆ ಹೋದೆಯಾ? ದೇವರು ನಿನ್ನನ್ನು ಅದರಿಂದ ತಪ್ಪಿಸುವನು ಎಂದು ನಾನು ನೆನೆಸಿದೆನು.

ಕಾಮೆಲೊಟ್: ಹೌದು, ನಾನೂ ಹಾಗೇ ನೆನೆಸಿದೆನು. ಆದರೆ ನಾನು ಬಹಳ ವಾಸನೆಯುಳ್ಳವನಾದ್ದರಿಂದ ಯಾರೂ ನನ್ನ ಹತ್ತಿರ ಬರುವದಿಲ್ಲ, ಆದ್ದರಿಂದ ಯಾರಿಗೂ ನನ್ನಿಂದ ತೊಂದರೆಯಾಗಲಿಲ್ಲ!

ಕಾಮೆಲಿಯಾ: (ನಗು ಬಂದರೂ ತಡೆಯಲು ಪ್ರಯತ್ನಿಸಿದಳು) ದಯವಿಟ್ಟು ಕ್ಷಮಿಸು. ಇದರಲ್ಲಿ ತಮಾಷೆ ಏನು ಇಲ್ಲ, ಆದರೆ ನಿನಗೆ ಸಹಾಯಕವಾದದ್ದು ಒಳ್ಳೇದಾಯಿತು!

ಕಾಮೆಲೊಟ್: ಕಾದಾಡಲು ಯಾರೂ ಹತ್ತಿರ ಬರಲಿಲ್ಲವಾದ್ದರಿಂದ, ನಾವು ಜನರನ್ನು ಕಾಪಾಡುತ್ತಾ ಸಾಗಿದೆವು. ಇಬ್ಬನು ಬಹಳ ಬಳಲಿಹೋಗಿದ್ದನು. ಮತ್ತೊಬ್ಬನು ಎಡವಿ ಬಿದ್ದು ಗಾಯ ಮಾಡಿಕೊಂಡದ್ದರಿಂದ ಅವನಿಗೆ ಹೊಲಿಗೆ ಹಾಕಬೇಕಾಯಿತು.

ಕಾಮೆಲಿಯಾ: ಅಯ್ಯೋ, ಪಾಪ. ನನ್ನ ಕಾಲುಗಳಿಗೆ ಗಾಯ ಮಾಡಿಕೊಳ್ಳುವದನ್ನು ಊಹಿಸಿಕೊಳ್ಳಲೂ ನನ್ನಿಂದ ಆಗುವದಿಲ್ಲ. ಸರಿ, ನೀನೇನು ಹಾಕಿಕೊಂಡಿರುವೆ?

ಕಾಮೆಲೊಟ್: ಜನರನ್ನು ಕಾಪಾಡಿದ್ದಕ್ಕಾಗಿ ಅವರು ನನಗೆ ಪದಕವನ್ನು ಕೊಟ್ಟರು. ಹೇಗೋ, ಯುದ್ಧ ಮುಗಿಯಿತಲ್ಲ ಅದುವೇ ನನಗೆ ಸಂತೋಷ. ಊಟ ಚೆನ್ನಾಗಿತ್ತು, ಆದರೆ ಮನೆಯ ಊಟದಂತಿರಲಿಲ್ಲ. ತನಗೆ ಹಸಿವಾಗಿರುವದನ್ನು ಹೀಗೆ ತಿಳಿಸಿದನು.

## ಮುಖ್ಯ ಪಾಠ 2

ಈ ವಿಬಿಎಸ್ ಗೆ ಮತ್ತೊಮ್ಮೆ ಸ್ವಾಗತ, ಇಲ್ಲಿ ನಾವು ದೇವರಿಗೆ ಧೈರ್ಯವಾಗಿರುವದು ಹೇಗೆ ಎಂದು ಕಲಿತುಕೊಳ್ಳುತ್ತಾ ಇದ್ದೇವೆ. ಕಳೆದ ತರಗತಿಯಲ್ಲಿ ಏನೇ ಆದರೂ ಚಿಂತಿಸದೆ ದೇವರಿಗೆ ವಿಧೇಯರಾಗುವದನ್ನು ಕಲಿತುಕೊಂಡೆವು. ಅಂಥ ದೃಢವಾದ ತೀರ್ಮಾನ ತೆಗೆದುಕೊಳ್ಳುವಾಗ ಏನಾಗುತ್ತದೆ ಎಂದು ಇಂದು ಕಲಿತುಕೊಳ್ಳೋಣ. ಅರಸನಾದ ನೆಬೂಕದ್ನೇಚ್ಚರನು ಬಂಗಾರದ ದೊಡ್ಡ ಪ್ರತಿಮೆಯನ್ನು ಮಾಡಿಸಿದನು ಮತ್ತು ತನ್ನ ಅಧಿಕಾರಿಗಳಿಗೆ ನೀವು ಇದಕ್ಕೆ ಅಡ್ಡಬಿದ್ದು ಆರಾಧನೆ ಮಾಡಬೇಕು ಎಂದು ಹೇಳಿದನು. ದೇವರಾದರೋ ನೀವು ನನ್ನನ್ನೇ ಆರಾಧಿಸಿ, ಸೇವಿಸಬೇಕು ಎಂದು ಹೇಳಿದ್ದಾನೆ. ಮತ್ತೊಮ್ಮೆ, ನಮ್ಮ ಸ್ನೇಹಿತರಾದ ಶದ್ರಕ್, ಮೇಷಕ್ ಮತ್ತು ಅಬೇದ್ನೆಗೊ (ಅರಸನು ಅವರ ಹೆಸರುಗಳನ್ನು ಹನನ್ಯ, ಮೀಶಾಯೇಲ್ ಮತ್ತು ಅಜರ್ಯ) ದೃಢವಾದ ತೀರ್ಮಾನ ತೆಗೆದುಕೊಂಡರು ಮತ್ತು ದೇವರಿಗೆ ಅವಿಧೇಯರಾಗಲು ನಿರಾಕರಿಸಿಕೊಂಡರು. "ಧೈರ್ಯವು ದೇವರಲ್ಲಿ ಭರವಸೆಯನ್ನಿಡುತ್ತದೆ" ಎಂದು ಎಲ್ಲರೂ ಹೇಳಿರಿ.

ಒಂದುವೇಳೆ ನೀವು ಪ್ರತಿಮೆಯನ್ನು ಆರಾಧಿಸದೆ ಹೋದರೆ ನಿಮ್ಮನ್ನು ಉರಿಯುವ ಬೆಂಕಿ ಕುಂಡದೊಳಗೆ ಹಾಕುವೆನು ಎಂದು ಹೆದರಿಸುತ್ತಾ, ಅರಸನು ಅವರಿಗೆ ಕಡೆಯದಾಗಿ ಒಂದು ಅವಕಾಶವನ್ನು ಕೊಟ್ಟನು. ಅವರು ಹೇಳಿದ್ದೇನೆಂದರೆ, "ನಮ್ಮ ದೇವರು ನಮ್ಮನ್ನು ಕಾಪಾಡಲು ಶಕ್ತನಾಗಿದ್ದಾನೆ. ಒಂದುವೇಳೆ ಆತನು ನಮ್ಮನ್ನು ಕಾಪಾಡದೆ ಹೋದರೂ, ನಾವು ಪ್ರತಿಮೆಯನ್ನು ಆರಾಧಿಸುವದಿಲ್ಲ." ನಮ್ಮ ದೇವರು ಮಹೋನ್ನತನು, ಇಡೀ ಭ್ರಮಾಂಡದಲ್ಲಿ ಸರ್ವಶಕ್ತನು, ನಾವು ಆತನಿಗೆ ವಿಧೇಯರಾಗಬೇಕು. ಇದಲ್ಲದೆ ಭೂಲೋಕದಲ್ಲಿ ನಾವು ಆತನಿಗಾಗಿ ಮಾಡುವ ಎಲ್ಲಾ ಕಾರ್ಯಗಳಿಗಾಗಿ ಪರಲೋಕದಲ್ಲಿ ಬಹುಮಾನಗಳನ್ನು ಕೊಡುವದಾಗಿಯೂ ವಾಗ್ದಾನ ಮಾಡಿದ್ದಾನೆ. ನಾವು ದೇವರೊಬ್ಬನಿಗೆ ಮಾತ್ರವೇ ಹೆದರಬೇಕು, ಆದರೆ ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಆತನು ಎಲ್ಲದರಿಂದಲೂ, ಮುಖ್ಯವಾಗಿ ಮರಣದಿಂದಲೂ ಕಾಪಾಡಲು ಶಕ್ತನಾಗಿದ್ದಾನೆ! ಶದ್ರಕ್, ಮೇಷಕ್ ಮತ್ತು

ಅಬೆದ್ನಗೋ ಇದನ್ನು ಅರಿತುಕೊಂಡು, ಭೂಲೋಕದಲ್ಲಿ ಅಥವಾ ಪರಲೋಕದಲ್ಲಿ ದೇವರು ತನಗೆ ಸರಿತೋಚಿದ ಹಾಗೆ ತಮ್ಮನ್ನು ಕಾಪಾಡಲಿ ಎಂದು ಆತನಿಗೆ ಸಂಪೂರ್ಣವಾಗಿ ಒಪ್ಪಿಸಿದರು. "ಧೈರ್ಯವು ದೇವರಲ್ಲಿ ಭರವಸೆಯನ್ನಿಡುತ್ತದೆ" ಎಂದು ಎಲ್ಲರೂ ಹೇಳಿರಿ.

ಅರಸನಾದ ನೆಬೂಕದ್ನೇಚ್ಚರನು ಅತ್ಯಂತ ಕೋಪವುಳ್ಳವನಾಗಿ ಬೆಂಕಿಯ ಉರಿಯನ್ನು 7 ಪಟ್ಟು ಹೆಚ್ಚು ಮಾಡಿಸಿ ಶದ್ರಕ್, ಮೇಷಕ್ ಮತ್ತು ಅಬೆದ್ನಗೊರನ್ನು ಅದರೊಳಗೆ ಹಾಕಿಸಿದನು! ಅವರನ್ನು ಬೆಂಕಿಯ ಕುಂಡದೊಳಗೆ ಹಾಕುವ ಮೊದಲೇ ದೇವರು ಕಾಪಾಡಬೇಕಾಗಿತ್ತು ಎಂದು ಯೋಚಿಸಬಹುದು. ಕೆಲವೊಮ್ಮೆ ದೇವರು ನಮ್ಮ ಸಮಸ್ಯೆಗಳನ್ನು ಅತ್ಯಂತ ಸುಲಭವಾಗಿ ಅಂದರೆ ಶಾಲೆಯಲ್ಲಿ ಯಾರಾದರೂ ತೊಂದರೆ ಕೊಡುತ್ತಿದ್ದರೆ ಅವರಿಂದ ಕಾಪಡುವಂತೆ, ವಿದ್ಯಾಭ್ಯಾಸದಲ್ಲಿ ಎದುರಾಗುವ ಕಷ್ಟಗಳನ್ನು ಪರಿಹರಿಸುವಂತೆ ಪರಿಹರಿಸಬೇಕೆಂದು ಬಯಸುತ್ತೇವೆ. ಕೆಲವೊಮ್ಮೆ ಆತನು ತಾನಾಗಿಯೇ ಮಾಡುತ್ತಾನೆ, ಇನ್ನೂ ಕೆಲವೊಮ್ಮೆ ನಾವು ಆತನನ್ನು ಬೇಡಿಕೊಳ್ಳಬೇಕಾಗುತ್ತದೆ. ಈ ಕಥೆಯಲ್ಲಿ ಆತನು ಅವರನ್ನು ಬೆಂಕಿಯಿಂದ ತಪ್ಪಿಸಲಿಲ್ಲ, ಆದರೂ ಅವರು ಆತನಲ್ಲಿ ಭರವಸೆಯನ್ನಿಟ್ಟರು. ಮುಂದೇನಾಯಿತೆಂದು ನೋಡೋಣ! "ಧೈರ್ಯವು ದೇವರಲ್ಲಿ ಭರವಸೆಯನ್ನಿಡುತ್ತದೆ" ಎಂದು ಎಲ್ಲರೂ ಹೇಳಿರಿ.

ಬೆಂಕಿಯೊಳಗೆ ಬಿದ್ದ ಅವರಿಗೆ ಯಾವ ತೊಂದರೆಯೂ ಆಗಲಿಲ್ಲ, ಅಲ್ಲದೆ "ದೇವಕುಮಾರನಂತಿದ್ದ" ಒಬ್ಬನು ಅವರೊಂದಿಗೆ ಬೆಂಕಿಯೊಳಗೆ ನಡೆಯುವದನ್ನು ನೋಡಿದ ನೆಬೂಕದ್ನೇಚ್ಚರನು ಬೆರಗಾದನು. ದೇವರು ಅವರೊಂದಿಗೆ ಬೆಂಕಿಯೊಳಗಿದ್ದನು. ಇದೇ ಪ್ರಕಾರ ನೀವು ಕಷ್ಟದ ಪರಿಸ್ಥಿತಿಗಳಲ್ಲಿರುವಾಗ, ಅವುಗಳ ನಡುವೆ ದೇವರು ನಿಮ್ಮೊಂದಿಗೆ ಇರುವನು. ನಾನು ನಿಮ್ಮನ್ನು ಎಂದಿಗೂ ತೊರೆಯುವದಿಲ್ಲ ಕೈಬಿಡುವದಿಲ್ಲ ಎಂದು ದೇವರು ವಾಗ್ದಾನ ಮಾಡಿದ್ದಾನೆ. ನಿಜವಾಗಿ ಹೇಳುವದಾದರೆ, ದೇವರು ಅನುಕೂಲಕರವಾದ ಸಮಯಗಳಿಗಿಂತ ಹೆಚ್ಚಾಗಿ ಅನಾನುಕೂಲಕರವಾದ ಸಮಯಗಳಲ್ಲಿಯೇ ನಮಗೆ ಹತ್ತಿರವಾಗಿರುತ್ತಾನೆ ಮತ್ತು ನಮ್ಮ ಜೊತೆಯಲ್ಲಿರುತ್ತಾನೆ, ಹಾಗೂ ನಮ್ಮ ಜೀವಿತಗಳಲ್ಲಿ ತನ್ನ ಶಕ್ತಿಯನ್ನು ತೋರಿಸಲು ಅಂಥ ಸಮಯಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ದೇವರು ನಮ್ಮನ್ನು ಎಷ್ಟೊಂದು ಪ್ರೀತಿಸುತ್ತಾನೆ ನೋಡಿರಿ! "ಧೈರ್ಯವು ದೇವರಲ್ಲಿ ಭರವಸೆಯನ್ನಿಡುತ್ತದೆ" ಎಂದು ಎಲ್ಲರೂ ಹೇಳಿರಿ.

ಶದ್ರಕ್, ಮೇಷಕ್ ಮತ್ತು ಅಬೆದ್ನಗೋರವರು ಯಾವುದೇ ಹಾನಿಯಿಲ್ಲದೆ ಹೊರಬಂದರು, ಹೊಗೆಯ ವಾಸನೆಯೂ ಅವರ ಮೇಲೆ ಇರಲಿಲ್ಲ. ದೇವರ ಸಹಾಯದಿಂದ ಕಹಿತನ, ಕೋಪ, ಭಯ ಅಥವಾ ಹಗೆತನವಿಲ್ಲದೆ ದೇವರ ಪ್ರೀತಿ, ಸಂತೋಷ, ಸಮಾಧಾನ ಮತ್ತು ಕ್ಷಮಾಪಣೆಯಿಂದ ತುಂಬಿದವರಾಗಿ ಕಷ್ಟದ ಪರಿಸ್ಥಿತಿಯಿಂದ ಹೊರಗೆ ಬರುವರು. ನಮ್ಮ ದೇವರು ಮಹೋನ್ನತನಾದ ದೇವರು ಎಂಬದನ್ನು ಅರಸನಾದ ನೆಬೂಕದ್ನೇಚ್ಚರನು ತಿಳಿದುಕೊಂಡನು. ಒಂದುದಿನ ಯೇಸು ಕ್ರಿಸ್ತನು ಹಿಂದಿರುಗಿ ಬರುವನು ಮತ್ತು ಲೋಕದವರೆಲ್ಲರೂ ಯೇಸು ಕ್ರಿಸ್ತನ ಎದರಿನಲ್ಲಿ ಅಡ್ಡಬೀಳುವರು ಮತ್ತು ಆತನು ಇಡೀ ಭ್ರಮಾಂಡದ ಅರಸನೆಂದು ಅರಿಕೆ ಮಾಡುವರು.

ನಮ್ಮ ಪಾಪ, ದೇವರಿಗೆ ವಿರುದ್ಧವಾಗಿ ನಾವು ಮಾಡುವ ತಪ್ಪುಗಳೆಲ್ಲವೂ ನಮ್ಮನ್ನು ದೇವರಿಂದ ಬೇರ್ಪಡಿಸುವವು. ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಪ್ರಾಣಕೊಟ್ಟು ನಂತರ ಮೂರನೇ ದಿನದಲ್ಲಿ ಎದ್ದು ಬರುವ ಮೂಲಕ ಯೇಸು ಕ್ರಿಸ್ತನು ಕ್ರಯವನ್ನು ಪಾವತಿಸಿದ್ದಾನೆ. ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವವರೆಲ್ಲರೂ ಶಾಶ್ವತವಾಗಿ ರಕ್ಷಣೆ ಹೊಂದುವರು, ಆದರೆ ಭರವಸೆಯನ್ನಿಡದವರು ರಕ್ಷಣೆ ಹೊಂದುವದಿಲ್ಲ. ಇಂದೇ ನೀವು ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಟ್ಟು, ನಿಮ್ಮ ಪಾಪಗಳಿಂದ ನಿಮ್ಮನ್ನು ಕಾಪಾಡುವಂತೆ ಮತ್ತು ಶಾಶ್ವತವಾಗಿ ನಿಮ್ಮ ಜೀವನದ ಕರ್ತನಾಗಿರುವಂತೆ ಬೇಡಿಕೊಳ್ಳುವಿರೋ? ಪ್ರಾರ್ಥನೆ: "ಕರ್ತನಾದ ಯೇಸುವೇ, ನೀನು ಇಡೀ ಭ್ರಮಾಂಡದ ಅರಸನು ಎಂದು ನನಗೆ ಗೊತ್ತಿದೆ. ಯೇಸುವೇ, ದಯವಿಟ್ಟು ನನ್ನ ಪಾಪಗಳನ್ನು ಕ್ಷಮಿಸಿ, ನನ್ನ ಜೀವನದ ಕರ್ತನಾಗಿರುವೆಯಾ? ನನ್ನನ್ನು ಶಾಶ್ವತವಾಗಿ ಕಾಪಾಡಲು ನಾನು ನಿನ್ನಲ್ಲಿ ಭರವಸೆಯುಳ್ಳವನಾಗಿದ್ದೇನೆ."

## ಅರಮನೆಯಲ್ಲಿ ಕರಕುಶಲತೆ 2

### ಕುಲುಮೆ




ಸಾಮಗ್ರಿಗಳು


- ಪೇಪರ್ ಕುಲುಮೆಯ ರೂಪ
- ಪೇಪರ್ ಕುಲುಮೆಯ ಆಕಾರಗಳು
- ಬಣ್ಣಗಳು
- ಗ್ಲೂ

ಸೂಚನೆಗಳು


- ಬೆಂಕಿಯ ಕುಲುಮೆ ಮತ್ತು ಬೆಂಕಿಯನ್ನು ಕತ್ತರಿಸಿರಿ. ಕುಲುಮೆಯ ಮಧ್ಯಭಾಗದಲ್ಲಿರುವ ಬೆಂಕಿ ಮತ್ತು ಜನರಿಗೆ ಬಣ್ಣ ಹಚ್ಚಿರಿ (ಅದರೊಳಗಿದ್ದವರಿಗೆ ಯಾವುದೇ ತೊಂದರೆಯಾಗಿರಲಿಲ್ಲ ಎಂಬದನ್ನು ಮರೆಯಬೇಡಿರಿ).
- ಬೆಂಕಿಯ ಆಕಾರಗಳಿಗೆ ಆರೆಂಜ್, ಹಳದಿ ಮತ್ತು ಕೆಂಪು ಬಣ್ಣಗಳನ್ನು ಹಚ್ಚಿರಿ ಆಗ ಅದು ನಿಜವಾದ ಬೆಂಕಿಯಂತೆ ಕಾಣಿಸುವದು.
- ಬೆಂಕಿಯ ಚೂರುಗಳ ಅಂಚುಗಳನ್ನು ಮಡಚಿರಿ ಮತ್ತು ಅವುಗಳನ್ನು ಕುಲುಮೆಗೆ ಅಂಟಿಸ್ರಿ ಆಗ ಅವರು ಅವುಗಳನ್ನು ಬಾಗಲಿನ ಹಾಗೆ ತೆರೆಯಲು ಸಾಧ್ಯವಾಗುತ್ತದೆ.

## ಅರಮನೆಯಲ್ಲಿ ತರಗತಿ 2


















## ಅಸೈನ್ಮೆಂಟ್ 2

ಇಂದು ದೇವರು ನಿಮ್ಮ ಜೊತೆಯಿದ್ದಾರೆ ಎಂದು ನಿಮಗೆ ಅನ್ನಿಸುವ ಅಥವಾ ನೀವು ಯೋಚಿಸುವ ಯಾವುದಾದರು ಘಟನೆ ಇದೆಯೇ, ಒಂದುವೇಳೆ ಇರುವದಾದರೆ ಅದರ ಬಗ್ಗೆ ನಾಳೆ ಹೇಳಿರಿ.

## ಪ್ರಶ್ನೆಗಳು ಮತ್ತು ಉತ್ತರಗಳು 2

1. **ಅರಸನು ಮಾಡಿಸಿದ ಬಂಗಾರದ ಪ್ರತಿಮೆಯನ್ನು ಆರಾಧಿಸದವರಿಗೆ ಯಾವ ಶಿಕ್ಷೆಯನ್ನು ಕೊಡುವದಾಗಿತ್ತು?**
   ಅವರನ್ನು ಧಗಧಗನೆ ಉರಿಯುವ ಬೆಂಕಿಯ ಕುಲುಮೆಯೊಳಗೆ ಹಾಕುತ್ತಿದ್ದರು.
2. **ಒಂದುವೇಳೆ ದೇವರು ಕ್ರೈಸ್ತರನ್ನು ಕಷ್ಟದಿಂದ ಬಿಡಿಸದೆ ಹೋದರೆ, ಅದು ಏನನ್ನು ಸಾಬೀತುಪಡಿಸುತ್ತದೆ?**
   ಕೆಲವು ಸೂಕ್ತ ಉತ್ತರಗಳು: ನಂಬಿಕೆಯ ಪರೀಕ್ಷೆ, ರಕ್ಷಿಸುವ ತನ್ನ ಶಕ್ತಿಯನ್ನು ತೋರಿಸುವದು, ನಮ್ಮ ಸಮಸ್ಯೆಗಳ ನಡುವೆ ಆತನು ನಮ್ಮೊಂದಿಗಿರುವ ಅನುಭವ ನಮಗಾಗಲು, ನಮ್ಮ ನಂಬಿಕೆಯ ವಿಷಯದಲ್ಲಿ ಇತರರಿಗೆ ಸಾಕ್ಷಿಯಾಗಿರಲು.
3. **ದೇವರು ನಿಮ್ಮನ್ನು ಬಿಟ್ಟು ಹೋಗುವಂತೆ ಮಾಡುವ ಕಷ್ಟಗಳು ಯಾವುವು?**
   ಇಬ್ರಿ 13:5 "ನಾನು ನಿಮ್ಮನ್ನು ಎಂದಿಗೂ ತೊರೆಯುವದಿಲ್ಲ; ಕೈಬಿಡುವದಿಲ್ಲ."
   ಪಾಪವು ನಮ್ಮನ್ನು ದೇವರಿಂದ ದೂರಮಾಡುತ್ತದೆ, ಆದರೆ ಯೇಸು ಕ್ರಿಸ್ತನ ಮೂಲಕ ನಾವು ಆತನೊಂದಿಗೆ ಐಕ್ಯರಾಗುತ್ತೇವೆ. ನಮಗೆ ಎಂಥದ್ದೇ ಸಮಸ್ಯೆಗಳು ಎದುರಾದರೂ, ಎಲ್ಲಾ ಸಮಯಗಳಲ್ಲಿಯೂ ಆತನು ನಮ್ಮೊಂದಿಗಿರುವ ಅನುಭವ ನಮಗಾಗಬೇಕಾದರೆ, ನಾವು ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಬೇಕು.
4. **ಬೆಂಕಿಯ ಕುಲುಮೆಯೊಳಗೆ ಇದ್ದವರು ಯಾರು?**
   ಶದ್ರಕ್, ಮೇಷಕ್, ಅಬೇದ್ನಗೋ, ಮತ್ತು ದೇವರು = 4. ಅವರು ಸಿಂಹಗಳಾಗಿರಲಿಲ್ಲ.
5. **ನೀವು ಹೇಗೆ ರಕ್ಷಣೆ ಹೊಂದುವಿರಿ?**
   ನೀವು ಪ್ರಾರ್ಥನೆ ಮಾಡಬಹುದು: "ಕರ್ತನಾದ ಯೇಸುವೇ, ನೀನು ಇಡೀ ಬ್ರಹ್ಮಾಂಡದ ಅರಸನು ಎಂದು ನನಗೆ ಗೊತ್ತು. ಯೇಸುವೇ ದಯವಿಟ್ಟು ನನ್ನ ಪಾಪಗಳನ್ನು ಕ್ಷಮಿಸಿ ನನ್ನ ಜೀವನದ ಕರ್ತನಾಗಿರುವೆಯಾ? ನನ್ನನ್ನು ಶಾಶ್ವತವಾಗಿ ರಕ್ಷಿಸುವಂತೆ ನಾನು ನಿನ್ನಲ್ಲಿ ಭರವಸವುಳ್ಳವನಾಗಿದ್ದೇನೆ."

## ದಾನಿಯೇಲನೊಂದಿಗೆ ನಾಟಕಗಳು 2

**ಟೀಚರ್:** ದಾನಿಯೇಲ್ ನಿಮಗೆ ಮತ್ತೊಮ್ಮೆ ಸ್ವಾಗತ!

**ದಾನಿಯೇಲ:** ಮತ್ತೊಮ್ಮೆ ನಿಮ್ಮನ್ನು ನೋಡಲು ನನಗೆ ಸಂತೋಷವಾಗುತ್ತಿದೆ, ಮಹನಾದ ನಮ್ಮ ದೇವರು ನನ್ನ ಸ್ನೇಹಿತರಾದ ಶದ್ರಕ್, ಮೇಷಕ್ ಮತ್ತು ಅಬೇದ್ನೆಗೋರ ಜೀವಿತದಲ್ಲಿ ಮಾಡಿದ ಕಾರ್ಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಅರಸನಾದ ನೆಬೂಕದ್ನೇಚ್ಚರನು ದೊಡ್ಡ ಪ್ರತಿಮೆಯನ್ನು ಮಾಡಿಸಿ, ಅದರ ಪ್ರತಿಷ್ಠೆಯ ಸಮಯದಲ್ಲಿ ತನ್ನ ರಾಜ್ಯದ ಅಧಿಕಾರಿಗಳೆಲ್ಲರೂ ಅದನ್ನು ಆರಾಧಿಸಬೇಕೆಂದು ಆಜ್ಞಾಪಿಸಿದನು. ಪ್ರತಿಮೆಗಳಿಗೆ ನೋಡಲು ಅಥವಾ ಮಾತನಾಡಲು ಆಗುವದಿಲ್ಲವಾದ್ದರಿಂದ ಅವುಗಳು ದೇವರಲ್ಲ ಎಂದು ಜನರು ಅರಿತುಕೊಂಡರೆ ಎಷ್ಟೋ ಉತ್ತಮ. ಆದರೆ ಚರಿತ್ರೆಯಾದ್ಯಂತ ಜನರು ಸಣ್ಣಸಣ್ಣ ವಸ್ತುಗಳನ್ನೇ ಆರಾಧಿಸುತ್ತಾ ಬಂದಿದ್ದಾರೆ. ನನ್ನ ಸ್ನೇಹಿತರು ಪ್ರತಿಮೆಯನ್ನು ಆರಾಧಿಸಲು ನಿರಾಕರಿಸಿದರು. ಸಿಕ್ಕಿಕೊಳ್ಳುವದಿಲ್ಲ ಎಂದು ಅವರು ನಿರೀಕ್ಷಿಸಿದರು, ಆದರೆ ಕೆಲವರು ಅವರ ಬಗ್ಗೆ ಅರಸನಿಗೆ ತಿಳಿಸಿದರು. ನಾವು ನಮ್ಮ ಸುತ್ತಮುತ್ತಲಿನ ಜನರಿಗಿಂತಲೂ ವ್ಯತ್ಯಾಸವಾಗಿದ್ದೆವು, ಆದ್ದರಿಂದ ಅವರು ನಮ್ಮನ್ನು ಇಷ್ಟಪಡುತ್ತಾ ಇರಲಿಲ್ಲ ಮತ್ತು ಕೆಲವೊಮ್ಮೆ ನಮಗೆ ತೊಂದರೆ ಮಾಡಲು ಪ್ರಯತ್ನಿಸುತ್ತಿದ್ದರು. ನೀವು ಮಾಡುವ ಕಾರ್ಯಗಳನ್ನು ನಿಮ್ಮ ಸುತ್ತಮುತ್ತಲಿನಲ್ಲಿರುವ ಜನರು ಇಷ್ಟಪಡದಿದ್ದರೂ ಚಿಂತೆ ಮಾಡಬೇಡಿರಿ. ಮಕ್ಕಳು ಅಥವಾ ಯೌವನಸ್ಥರಾಗಿರುವ

ನೀವು ಯಾರ ಅಭಿಪ್ರಾಯಗಳಿಗೆ ಆದ್ಯತೆ ಕೊಡಬೇಕು ಎಂಬದನ್ನು ತೀರ್ಮಾನಿಸುವದು ಪ್ರಾಮುಖ್ಯವಾಗಿದೆ. ನೀವು ಯಾರೊಂದಿಗೆ ಸಮಯ ಕಳೆಯಬೇಕು ಎಂಬದನ್ನು ಬುದ್ಧಿವಂತಿಕೆಯಿಂದ ಆಯ್ಕೆ ಮಾಡಿಕೊಳ್ಳಿರಿ. ನಾನು ನನ್ನ ಸ್ನೇಹಿತರಾದ ಶದ್ರಕ್, ಮೇಷಕ್ ಮತ್ತು ಅಬೇದ್ನೆಗೊರಿಗಾಗಿ ದೇವರಿಗೆ ಸ್ತೋತ್ರ ಹೇಳುತ್ತೇನೆ. ನಾವು ಯಾವಾಗಲೂ ದೇವರನ್ನು ಹಿಂಬಾಲಿಸುವಂತೆ ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಿಕೊಂಡಿದ್ದೇವೆ ಮತ್ತು ಅವರ ಧೈರ್ಯವನ್ನು ನಾನು ನಿಜವಾಗಿಯೂ ಮೆಚ್ಚುವವನಾಗಿದ್ದೇನೆ. ಕೆಲವೊಮ್ಮೆ ಅವರಿಗೆ ನನ್ನ ಪ್ರೋತ್ಸಾಹದ ಅವಶ್ಯಕತೆ ಇರುತ್ತದೆ ಹಾಗೆಯೇ ನನಗೆ ಅವರ ಪ್ರೋತ್ಸಾಹದ ಅವಶ್ಯಕತೆ ಇರುತ್ತದೆ. ಅಂಥವರೊಂದಿಗೆ ಸ್ನೇಹ ಬೆಳೆಸಲು ಪ್ರಯತ್ನಿಸಿರಿ. ಅವರ ಸಿಕ್ಕಿಹಾಕಿಕೊಂಡರು ಮತ್ತು ಆದೇಶದ ಪ್ರಕಾರ ಅವರನ್ನು ಬೆಂಕಿಯ ಕುಲುಮೆಯೊಳಗೆ ಹಾಕಿದರು! ಅವರು ನಿರಾಕರಿಸಿ ದೇವರಲ್ಲಿ ಭರವಸೆಯಿಟ್ಟು ತಮ್ಮ ಜೀವಿತಗಳನ್ನು ಆತನಿಗೆ ಒಪ್ಪಿಸಿದಾಗ, ಅರಸನು ಕೋಪದಿಂದ ಬೆಂಕಿಯ ಉರಿಯನ್ನು ಬಹಳವಾಗಿ ಹೆಚ್ಚಿಸಿದನು ಆದ್ದರಿಂದ ನನ್ನ ಸ್ನೇಹಿತರನ್ನು ಕುಲುಮೆಯೊಳಗೆ ಹಾಕಿದವರೇ ಬೆಂಕಿಯ ಶಾಖದಿಂದ ಸತ್ತು ಹೋದರು.

ಆದರೆ ನನ್ನ ಸ್ನೇಹಿತರು ಬದುಕಿಕೊಂಡರು! ಅವರು ನನಗೆ ನಡೆದ ಘಟನೆಯನ್ನೆಲ್ಲಾ ಹೇಳಿದಾಗ ಬಹಳ ಆಶ್ಚರ್ಯವಾಯಿತು, ಯಾಕಂದರೆ ಅವರು ಇದ್ದ ಹಾಗೆಯೇ ಇದ್ದರು. ಅವರ ಮೇಲೆ ಹೊಗೆಯ ವಾಸನೆ ಇರಲಿಲ್ಲ, ಅವರ ತಲೆಕೂದಲಾಗಲಿ, ಬಟ್ಟೆಗಳಾಗಲಿ ಸುಟ್ಟು ಹೋಗಿರಲಿಲ್ಲ. ಅರಸನ ಮೇಲೆಯೂ ಇದು ದೊಡ್ಡ ಪ್ರಭಾವವನ್ನು ಬೀರಿತು. ಅವನು ನಮ್ಮ ದೇವರನ್ನು ಸ್ತುತಿಸಿದನು ಮತ್ತು ಉನ್ನತನಾಗಿರುವ ನಮ್ಮ ದೇವರೇ ಎಲ್ಲವುಗಳ ಮೇಲ್ವಿಚಾರನು ಎಂಬದನ್ನು ಮನವರಿಕೆ ಮಾಡಿಕೊಂಡನು. ಎಲ್ಲದಕ್ಕಿಂತ ಮುಖ್ಯ ವಿಷಯ ಏನೆಂದರೆ ಅವರೊಂದಿಗೆ ಬೆಂಕಿಯೊಳಗೆ ನಾಲ್ಕನೆಯವನೊಬ್ಬನು ಕಾಣಿಸಿಕೊಂಡನು. ಅರಸನು ನಾನು “ದೇವಕುಮಾರನನ್ನು” ನೋಡಿದೆನು ಎಂದು ಹೇಳಿದನು. ಅದು ದೇವದೂತನೋ ಅಥವಾ ಬೇರೆ ಯಾರೋ ನನಗೆ ಖಚಿತವಾಗಿ ಗೊತ್ತಿಲ್ಲ, ಆದರೆ ಖಂಡಿತವಾಗಿಯೂ ದೇವರು ಅವರ ಸಂಗಡ ಇದ್ದನು. ಆ ಸಂದರ್ಭ ಹೇಗಿತ್ತು ಎಂಬದನ್ನು ನೋಡಲು ನಾನು ಅಲ್ಲಿ ಇರಬೇಕಾಗಿತ್ತು ಎಂದು ನನಗೆ ಬಹಳವಾಗಿ ಅನ್ನಿಸುತ್ತಾ ಇತ್ತು. ಒಂದುದಿನ ಖಂಡಿತವಾಗಿಯೂ ನಾನು ಪರಲೋಕದಲ್ಲಿ ದೇವರನ್ನು ನೋಡುತ್ತೇನೆ. ಆದರೂ, ದೇವರಲ್ಲಿ ಭರವಸೆಯುಳ್ಳ ಧೈರ್ಯಶಾಲಿಗಳಾದ ನನ್ನ ಸ್ನೇಹಿತರ ವಿಷಯದಲ್ಲಿ ನಾನು ಸಂತೋಷವುಳ್ಳವನಾಗಿದ್ದೇನೆ. ದೇವರಿಗೆ ಸಮರ್ಪಣೆಯುಳ್ಳವರಾದ ನನ್ನ ಸ್ನೇಹಿತರನ್ನು ನೋಡುವಾಗ ಅರಸನು ಮತ್ತು ಉಳಿದವರೆಲ್ಲರೂ ಬಹಳ ಪ್ರಭಾವಿತರಾಗುತ್ತಿದ್ದರು. ಇದಲ್ಲದೆ ತಮ್ಮಲ್ಲಿ ಏನೋ ಇಲ್ಲ ಎಂಬ ಭಾವನೆಯೂ ಅವರಲ್ಲಿ ಬರುತ್ತಾ ಇತ್ತು. ಯಾರಿಗೆ ಗೊತ್ತು? ಅವರ ನಿಮಿತ್ತ ಕೆಲವರು ನಿಜ ದೇವರ ಕಡೆಗೆ ತಿರುಗಿಕೊಳ್ಳಬಹುದು ಮತ್ತು ಸಣ್ಣ ವಸ್ತುಗಳ ಆರಾಧನೆಯನ್ನು ನಿಲ್ಲಿಸಬಹುದು.

ಟೀಚರ್: ಒಂದುವೇಳೆ ದೇವರು ಅವರನ್ನು ಬೆಂಕಿಯ ಕುಲುಮೆಯೊಳಗಿಂದ ಕಾಪಾಡದೆ ಹೋಗಿದ್ದರೂ ಅವರಿಗೆ ತೊಂದರೆಯಿರಲಿಲ್ಲ ಎಂಬದು ಸತ್ಯವೇ?


ದಾನಿಯೇಲ: ಹೌದು, ನನ್ನ ಸ್ನೇಹಿತರು ದೇವರ ವಿಷಯದಲ್ಲಿ ಇಷ್ಟೊಂದು ಸಮರ್ಪಣೆಯುಳ್ಳವರಾಗಿದ್ದರು. ಒಂದುದಿನ ನಾವೆಲ್ಲರೂ ಪರಲೋಕದಲ್ಲಿ ದೇವರೊಂದಿಗೆ ಇರುವೆವು ಎಂಬದು ನಮಗೆ ಗೊತ್ತಿತ್ತು. ನಾನು ಅವರನ್ನು ಖಂಡಿತ ಕಳೆದುಕೊಳ್ಳುತ್ತಾ ಇದ್ದೆನು, ಆದರೆ ಮುಂದೊಂದು ದಿನ ಖಂಡಿತವಾಗಿಯೂ ಅವರನ್ನು ನೋಡುತ್ತಾ ಇದ್ದೆನು. ಆದರೆ ದೇವರು ಅವರನ್ನು ಈ ರೀತಿಯಾಗಿ ಕಾಪಾಡಲು ತೀರ್ಮಾನಿಸಿದನು, ಇದಲ್ಲದೆ ಬಾಬೆಲ್ ಸಾಮ್ರಾಜ್ಯದಲ್ಲಿರುವ ಯಾರೂ ನಮ್ಮ ದೇವರಿಗೆ ವಿರುದ್ಧವಾಗಿ ಮಾತನಾಡಬಾರದು ಎಂದು ಹೇಳಿದನು. ನಮ್ಮ ದೇವರು ದೊಡ್ಡವನು, ಜನರೆಲ್ಲರೂ ಆತನನ್ನು ಸ್ತುತಿಸುವರು.

ಟೀಚರ್: ಇಂದು ಮತ್ತೊಮ್ಮೆ ಬಂದದ್ದಕ್ಕಾಗಿ ಧನ್ಯವಾದಗಳು.

## ಚಟುವಟಿಕೆ 2

### ನಾನು ಭರವಸೆಯುಳ್ಳವನಾಗಿದ್ದೇನೆ

ಮಕ್ಕಳು ವೃತ್ತಾಕಾರವನ್ನು ಮಾಡಬೇಕು. ಒಬ್ಬ ವ್ಯಕ್ತಿ “ಹೊಸ ದಿನವನ್ನು ನೋಡುವಾಗ ನಾನು ದೇವರಲ್ಲಿ ಭರವಸೆಯಿಡುತ್ತೇನೆ” ಎಂದು ಹೇಳಲು ಪ್ರಾರಂಭಿಸಬೇಕು. ಇನ್ನೊಬ್ಬ ವ್ಯಕ್ತಿ “ಹೊಸ ದಿನ ಮತ್ತು ನನ್ನ ತಂದೆ ಖುಷಿಯಾಗಿರುವದನ್ನು ನೋಡುವಾಗ ನಾನು ದೇವರಲ್ಲಿ ಭರವಸೆಯಿಡುತ್ತೇನೆ” ಎಂದು ಹೇಳಲು ಪ್ರಾರಂಭಿಸಬೇಕು. ಪ್ರತಿಯೊಬ್ಬ ವ್ಯಕ್ತಿ ಪಟ್ಟಿಯಲ್ಲಿರುವದನ್ನು ಹೇಳಬೇಕು ನಂತರ ಮತ್ತೊಂದು ವಿಷಯವನ್ನು ಸೇರಿಸಬೇಕು. ನಿಮಗಿಂತ ಮೊದಲು ಜನರು ಏನು ಹೇಳಿದ್ದಾರೋ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂಬದೇ ಗುರಿಯಾಗಿರಬೇಕು.



ಒಂದುವೇಳೆ ಸಮಯ ಇರುವದಾದರೆ, ವಿರುದ್ಧವಾದವುಗಳನ್ನು ಹೇಳಿ ಮತ್ತೊಮ್ಮೆ ಆಡಿರಿ. “ನಾನು ಹೊಸ ದಿನವನ್ನು ನೋಡದೆ ಇರುವಾಗ, ಅಥವಾ ನನ್ನ ತಂದೆ ಖುಷಿಯಾಗಿರುವದನ್ನು ನೋಡದೆ ಇರುವಾಗ ನಾನು ದೇವರಲ್ಲಿ ಭರವಸೆಯಿಡುತ್ತೇನೆ.”

## ರಾಜಮನೆತನದ ಔತಣ 2

### ಹಣ್ಣಿನ ಬೆಂಕಿ



ಸಾಮಗ್ರಿಗಳು:

- ದ್ರಾಕ್ಷಿಹಣ್ಣು
- ಹಳದಿ ಅಥವಾ ಆರೆಂಜ್ ಹಣ್ಣು ಅಥವಾ ತರಕಾರಿ (ಮಾವಿನ ಹಣ್ಣು, ಪೈನ್ ಆಪಾಲ್ ಮತ್ತು / ಅಥವಾ ಕ್ಯಾರೆಟ್)
- ಪ್ರೆಟ್ಜೆಲ್ (ಅಥವಾ ಮರದಂತೆ ಕಾಣಿಸುವ ಕುರುಕುಲಾದ ಪದಾರ್ಥ)
- ಕತ್ತಿ
- ಪಾತ್ರೆ



ಸೂಚನೆಗಳು:

1. ಹಳದಿ ಹಣ್ಣುಗಳನ್ನು ಬೆಂಕಿ ಉರಿಯುವ ರೀತಿಯಲ್ಲಿ ಕತ್ತರಿಸಿರಿ.
2. ಕಲ್ಲುಗಳಂತೆ ಕಾಣಿಸಲು ಸುತ್ತಲೂ ದ್ರಾಕ್ಷಿಹಣ್ಣುಗಳನ್ನು ಇಡಿರಿ ಮತ್ತು ಅದರ ಮೇಲೆ ಹಣ್ಣುಗಳನ್ನು ಇಡಿರಿ.
3. ಮರದ ತುಂಡಗಳಂತೆ ಕಾಣಿಸುವ ಕುರುಕಲಾದ ಪದಾರ್ಥಗಳನ್ನು ಸೇರಿಸಿರಿ.

ಈಗ ಸಿದ್ಧವಾಗಿದೆ! ಸುಡದ ಬೆಂಕಿಯನ್ನು ನಾವು ಸೇವಿಸಬಹುದು!

ಅವರೊಂದಿಗೆ ಕುಲುಮೆಯೊಳಗೆ ದೇವರು ಇದ್ದ ಹಾಗೆಯೇ, ನಮ್ಮ ಕಷ್ಟದ ಪರಿಸ್ಥಿತಿಯಲ್ಲಿಯೂ ದೇವರು ನಮ್ಮೊಂದಿಗೆ ಇರುವನು . . . ಎಂಬದನ್ನು ಮರೆಯದೆ ಇರೋಣ!


## ತೋಟದ ಆಟಗಳು 2

### ಕ್ಯಾಮೆಲ್ ಡಾನ್ಸ್

ಮ್ಯೂಸಿಕ್ ಪ್ಲೇ ಮಾಡಿ ಮತ್ತು ಮಕ್ಕಳಿಗೆ ಒಂಟೆಗಳಂತೆ ಡಾನ್ಸ್ ಮಾಡಲು ಹೇಳಿರಿ. ಮಕ್ಕಳು ಮಾಡಲು ಸಹಾಯವಾಗುವ ಸಲುವಾಗಿ ನೀವು ಕ್ಯಾಮೆಲ್  ಡಾನ್ಸ್ ಮಾಡುವ ವೀಡಿಯೋ ಅವರಿಗೆ ತೋರಿಸಬಹುದು. ನೀವು ಮ್ಯೂಸಿಕ್ ನಿಲ್ಲಿಸುವಾಗ, ಮಕ್ಕಳೆಲ್ಲರೂ ಸ್ಥಬ್ತರಾಗಿ ನಿಲ್ಲಬೇಕು. ಮ್ಯೂಸಿಕ್ ನಿಂತ ಮೇಲೆಯೂ ಯಾರಾದರು ಡಾನ್ಸ್ ಮಾಡಿದರೆ ಅವರು ಆಟದಿಂದ ಹೊರಗೆ ಹೋಗಬೇಕು. ಮತ್ತೆ ಮ್ಯೂಸಿಕ್ ಪ್ಲೇ ಮಾಡಿರಿ ಮತ್ತು ಕಡೆಯಲ್ಲಿ ಒಬ್ಬನು ಮಾತ್ರವೇ ಉಳಿಯುವ ತನಕ ಆಟವನ್ನು ಮುಂದುವರೆಸಿರಿ.



ಹಗ್ಗಜಗ್ಗಾಟ . . .



ಈ ಆಟವನ್ನು ಆಡಿಸಲು ಮಕ್ಕಳ ಕೈಗಳಿಗೆ ತೊಂದರೆಯಾಗದಂಥ ಗಟ್ಟಿಯಾದ ಹಗ್ಗವಿರಬೇಕು. ಹಾಜರಿರುವ ಮಕ್ಕಳ ಸಂಖ್ಯೆಗನುಸಾರವಾಗಿ ತಂಡಗಳನ್ನು ಮಾಡೀರಿ (4 ಅಥವಾ 6 ತಂಡಗಳು). ಎರಡು ತಂಡಗಳು ಒಟ್ಟಿಗೆ ಆಡುತ್ತಾ, ನೆಲದ ಮೇಲೆ ಗುರುತಿಸಲಾಗಿರುವ ಗೆರೆಯ ಹಗ್ಗದ ಮಧ್ಯಭಾಗವನ್ನು ತಮ್ಮ ಕಡೆಗೆ ಎಳೆದುಕೊಳ್ಳಲು ಪ್ರಯತ್ನಿಸಬೇಕು. ಯಾವುದಾದರು ಒಂದು ತಂಡ ಗೆಲ್ಲುವ ತನಕ ಸ್ಪರ್ಧೆಯನ್ನು ನಡೆಸಿರಿ.

## ಗಮನ ಸೆಳೆಯುವವರು / ಚಪ್ಪಾಳೆಗಳು 3

"ಧೈರ್ಯವು ಸತ್ಯವನ್ನು ಹೇಳುತ್ತದೆ"

1. ಕೈಯನ್ನು ಮೈಕ್ ರೀತಿಯಲ್ಲಿ ಬಾಯ ಮುಂದೆ ಹಿಡಿದುಕೊಳ್ಳಿರಿ
2. "ಈಈಈಈಈಈಈ ಊಊಊಊಊಊಊ" ಎಂದು ಹೇಳುತ್ತಾ ತಲೆಯನ್ನು ಸುತ್ತಿರಿ
3. "ನಿಮಗಿದು ಕೇಳಿಸುತ್ತಿದೆಯೇ?" ಎಂದು ಹೇಳುತ್ತಾ ಕೈಗಳನ್ನು ಹಿಪ್ ಹಾಪ್ ರೀತಿ ಆಡಿಸಿರಿ

## ಕಂಠಪಾಠ ವಚನ 3

1 ಕೊರಿಂಥಿಯರಿಗೆ 13:6 "ನಲಿಯದು ಪ್ರೀತಿ ಅನೀತಿಯಲಿ ನಲಿಯದಿರದದು ಸತ್ಯದ ಜಯದಲಿ."

## ನಾಟಕ 3: ಕ್ಯಾಮೆಲ್ (ಒಂಟೆ) ಡ್ಯಾನ್ಸಿಂಗ್ 3

ಕಾಮೆಲಿಯಾ: ಕಾಮೆಲೊಟ್!! ಸಹಾಯ ಮಾಡು, ಕಾಮೆಲೋಟ್!!

ಕಾಮೆಲೊಟ್ ಆತುರದಿಂದ ವೇದಿಯ ಮೇಲೆ ಬರುತ್ತಾನೆ: ಯಾಕೆ!? ಏನಾಯಿತು?? ಜಿರಳೇನಾ? ಸಮುದ್ರದೊಳಗಿಂದ ಮೊಸಳೆ ಏನಾದರೂ ಬಂದಿದೆಯೇ? ಬೆಂಕಿ ಎಲ್ಲಿದೆ? ನಾನೇ ಅದನ್ನು ಆರಿಸುತ್ತೇನೆ! (ಆರಿಸಲು ಸಿದ್ಧವಾಗುತ್ತಾನೆ)

ಕಾಮೆಲಿಯಾ: ಇಲ್ಲ, ಇಲ್ಲ. ನನ್ನ ಡ್ಯಾನ್ಸಿಂಗ್ ಶೂಗಳನ್ನು ಹಾಕಿಕೊಳ್ಳಬೇಕು. (ಹುಡುಗಿಯರ ಕೆಲವು ಶೂಗಳು ಇರಲಿ)

ಕಾಮೆಲೊಟ್: ನಾನು ಯಾಕೆ ನಿನ್ನ ಶೂಗಳನ್ನು ಹಾಕಿಕೊಳ್ಳಬೇಕು?

ಕಾಮೆಲಿಯಾ: ಇಲ್ಲ, ನೀನಲ್ಲ. ನಾನು ಹಾಕಿಕೊಳ್ಳಬೇಕು! ನನ್ನ ಸಮಯ ಬಂದಿದೆ.

ಕಾಮೆಲೊಟ್: ನೀನು ಡಾನ್ಸ್ ಮಾಡಬೇಕಾ? ನೀನು ಹಾಡುಗಾರ್ತಿ ಅಥವಾ ವಾದ್ಯ ಬಾರಿಸುವವಳು ಎಂದು ನನಗೆ ಹೇಳಿದೆಯಲ್ಲವೇ?

ಕಾಮೆಲಿಯಾ: ನಾನು ಒಂಟೆಗಳ ನೃತ್ಯ ಸ್ಪರ್ಧೆಯಲ್ಲಿದ್ದೇನೆ! ನನಗೆ ಬಹಳ ಖುಷಿಯಾಗುತ್ತಿದೆ. ನನ್ನ ಬೆರಳುಗಳನ್ನು ವೇದಿಕೆಯ ಮೇಲೆ ತೋರಿಸುವದೇ ಕಷ್ಟದ ಕೆಲಸವಾಗಿದೆ.

ಕಾಮೆಲೊಟ್: ಹೌದಾ, ನಾನು ಪ್ರಯತ್ನಿಸುತ್ತೇನೆ ಇರು. (ಸ್ವಲ್ಪ ಮೇಲೆ ಕೆಳಗೆ ಕುಣಿಯುತ್ತದೆ, ನಂತರ ಜಾರಿ ವೇದಿಕೆಯ ಹಿಂದೆ ಬೀಳುತ್ತದೆ) ಅಯ್ಯೋ!

ಕಾಮೆಲಿಯಾ: ನೋಡು? ಇದು ಬಹಳ ಕಷ್ಟ! ಆದರೂ ನನಗೆ ಡಾನ್ಸ್ ಮಾಡಲು ಚೆನ್ನಾಗಿ ಬರುವ ಕಾರಣ ನಾನು ಇದನ್ನು ಮಾಡುವೆನು. ನಾನು ಅಭ್ಯಾಸ ಮಾಡುವ ಅವಶ್ಯಕತೆಯೂ ಇಲ್ಲ ಯಾಕಂದರೆ ನನಗೆ ಬಹಳ ಸಾಮರ್ಥ್ಯವಿದೆ. ನಾನಾಗಿಯೇ ಈ ಹಂತಕ್ಕೆ ಬಂದಿದ್ದೇನೆ.

ಕಾಮೆಲೊಟ್: ನೀನು ನಿನ್ನನ್ನು ಬಹಳವಾಗಿ ಹೆಚ್ಚಿಸಿಕೊಳ್ಳುವದು ಒಳ್ಳೇದಲ್ಲ.

ಕಾಮೆಲಿಯಾ: ಹೌದು ಆದರೆ ನಾನು ಹೇಳುವದು ನಿಜ!

ಕಾಮೆಲೊಟ್: ನಿಜ ಏನೆಂದರೆ ದೇವರು ನಿನಗೆ ಸಾಮರ್ಥ್ಯವನ್ನು ಕೊಟ್ಟಿದ್ದಾನೆ ಮತ್ತು ನೀನು ಅಭ್ಯಾಸ ಮಾಡಲು ಮತ್ತು ಇತರೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನುಭವ ಪಡೆದುಕೊಳ್ಳಲು ನಿನ್ನ ಯಜಮಾನನು ನಿನಗೆ ಸಹಾಯ ಮಾಡಿದ್ದಾನೆ.

ಕಾಮೆಲಿಯಾ: ನೀನು ನೋಡು, ನಾನು ಸುಲಭವಾಗಿ ಈ ಸ್ಪರ್ಧೆಯನ್ನು ಗೆಲ್ಲುತ್ತೇನೆ.

ಕಾಮೆಲೊಟ್: ನಾನು ಕೆಲವು ಟಿಶೂ ಮತ್ತು ಬ್ಯಾಂಡೇಜ್ ತರುತ್ತೇನೆ!

ಕಾಮೆಲಿಯಾ ಸಿಟ್ಟಿನಿಂದ ಹೊರಡುತ್ತಾಳೆ.

ಪ್ರಕಟಿಸುವವನು: ಸ್ಪರ್ಧೆಯ ನಂತರ . . .

ಕಾಮೆಲೊಟ್ ಗೊರಕೆ ಹೊಡೆಯುತ್ತಾ ನಿದ್ದೆ ಮಾಡುತ್ತಿದ್ದಾನೆ.

ಕಾಮೆಲಿಯಾ ಜೋರಾಗಿ ಅಳುತ್ತಾ ಬಂದಳು.

ಕಾಮೆಲೊಟ್: ಏನಾಯಿತು? (ಕಾಮೆಲಿಯಾಗೆ ಹ್ಯಾಂಡ್ ಕರ್ಚೀಪ್ ಕೊಡುತ್ತಾನೆ)

ಕಾಮೆಲಿಯಾ: (ಗೊಣ್ಣೆ ಒರಸಿಕೊಳ್ಳುತ್ತಾ, ಜೋರಾಗಿ ಅತ್ತಳು . . .) ನಾನು ಗೆಲ್ಲಲಿಲ್ಲ! ತೀರ್ಪುಗಾರರು ಮೋಸ ಮಾಡಿದರು. ನಾನೇ ಗೆಲ್ಲಬೇಕಾಗಿತ್ತು! ಆ ಒಂಟೆ ಎರಡು ಸಲ ಜಾರಿ ಬಿದ್ದಿತು! ನನ್ನ ಹೆಜ್ಜೆಗಳೆಲ್ಲವೂ ಸರಿಯಾಗಿದ್ದವು! ನಾನು ಕೇವಲ ಒಮ್ಮೆ, ಅಲ್ಲ 3, 4 (ನಗುತ್ತಾ) 7 ಸಲ ಮಾತ್ರವೇ ಜಾರಿದೆನು. ಆದರೂ ನಾನೇ ಗೆಲ್ಲಬೇಕಾಗಿತ್ತು!

ಕಾಮೆಲೊಟ್: ಅಂದರೆ ನೀನು 7 ಸಲ ಜಾರಿ ಬಿದ್ದ ನಂತರವೂ ಗೆಲ್ಲಬೇಕಾಗಿತ್ತಲ್ಲವೇ? ಹಾಗಿದ್ದರೆ 100 ಸಲ ಜಾರಿ ಬೀಳುವ ನಾನೂ ಗೆಲ್ಲುತ್ತೇನೆ!

ಕಾಮೆಲಿಯಾ: ಹೇ! ಅದು ಹಾಗಲ್ಲ ---- ನಾನು ಸರಿಯಾಗಿಯೇ --- ಇದು ಬೇರೆ. ನಿನ್ನ ಮಾತು ಸರಿ. ತೀರ್ಪುಗಾರರು ಮೋಸ ಮಾಡಿಲ್ಲ. ನಾನೇ ಸರಿಯಾಗಿ ಡಾನ್ಸ್ ಮಾಡದೆ ಸೋತು ಹೋದೆನು! (ಮತ್ತೆ ಜೋರಾಗಿ ಅತ್ತಳು)

ಕಾಮೆಲೊಟ್: ಕಾಮೆಲಿಯಾ ನೀನು ಅಳುತ್ತಿರುವದರಲ್ಲಿಯೇ ನಿನ್ನ ಗರ್ವ ಮತ್ತೆ ಕಾಣಿಸುತ್ತಿದೆ. ನಾವು ಮತ್ತೊಮ್ಮೆ ಸತ್ಯದ ಬಗ್ಗೆ ಯೋಚಿಸೋಣ.

ಕಾಮೆಲಿಯಾ: (ಸಂಕೋಚದಿಂದ) ನಿನ್ನ ಮಾತಿನ ಅರ್ಥ ಏನು?

ಕಾಮೆಲೊಟ್: ನನ್ನೊಂದಿಗೆ ಇದನ್ನು ಹೇಳು. ಸತ್ಯ ಏನೆಂದರೆ, ನಾನು ಯೇಸು ಕ್ರಿಸ್ತನಿಗೆ ಸೇರಿದ್ದೇನೆ. ದೇವರು ನನಗೆ ಸಾಮರ್ಥ್ಯಗಳನ್ನು ಕೊಡುವವನಾಗಿದ್ದಾನೆ. ಆತನೇ ನನಗೆ ಅವುಗಳನ್ನು ಕೊಟ್ಟಿದ್ದಾನೆ ಮತ್ತು ಆತನೇ ಅವುಗಳನ್ನು ಸುಲಭವಾಗಿ ತೆಗೆದುಕೊಳ್ಳುವವನಾಗಿದ್ದಾನೆ . . . ಆದರೆ ಅದರಿಂದ ನನ್ನ ಬೆಲೆ ಅಥವಾ ಆತನಿಗೆ ನನ್ನ ಮೇಲೆ ಇರುವ ಪ್ರೀತಿ ಬದಲಾಗುವದಿಲ್ಲ. ನಾನು ನಡೆದ ಘಟನೆಯನ್ನು ನೆನೆದು ದುಃಖಿಸುವದಿಲ್ಲ ಬದಲಾಗಿ ಅದರಿಂದ ಕಲಿತುಕೊಳ್ಳುವೆನು ಮತ್ತು ಮುಂದಿನ ಸಲ ಚೆನ್ನಾಗಿ ಮಾಡಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳುವೆನು. (ಕಾಮೆಲಿಯಾ ಕಾಮೆಲೊಟ್ ಹೇಳಿಕೊಟ್ಟಂತೆ ಇವುಗಳನ್ನು ಹೇಳಿದಳು)

ಕಾಮೆಲೊಟ್: ಈಗ ಸಮಾಧಾನವಾಯಿತೇ?

ಕಾಮೆಲಿಯಾ: ಹೌದು, ಈಗ ಪರವಾಗಿಲ್ಲ.

ಕಾಮೆಲೊಟ್: ಪರವಾಗಿಲ್ಲ, ಯಾಕಂದರೆ ನಾನು ಸ್ವಲ್ಪ ಮಲಗಿದ್ದೆ . . . ಆದರೆ ಈಗ . . . ನನಗೆ ಹಸಿವೆಯಾಗುತ್ತಿದೆ!

## ಮುಖ್ಯ ಪಾಠ 3

ಮತ್ತೊಮ್ಮೆ ಈ ವಿಬಿಎಸ್ ಗೆ ಸ್ವಾಗತ! ಧೈರ್ಯವು ದೇವರಿಗೆ ಪ್ರಥಮ ಸ್ಥಾನ ಕೊಡುತ್ತದೆ ಮತ್ತು ದೇವರಲ್ಲಿ ಭರವಸೆಯನ್ನಿಡುತ್ತದೆ ಎಂಬದನ್ನು ನೆನಪು ಮಾಡಿಕೊಳ್ಳಿರಿ. ಈಗ, “ಧೈರ್ಯವು ಸತ್ಯವನ್ನು ಹೇಳುತ್ತದೆ” ಎಂದು ಎಲ್ಲರೂ ಹೇಳಿರಿ.

ಅರಸನಾದ ನೆಬೂಕದ್ನೇಚ್ಚರನು ಮಬ್ಬಾದ ಮತ್ತು ಇಡೀ ಲೋಕದ ಬಗ್ಗೆ ಕಾಳಜಿಯಿದ್ದ ದೊಡ್ಡ ಮರದ ಕನಸು ಕಂಡನು. ನಂತರ ಆ ಮರವನ್ನು ಕಡಿಯಲಾಯಿತು ಮತ್ತು ದೂತನು ಅವನಿಗೆ ನೀನು ಹುಲ್ಲು ತಿನ್ನುವೆ ಹಾಗೂ ನಿನ್ನ ತಲೆ ಕೂದಲು ಮತ್ತು ಉಗುರುಗಳು ದೊಡ್ಡದಾಗಿ ಬೆಳೆಯುವವು ಎಂದು ಹೇಳಿದನು. ಅರಸನು ತನ್ನ ಕನಸಿನ ಅರ್ಥವನ್ನು ಹೇಳಲು ನಮ್ಮ ಸ್ನೇಹಿತನಾದ ದಾನಿಯೇಲನನ್ನು ಕರೆಸಿದನು, ಯಾಕಂದರೆ ದೇವರು ದಾನಿಯೇಲನೊಂದಿಗೆ ಇದ್ದಾನೆ ಎಂಬದು ಎಲ್ಲರಿಗೂ ಗೊತ್ತಿತ್ತು. ದೇವರು ದಾನಿಯೇಲನಿಗೆ ಕನಸಿನ ಅರ್ಥವನ್ನು ತಿಳಿಸಿದನು, ಕನಸಿನ ಅರ್ಥವೇನೆಂದರೆ ಅರಸನು ಹುಚ್ಚನಾಗುವನು ಮತ್ತು ತನ್ನನ್ನು ಪ್ರಾಣಿ ಎಂಬದಾಗಿ ಅಂದುಕೊಳ್ಳುವನು. ಲೋಕದ ಪ್ರಸಿದ್ಧ ಅರಸನ ಮುಂದೆ ನಿಂತು, ಅವರ ಕುರಿತಾಗಿಯೇ ಕೆಟ್ಟ ಸುದ್ದಿಯನ್ನು ತಿಳಿಸುವದು ಎಷ್ಟು ಭಯಂಕರ ಎಂಬದನ್ನು ಊಹಿಸಿಕೊಳ್ಳಿರಿ. ನೀವಾದರೆ ಏನು ಮಾಡುವಿರಿ? ನಿಮಗೆ ದಯೆ ದೊರಕುವ ರೀತಿ ಅರ್ಥವನ್ನು ಹೇಳುವಿರೋ ಅಥವಾ ಸತ್ಯವನ್ನೇ ಹೇಳುವಿರೋ? “ಧೈರ್ಯವು ಸತ್ಯವನ್ನು ಹೇಳುತ್ತದೆ” ಎಂದು ಎಲ್ಲರೂ ಹೇಳಿರಿ.

ದಾನಿಯೇಲನು ಅರಸನಿಗೆ ಕೆಟ್ಟ ಸುದ್ಧಿಯ ಕುರಿತಾದ ಸತ್ಯವನ್ನು ಹೇಳಿದನು. ಇದು ಮಾತ್ರವಲ್ಲ, ಅವನು ಗೌರವದಿಂದಲೇ ಅರಸನಿಗೆ ಶ್ಚಾತ್ತಾಪಪಡುವಂತೆ ಹೇಳಿದನು. ಯೇಸು ಕ್ರಿಸ್ತನು ಸಹ ಕೃಪೆ ಮತ್ತು ಸತ್ಯವುಳ್ಳವನಾಗಿ ಬಂದನು. ಆತನು ಜನರನ್ನು ಬಹಳವಾಗಿ ಪ್ರೀತಿಸುವವನಾದ್ದರಿಂದ ನಮ್ಮ ಪಾಪಗಳನ್ನು ನೇರವಾಗಿ ಹೇಳಿದನು ಮತ್ತು ಯಾವ ಪಾಪವೂ ಒಳ್ಳೆಯದೆಂದು ಎಂದೂ ಹೇಳಲಿಲ್ಲ. ನಂತರ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಡುವ ಮೂಲಕ ನಮ್ಮ ಪಾಪಗಳಿಗೆ ಕ್ರಯವನ್ನು ಪಾವತಿಸಿದನು ಮತ್ತು ಆತನನ್ನು ನಂಬುವಂತೆ ಹಾಗೂ

ಪಶ್ಚಾತ್ತಾಪಪಡುವಂತೆ ಮತ್ತು ನಾವು ಮಾಡುವ ಕಾರ್ಯಗಳನ್ನು ಬದಲಾಯಿಸಿಕೊಳ್ಳುವಂತೆ ನಮಗೆ ಹೇಳಿದ್ದಾನೆ. ಇದೇ ಪ್ರಕಾರ, ನಾವು ಪ್ರೀತಿಯಿಂದ ಇತರರಿಗೆ ಸತ್ಯವನ್ನು ಹೇಳಬೇಕು. "ಧೈರ್ಯವು ಸತ್ಯವನ್ನು ಹೇಳುತ್ತದೆ" ಎಂದು ಎಲ್ಲರೂ ಹೇಳಿರಿ.

ಒಂದು ವರ್ಷದ ನಂತರ, ಅರಸನು ತನ್ನ ಅರಮನೆಯನ್ನು ನೋಡಿ, ನಾನು ನನ್ನ ಶಕ್ತಿಯಿಂದ ನನಗಾಗಿ ಇದನ್ನು ಕಟ್ಟಿಸಿದ್ದೇನೆ ಎಂದು ಹೇಳಿದನು. ನಮಗೆ ಶಾಲೆಯಲ್ಲಿ ಒಳ್ಳೆಯ ಅಂಕಗಳು ಸಿಗುವಾಗ, ಜನರು ನಮ್ಮನ್ನು ಹೊಗಳುವಾಗ, ನಾವು ದೊಡ್ಡ ಮನೆಯಲ್ಲಿ ವಾಸಮಾಡುತ್ತಿದ್ದರೆ, ಚೆನ್ನಾಗಿ ಆಟ ಆಡುವವದಾದರೆ, ಅಥವಾ ಏನನ್ನಾದರೂ ಸಾಧಿಸಿದರೆ ಗರ್ವದ ಬಲೆಯೊಳಗೆ ಸುಲಭವಾಗಿ ಸಿಕ್ಕಿಕೊಳ್ಳುತ್ತೇವೆ. ನಾನೇ ಇದನ್ನೆಲ್ಲಾ ಮಾಡಿದ್ದೇನೆ ಎಂದು ಗರ್ವವು ಹೇಳುತ್ತದೆ, ಆದರೆ ಸತ್ಯವೇನೆಂದರೆ ದೇವರು ನಮಗೆ ಸಾಮರ್ಥ್ಯಗಳನ್ನು ಕೊಟ್ಟಿದ್ದಾನೆ. ನೀವು ಬಲಿಷ್ಠರು ಎಂದು ಗರ್ವವು ಯೋಚಿಸುತ್ತದೆ, ಆದರೆ ಸತ್ಯವೇನೆಂದರೆ ದೇವರು ನಿಮ್ಮ ಇಡೀ ಜೀವನಕ್ಕೆ ಮಾರ್ಗದರ್ಶನವನ್ನು ಕೊಡುತ್ತಾನೆ. ಯಶಸ್ಸು ನನಗೆ ಎಂದು ಗರ್ವವು ಯೋಚಿಸುತ್ತದೆ, ಆದರೆ ಸತ್ಯವೇನೆಂದರೆ ಅದು ದೇವರ ಮಹಿಮೆಗೆ ಮತ್ತು ಇತರರ ಪ್ರಯೋಜನಕ್ಕೆ ಆಗಿದೆ. "ಧೈರ್ಯವು ಸತ್ಯವನ್ನು ಹೇಳುತ್ತದೆ" ಎಂದು ಎಲ್ಲರೂ ಹೇಳಿರಿ.

ಅರಸನು ತನ್ನ ಗರ್ವದ ಮಾತುಗಳನ್ನು ಹೇಳಿದ ಕೂಡಲೇ, ಹುಚ್ಚನಾದನು! ಅವನು ಹೊರಗಡೆ ವಾಸಿಸುತ್ತಾ, ಹಸುವಿನ ಹಾಗೆ ಹುಲ್ಲು ತಿಂದನು ಮತ್ತು ಅವನ ತಲೆಯ ಕೂದಲು ಹಾಗೂ ಉಗುರುಗಳು ದೊಡ್ಡದಾಗಿ ಬೆಳೆದವು. ಬಹಳ ಸಮಯದ ನಂತರ, ಅರಸನು ಪರಲೋಕದ ಕಡೆಗೆ ನೋಡಿದನು ಮತ್ತು ಸತ್ಯವನ್ನು ಹೇಳಿದನು: ಎಲ್ಲಾ ಕಾಲಗಳಲ್ಲಿಯೂ ದೇವರೇ ಸಾರ್ವಭೌಮನು. ನಾವು ನಿಯಂತ್ರಣದಲ್ಲಿ ಇಲ್ಲ ಮತ್ತು ಜೀವನವು ನಮ್ಮ ಬಗ್ಗೆ ಹೇಳುವದಿಲ್ಲ ಎಂಬದನ್ನು ಒಪ್ಪಿಕೊಳ್ಳುವದು ಗಾಬರಿಪಡಿಸುವ ಸಂಗತಿಯಾಗಿದೆ. "ಧೈರ್ಯವು ಸತ್ಯವನ್ನು ಹೇಳುತ್ತದೆ" ಎಂದು ಎಲ್ಲರೂ ಹೇಳಿರಿ.

ಅರಸನು ದೇವರ ಶಕ್ತಿ ಮತ್ತು ಸಾರ್ವಭೌಮತ್ವವನ್ನು ಅರಿತುಕೊಂಡ ನಂತರ, ಅವನು ತನ್ನ ಅರಸುತನವನ್ನು ಪಡೆದುಕೊಂಡದ್ದು ಮಾತ್ರವಲ್ಲ, ಬದಲಾಗಿ ಅವನ ಸಾಮ್ರಾಜ್ಯವೂ ಬೆಳೆಯಿತು ಮತ್ತು ಅವನು ಮತ್ತಷ್ಟು ಶಕ್ತನಾದನು. ನಂತರ ಅರಸನು ಅದ್ಭುತವಾದ ಕಾರ್ಯವನ್ನು ಮಾಡಿದನು. ಭೂಮಿಯ ಮೇಲಿನ ಅತ್ಯಂತ ಶಕ್ತನಾದ ಅರಸನು ಭೂಮಿಯ ಮೇಲಿನ ಎಲ್ಲಾ ಜನರಿಗೆ ಪತ್ರವನ್ನು ಬರೆದನು ಮತ್ತು ತನ್ನ ಬಲಹೀನತೆಯ ಬಗೆಗಿನ ನಿಜವಾದ ಕಥೆಯನ್ನು ಬರೆದನು ಹಾಗೂ ನಮ್ಮ ಸರ್ವಶಕ್ತನಾದ ದೇವರನ್ನು ಸ್ತುತಿಸಿದನು! ದೇವರು ನಿಮ್ಮ ಜೀವನದಲ್ಲಿ ಏನನ್ನಾದರೂ ಮಾಡುವಾಗ, ಒಂದುವೇಳೆ ಸತ್ಯದಿಂದ ನಿಮಗೆ ತೊಂದರೆಯಾದರೂ ಅದನ್ನು ಎಲ್ಲರಿಗೂ ಹೇಳಿರಿ. ದೇವರಿಗೆ ನಾಮಕ್ಕೆ ಮಹಿಮೆಯಾಗುವದು ಮತ್ತು ಆತನು ನಿಮಗೆ ಶಾಶ್ವತವಾದ ಬಹುಮಾನವನ್ನು ಕೊಡುವನು, ಇದಲ್ಲದೆ ನಿಮ್ಮ ಕಥೆಯಿಂದ ಇತರರಿಗೂ ಪ್ರಯೋಜನವಾಗುವದು. ನಾವು ನಮ್ಮ ಸ್ವಂತ ಪ್ರಾಣಗಳನ್ನು ಪ್ರೀತಿಸುವದರಿಂದಲ್ಲ ಬದಲಾಗಿ ಯೇಸು ಕ್ರಿಸ್ತನ ರಕ್ತ ಮತ್ತು ನಮ್ಮ ಸಾಕ್ಷಿಯಿಂದ ವೈರಿಯನ್ನು ಜಯಿಸುತ್ತೇವೆ ಎಂದು ಪ್ರಕಟನೆ ಪುಸ್ತಕದಲ್ಲಿ ಹೇಳಲಾಗಿದೆ. ನಾವು ಸತ್ಯವನ್ನು ಹೇಳುವ ಮೂಲಕ ಗೆಲ್ಲುತ್ತೇವೆ. "ಧೈರ್ಯವು ಸತ್ಯವನ್ನು ಹೇಳುತ್ತದೆ" ಎಂದು ಎಲ್ಲರೂ ಹೇಳಿರಿ.

# ರೊಟೇಷನ್ ಸ್ಟೇಷನ್ಸ್

ಅರಮನೆಯಲ್ಲಿ ಕರಕುಶಲತೆ

## ಸಾಮ್ರಾಜ್ಯದಲ್ಲಿ ಕರಕುಶಲತೆ 3

### ಬಾಬೆಲಿನ ಟೋಪಿ



ಸಾಮಗ್ರಿಗಳು

- ಪೇಪರ್ ಮಾದರಿ
- ಬಣ್ಣಗಳು
- ಗ್ಲೂ


- ಕರ್ಲಿ ರಿಬ್ಬನ್, 50cm

**ಸೂಚನೆಗಳು**


- ಟೋಪಿಯ ಮಾದರಿಯನ್ನು ಕತ್ತರಿಸಿರಿ. ಅದಕ್ಕೆ ಬಣ್ಣ ಹಚ್ಚಿರಿ.
- ಚುಕ್ಕೆಗಳಿರುವ ಸಾಲುಗಳಿಗನುಸಾರ ಟೋಪಿಯನ್ನು ಮಡಚಿದರೆ ಅದು ಮೂರು ಪ್ರತ್ಯೇಕ ಭಾಗದಂತೆ ಕಾಣಿಸುವದು.
- ಕುತ್ತಿಗೆಗೆ ಕಟ್ಟುವ ಸಲುವಾಗಿ ಟೋಪಿಯ ಎರಡೂ ಕಡೆಗಳಲ್ಲಿ ಕರ್ಲಿ ರಿಬ್ಬನ್ ಕಟ್ಟಿರಿ.
- ಗ್ಲಿಟ್ಟರ್ ನಿಂದ ಅಲಂಕಾರ ಮಾಡಿರಿ.

## ಅರಮನೆಯಲ್ಲಿ ತರಗತಿ 3
















## ಪ್ರಶ್ನೆಗಳು ಮತ್ತು ಉತ್ತರಗಳು 3

1. ಅರಸನಾದ ನೆಬೂಕದ್ನೇಚ್ಚರನು ದಾನಿಯೇಲನಿಗೆ ತನ್ನ ಕನಸಿನ ಅರ್ಥವನ್ನು ಯಾಕೆ ಕೇಳಿದನು?
   ದೇವರು ದಾನಿಯೇಲನೊಂದಿಗಿದ್ದಾನೆ ಎಂದು ಎಲ್ಲರಿಗೂ ಗೊತ್ತಿತ್ತು. ದಾನಿಯೇಲನು ತಾನು ದೇವರಲ್ಲಿ ನಂಬಿಕೆಯುಳ್ಳವನೆಂದು ತೋರಿಸಿದನು.
2. ಅರಸನ ಕನಸಿಗೆ ಸಂತೋಷಕರವಾದ ಅರ್ಥವನ್ನು ಕೊಡುವ ರೀತಿಯಲ್ಲಿ ಇತರೆ ಸಲಹೆಗಾರರು ಆತನಿಗೆ ಏನು ಹೇಳಿರುತ್ತಿದ್ದರು?
   ಸಾಧ್ಯವಿರುವ ಉತ್ತರಗಳು: ಮರವು ಮಬ್ಬವು ಬರಮಾಡುವದು, ಉರಿಯುವ ಸೂರ್ಯ ಮತ್ತು ಕಷ್ಟಗಳಿಂದ ರಕ್ಷಣೆ, ಹುಲ್ಲು ತಿನ್ನುವದು ಡಯಟ್ ಮತ್ತು ಆರೋಗ್ಯವಾಗಿರುವದನ್ನು ಸೂಚಿಸುತ್ತದೆ. ಬೆರಳುಗಳಲ್ಲಿ ಉದ್ಧವಾದ ಉಗುರುಗಳನ್ನು ಬೆಳೆಸುವದು ಒತ್ತಡವಿಲ್ಲದಿರುವ ಜೀವನದ ಸೂಚನೆಯಾಗಿದೆ. ಕನಸು ಸೂಚಿಸುವ ಕೆಟ್ಟ ಸುದ್ದಿಯು ಬೇರೆಯವರಿಗೆ ಅನ್ವಯಿಸುತ್ತದೆ.
3. ದೇವರಿಂದ ವಿಷಯಗಳು ಪ್ರಕಟವಾಗುವಾಗ ನೀವು ಏನು ಮಾಡಬೇಕು?
   ವಿದ್ಯಾರ್ಥಿಗಳು ಕೊಡುವ ಉತ್ತರಗಳನ್ನು, ಸೂಚಿಸುವ ತಲಾಂತುಗಳು ಮತ್ತು ವ್ಯಕ್ತಿತ್ವ, ಸ್ವಾಸ್ಥ್ಯವನ್ನು ಅಂಗೀಕರಿಸಿಕೊಳ್ಳಬೇಕು.
4. ಅಂತ್ಯದಲ್ಲಿ ಅರಸನಿಗೆ ಏನು ಮನವರಿಕೆಯಾಯಿತು?
   ದೇವರು ಎಲ್ಲಾ ಕಾಲಗಳಲ್ಲಿಯೂ ಸಾರ್ವಭೌಮನು.
5. ಯಾವ ವಿಧದಲ್ಲಿ ದೇವರ ಶಕ್ತಿ ಮತ್ತು ಅಧಿಕಾರ ನಿಮ್ಮ ಸರ್ಕಾರದ ಆಡಳಿತಕ್ಕೆ ಸಮಾನವಾಗಿದೆ ಅಥವಾ ವ್ಯತ್ಯಾಸವಾಗಿದೆ?
   ಸೈನ್ಯದ ಮೇಲೆ ಅಧಿಕಾರ . . . ದೇವರು ದೂತರನ್ನು ಹೊಂದಿದ್ದಾನೆ, ಸರ್ಕಾರವು ಸೈನಿಕರನ್ನು ಹೊಂದಿದೆ. ನಾವು ಹಿಂಬಾಲಿಸುವ ಆಯ್ಕೆ ಮಾಡಿಕೊಳ್ಳಬಹುದು ಎಂದು ದೇವರು ಆಜ್ಞಾಪಿಸಿದ್ದಾನೆ. ಸರ್ಕಾರವು ನಾವು ಅನುಸರಿಸಬೇಕಾದ ನಿಯಮಗಳನ್ನು ತಾನೇ ರೂಪಿಸಿದೆ. ತಪ್ಪುಗಳು ಸಾಬೀತಾದರೆ, ಸರ್ಕಾರವು ಜನರನ್ನು ಶಿಕ್ಷಿಸುತ್ತದೆ, ಅಂದರೆ ಸೆರೆಮನೆಗೆ ಹಾಕುತ್ತದೆ; ನಾವು ಶಿಕ್ಷೆ ಅನುಭವಿಸಬಾರದೆಂಬ ಕಾರಣಕ್ಕೆ ನಮ್ಮ ಪಾಪಗಳಿಗೆ ಕ್ರಯ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸು ಕ್ರಿಸ್ತನನ್ನು ಕಳುಹಿಸಿದನು. ಸರ್ಕಾರಗಳು ಆಗಾಗ ಬದಲಾಗುತ್ತವೆ; ದೇವರು ಎಂದಿಗೂ ಬದಲಾಗುವದಿಲ್ಲ. ಭವಿಷ್ಯದಲ್ಲಿ ನಾವು ಆತನೊಂದಿಗೆ ಪರಲೋಕದಲ್ಲಿ ಜೀವಿಸಬೇಕೆಂದು ದೇವರು ಬಯಸುತ್ತಾನೆ, ಸರ್ಕಾರವು ನಮ್ಮ ನಿತ್ಯವಾದ ಭವಿಷ್ಯಕ್ಕೆ ಏನೂ ಮಾಡಲಾರದು.

## ಅಸ್ಸೈನ್ಮೆಂಟ್ 3

ದಿನದ ಉಳಿದ ಸಮಯದಲ್ಲಿ "ನಾನು" ಎಂಬದಾಗಿ ಹೇಳಬೇಡಿರಿ. ಪ್ರತಿಬಾರಿ "ನಾನು" ಎಂದು ಹೇಳುವ ಶೋಧನೆ ನಿಮಗೆ ಎದುರಾಗುವಾಗ, "ಇದರಲ್ಲಿ ನನ್ನದು ಏನೂ ಇಲ್ಲ" ಎಂದು ಹೇಳಿ ಇತರರ ಕಡೆಗೆ ಗಮನ ಹರಿಸಿರಿ.

## ದಾನಿಯೇಲನೊಂದಿಗೆ ನಾಟಕಗಳು 3

ಟೀಚರ್: ದಾನೆಯೇಲ್, ನಿಮಗೆ ಮತ್ತೊಮ್ಮೆ ಸ್ವಾಗತ!

ದಾನಿಯೇಲ: ಧನ್ಯವಾದಗಳು. ನನಗೆ ಮತ್ತೊಮ್ಮೆ ಅವಕಾಶ ದೊರಕಿರುವದು ಸಂತೋಷದ ಸಂಗತಿಯಾಗಿದೆ. ಇಂದು ನಾನು ಮತ್ತೊಂದು ಅದ್ಭುತವಾಗಿರುವ ನಿಜವಾದ ಕಥೆಯನ್ನು ಹೇಳಲು ಬಯಸುತ್ತೇನೆ. ನಾನು ಒಂದುದಿನ ಆಡಳಿತದ ಕಾರ್ಯಗಳಲ್ಲಿ ನಿರತನಾಗಿದ್ದಾಗ ಅರಸನಾದ ನೆಬೂಕದ್ನೇಚ್ಚರನು ನನ್ನನ್ನು ಬರ ಹೇಳಿದನು. ಆತನು ಕಂಡ ಕನಸು ಎಷ್ಟು ನಿಜವಾಗಿತ್ತೆಂದರೆ ಅದನ್ನು ಮರೆಯಲು ಯಾರಿಂದಲೂ ಆಗುವದಿಲ್ಲ. ಇದಕ್ಕೂ ಮೊದಲೇ ಒಮ್ಮೆ ಅರಸನ ಕನಸಿನ ಅರ್ಥ ಹೇಳುವಂತೆ ದೇವರು ನನಗೆ ಸಹಾಯ ಮಾಡಿದ್ದನು. ಪಂಡಿತರು ಮತ್ತು ಜೋಯಿಸರಿಗೆ ಈ ಬಾರಿ ಅದನ್ನು ಹೇಳಲು ಆಗದೆ ಇದ್ದಾಗ, ಆತನು ನನ್ನನ್ನು ಕರೆಸಿದನು. ನನ್ನಲ್ಲಿ ದೇವರ ಆತ್ಮನಿದ್ದಾನೆ ಎಂದು ಆತನು ಹೇಳಿದನು. ನನ್ನ ದೇವರ ಬಗ್ಗೆ ಆತನಿಗೆ ಹೆಚ್ಚಿನ ತಿಳುವಳಿಕೆ ಇರಲಿಲ್ಲ, ಆದರೂ ದೇವರು ನನ್ನ ಸಂಗಡ ಇದ್ದಾನೆ ಎಂದು ಆತನು ಅರಿತುಕೊಂಡನು. ಆತನು ನನಗೆ ಇಡೀ ಭೂಮಿಯನ್ನು ಆವರಿಸಿಕೊಂಡ

ದೊಡ್ಡ ಮರ, ಹೇಗೆ ಸಂಪೂರ್ಣವಾಗಿ ಕಡಿಯಲ್ಪಟ್ಟಿತು ಮತ್ತು ಅದು ತಾಮ್ರ ಹಾಗೂ ಕಬ್ಬಿಣವನ್ನು ಹೊಂದಿತ್ತು ಎಂಬ ತನ್ನ ಕನಸನ್ನು ತಿಳಿಸಿದನು ಮತ್ತು ಪರಲೋಕದಿಂದ ಬಂದ ದೂತನು ಅವನಿಗೆ ನೀನು ಹೊರಗೆ ಜೀವಿಸುತ್ತಾ, ಹುಲ್ಲು ತಿನ್ನುವೆ ಮತ್ತು ನಿನ್ನ ಮನಸ್ಸು ಪ್ರಾಣಿಯಂತಾಗುವದು ಎಂಬದನ್ನು ಹೇಳಿದ್ದನ್ನೂ ತಿಳಿಸಿದನು. ಆತನು ನನಗೆ ಇವುಗಳನ್ನೆಲ್ಲಾ ಹೇಳುವಾಗ, ದೇವರು ನನಗೆ ಅರ್ಥಗಳನ್ನು ತಿಳಿಸಿದನು ಹಾಗೂ ಇವೆಲ್ಲವೂ ಅರಸನಿಗೆ ಕೆಟ್ಟ ಸುದ್ದಿಯಾಗಿದೆ ಎಂದು ನಾನು ತಿಳಿದುಕೊಂಡೆನು, ಯಾಕಂದರೆ ಅವನು ತನ್ನ ಬುದ್ದಿಯನ್ನು ಕಳೆದುಕೊಂಡು, ತಾನೊಬ್ಬ ಪ್ರಾಣಿಯೆಂದು ಯೋಚಿಸುತ್ತಾ ಹುಚ್ಚನಾಗುವನು ಮತ್ತು ತನ್ನ ಅರಸುತನವನ್ನು ಪುನಃ ಪಡೆದುಕೊಳ್ಳುವ ತನಕ ಕೆಲವು ಕಾಲ ಹೊರಗೇ ಇರುವನು.

ಟೀಚರ್: ಅರಸನಿಗೆ ಕೆಟ್ಟ ಸುದ್ದಿಯನ್ನು ಹೇಳುವಾಗ ಬಹಳ ಹೆದರಿಕೆಯಾಗಿರಬಹುದಲ್ಲವೇ. ಅವನಿಗೆ ನಿನ್ನ ಮೇಲೆ ಕೋಪ ಬಂತೇ?

ದಾನಿಯೇಳ: ಹೌದು, ಬಹಳ ಹೆದರಿಕೆಯಾಗಿತ್ತು. ಕೆಲವು ವರ್ಷಗಳಿಂದ ನಾನು ಆತನ ವಿಶ್ವಾಸಕ್ಕೆ ಪಾತ್ರನಾಗಿದ್ದೆನು, ಆದರೆ ಇದನ್ನು ಹೇಳುವದು ಅಪಾಯವೇ ಆಗಿತ್ತು. ಆದರೆ ಆತನಿಗೆ ಪಶ್ಚಾತ್ತಾಪಪಡುವ ಅವಕಾಶ ದೊರೆಯಬೇಕಾದರೆ ನಾನು ಸತ್ಯವನ್ನು ಹೇಳುವದೇ ಉತ್ತಮ ಎಂಬದು ನನಗೆ ತಿಳಿದಿತ್ತು. ನೀನು ನಿನ್ನ ದುಷ್ಟತನವನ್ನು ಬಿಟ್ಟು, ದಿಕ್ಕಿಲ್ಲದವರನ್ನು ಕರುಣಿಸು ಎಂದು ನಾನು ಆತನಿಗೆ ಹೇಳಿದೆನು. ಇದೆಲ್ಲಾ ನಡೆದು ಒಂದು ವರ್ಷವಾದಾಗ ಇವುಗಳನ್ನೆಲ್ಲಾ ಜನರು ಮರೆತುಹೋಗಿದ್ದ ಸಮಯದಲ್ಲಿ ಅರಸನು ತನ್ನ ಬುದ್ದಿಯನ್ನು ಕಳೆದುಕೊಂಡನು. ಅದು ಹೇಗಾಯಿತೆಂದು ಕೇಳಿಸಿಕೊಳ್ಳಲು ನಾನು ಆಗ ಅಲ್ಲಿ ಇರಲಿಲ್ಲ, ಆದರೆ ನಡೆದ ಘಟನೆಗಳನ್ನೆಲ್ಲಾ ವಿವರಿಸುತ್ತಾ ಆತನು ತನ್ನ ಇಡೀ ರಾಜ್ಯವನ್ನುದ್ದೇಶಿಸಿ ಒಂದು ಪತ್ರವನ್ನು ಬರೆದನು. ತಾನು ತನ್ನ ಬಲದಿಂದಲೇ ರಾಜ್ಯವನ್ನು ನಿರ್ಮಿಸಿರುವದಾಗಿ ಅವನು ಬಹಳವಾಗಿ ಕೊಚ್ಚಿಕೊಳ್ಳುತ್ತಾ, ಅವೆಲ್ಲವೂ ತನಗೇ ಸ್ವಂತವೆಂದು ಅಂದುಕೊಂಡಿದ್ದನು. ಬಹಳ ಸಮಯದ ನಂತರ, ಅವನು ಆರೋಗ್ಯವಂತನಾಗಿ, ಸ್ವಸ್ಥ ಬುದ್ಧಿಯುಳ್ಳವನಾದನು ಮತ್ತು ಕೂಡಲೇ ತನ್ನ ಅರಸುತನವನ್ನು ಪಡೆದುಕೊಂಡನು. ನಂತರ ಎಲ್ಲವನ್ನು ವಿವರಿಸುತ್ತಾ ತನ್ನ ರಾಜ್ಯದವರಿಗೆ ಪತ್ರವನ್ನು ಬರೆದನು.


ಟೀಚರ್: ಅವನು ತನ್ನ ರಾಜ್ಯದವರಿಗೆ ತನ್ನ ಬುದ್ದಿ ಹೇಗೆ ನಷ್ಟವಾಯಿತು ಎಂದು ತಿಳಿಸಿದನೇ? ಅಯ್ಯೋ, ಅವನ ಮರ್ಯಾದೆಯೆಲ್ಲಾ ಹಾಳಾಗಿರಬೇಕಲ್ಲವೇ.

ದಾನಿಯೇಲ: ನನ್ನ ದೇವರ ವಿಷಯದಲ್ಲಿ ಅವನು ಬಹಳ ಪ್ರಭಾವಿತನಾಗಿದ್ದ ಕಾರಣ, ಅವನಿಗೆ ಅದರ ಬಗ್ಗೆ ಚಿಂತೆಯಿರಲಿಲ್ಲ. ದೇವರು ಉನ್ನತನೆಂಬದು ನಿಮಗೆ ಮನವರಿಕೆಯಾಗುವಾಗ, ಆತನ ಅಭಿಪ್ರಾಯದ ಬಗ್ಗೆ ಮಾತ್ರವೇ ನೀವು ಚಿಂತಿಸುವಿರಿ. ಅವನು ಸತ್ಯವನ್ನೇ ಹೇಳದನು ಮತ್ತು ಪತ್ರದಲ್ಲಿ ಯಾವುದನ್ನೂ ಮರೆಮಾಡಲಿಲ್ಲ ಹಾಗೂ ಭೂಮಿಯ ಮೇಲಿರುವ ಎಲ್ಲಾ ರಾಜ್ಯಗಳ ಮೇಲೆಯೂ ದೇವರೊಬ್ಬನೇ ಅಂತಿಮವಾದ ಅಧಿಕಾರವುಳ್ಳವನು ಎಂಬದನ್ನು ಅರಿತುಕೊಂಡು ಮಹೋನ್ನತನಾದ ದೇವರನ್ನು ಸ್ತುತಿಸಿದನು. ಬಾಬೆಲ್ ಸಾಮ್ರಾಜ್ಯಕ್ಕೆ ಸೆರೆಯಾಗಿ ಹೋಗಿದ್ದ ಯೆಹೂದ್ಯರಾದ ನಾವು ದೇವರು ಅಲ್ಲಿ ಮಾಡಿದ ಕಾರ್ಯವನ್ನು ನೋಡಿ ಪ್ರೋತ್ಸಾಹ ಹೊಂದಿದೆವು. ಕೆಲವೊಮ್ಮೆ ನಾವು ದೇವರಿಗಾಗಿ ನಿಲ್ಲಬೇಕು ಅಥವಾ ಆತನು ನಮ್ಮಲ್ಲಿ ಸೀಮಿತ ಕಾರ್ಯಗಳನ್ನು ಮಾತ್ರವೇ ಮಾಡುತ್ತಾನೆ ಎಂದು ಯೋಚಿಸುತ್ತೇವೆ, ಆದರೆ ಆತನು ಇಂಥ ಕಾರ್ಯಗಳನ್ನು ಮಾಡಿ, ತನ್ನನ್ನು ಘನಪಡಿಸಿಕೊಳ್ಳುತ್ತಾನೆ ಹಾಗೂ ನಾವು ಬೆರಗಾಗುವಂತೆ ಮಾಡುತ್ತಾನೆ.

ಟೀಚರ್: ದಾನಿಯೇಲ್, ಇಂದು ಸಹ ಅಮೂಲ್ಯವಾದ ವಿಷಯಗಳನ್ನು ಹಂಚಿಕೊಂಡದ್ದಕ್ಕೆ ಧನ್ಯವಾದಗಳು. ನಾಳೆ ನಮ್ಮನ್ನು ಭೇಟಿ ಮಾಡಲು ಎಸ್ತೇರಳು ಬರುತ್ತಿದ್ದಾಳೆ, ಇನ್ನೆರೆಡು ದಿನಗಳ ನಂತರ ನಾವು ನಿಮ್ಮನ್ನು ಮತ್ತೆ ಭೇಟಿ ಮಾಡುತ್ತೇವೆ, ಅಲ್ಲವೇ?

ದಾನಿಯೇಲ: ನಾನೂ ನಾಳೆ ಬಂದು ಎಸ್ತೇರಳ ಕಥೆ ಕೇಳಿಸಿಕೊಳ್ಳಬೇಕು ಎಂಬದಾಗಿ ಅನ್ನಿಸುತ್ತಿದೆ, ಆದರೆ ಎರಡು ದಿನಗಳ ನಂತರ ಮತ್ತೆ ಬರುತ್ತೇನೆ.

## ಚಟುವಟಿಕೆ 3



ಸತ್ಯವನ್ನು ಹೇಳುವ ವಸ್ತು
ಮಕ್ಕಳೇ ಒಂದು ಪೂರ್ಣ ವೃತ್ತಾಕಾರದಲ್ಲಿ ಅಥವಾ ಅರ್ಧ ವೃತ್ತಾಕಾರದಲ್ಲಿ ಕೂತುಕೊಳ್ಳಿರಿ. ವೃತದ ಸುತ್ತಲೂ ಒಂದು ವಸ್ತುವನ್ನು ಕಳುಹಿಸಲಾಗುವದು. ಯಾವ ಮಗುವಿನ ಕೈಯಲ್ಲಿ ಆ ವಸ್ತು ಬರುತ್ತದೆಯೋ ಆ

ಮಗು ತನ್ನ ಕುರಿತಾದ ಸತ್ಯವನ್ನು ಹೇಳಬೇಕು (ಉದಾಹರಣೆಗೆ: ನನಗೆ ಬಾಳೆ ಹಣ್ಣು ತಿನ್ನಲು ಇಷ್ಟವಿಲ್ಲ ಯಾಕಂದರೆ ಅದು ಹಣ್ಣಾದರೆ ಬಹಳ ಮೆತ್ತಗಿರುತ್ತದೆ) ಮಗುವಿನ ಪಕ್ಕದಲ್ಲಿರುವವರು ಆ ವಸ್ತುವನ್ನು ತೆಗೆದುಕೊಳ್ಳುವ ತನಕ, ಯಾರ ಕೈಯಲ್ಲಿ ವಸ್ತು ಇರುತ್ತದೋ ಅವರು ಸತ್ಯವನ್ನು ಹೇಳುತ್ತಲೇ ಇರಬೇಕು. ವಸ್ತು ಪಾಸ್ ಆಗುತ್ತಲೇ ಇರಬೇಕು ಯಾರ ಬಳಿಯೂ ಒಂದು ನಿಮಿಷಕ್ಕಿಂತ ಹೆಚ್ಚು ಸಮಯ ಇರಬಾರದು.

## ರಾಜಮನೆತನದ ಔತಣ 3

ಅರಸನು ಕನಸಿನಲ್ಲಿ ಕಂಡ ಮರ



ಸಾಮುಗ್ರಿಗಳು:

- ಬಾಳೆಹಣ್ಣು
- ಹಸಿರು ದ್ರಾಕ್ಷಿ ಮತ್ತು/ಅಥವಾ ತರಕಾರಿಗಳು

ಎಕ್ಸಟ್ರಾ:

- ಹಾಮ್
- ಉದ್ದವಾದ ಕ್ಯಾರೆಟ್



ಸೂಚನೆಗಳು:

1. ಬಾಳೆಹಣ್ಣನ್ನು ತಟ್ಟೆಯ ಮೇಲೆ ಇಡಿರಿ ಅದು ಮರದ ಕಂಬದಂತೆ ಕಾಣಿಸಬೇಕು.
2. ಹಸಿರು ದ್ರಾಕ್ಷಿಯನ್ನು ಮೇಲೆ ಜೋಡಿಸಿರಿ ಅದು ಎಲೆಗಳಂತೆ ಕಾಣಿಸಬೇಕು.

ಎಕ್ಸಟ್ರಾ:

1. ಎರಡು ಹಾಮ್ ರೋಲ್ ಗಳನ್ನು ಮಾಡಿರಿ ಮತ್ತು ಅವುಗಳನ್ನು ಚಿಟ್ಟೆಯ ರೆಕ್ಕೆಗಳಂತೆ ಇಡಿರಿ
2. ಉದ್ದವಾದ ಕ್ಯಾರೆಟ್ ಅನ್ನು ಚಿಟ್ಟೆಯ ದೇಹದಂತೆ ಮಾಡಿರಿ.

ಈಗ ಅರಸನ ಕನಸಿನ ಮರವನ್ನು ಆನಂದಿಸೋಣ!

## ತೋಟದ ಆಟಗಳು 2

### ಬಿಸಿ ಆಲೂಗಡ್ಡೆ



ಮಕ್ಕಳೆಲ್ಲರನ್ನು ಸೇರಿಸಿ ಒಂದು ದೊಡ್ಡ ವೃತ್ತವನ್ನು ಮಾಡಿರಿ ಅಥವಾ ಹುಡುಗರಿಗೆ ಒಂದು, ಹುಡುಗಿಯರಿಗೆ ಒಂದು ವೃತ್ತ ಮಾಡಿರಿ. ಅವರಿಗೆ 1 ಬಲೂನ್, ಚೆಂಡು, ಅಥವಾ ಬೇರೆ ಯಾವುದಾದರು ವಸ್ತುವನ್ನು ಪ್ರತಿ 15 ಮಕ್ಕಳಿಗೆ ಕೊಟ್ಟು ಆಟವನ್ನು ಬೇಗ ಮುಗಿಸಿರಿ. ನೀವು ಮ್ಯೂಸಿಕ್ ಆನ್ ಮಾಡುವಾಗ, ಮಕ್ಕಳು ತಮ್ಮ ಕೈಯಲ್ಲಿರುವ ವಸ್ತುವನ್ನು ತಮ್ಮ ಬಲಗಡೆಯಲ್ಲಿರುವ ಮಗುವಿಗೆ ಕೊಡಬೇಕು. ಮ್ಯೂಸಿಕ್ ಆಫ್ ಆದಾಗ, ಯಾವ ಮಗುವಿನ ಕೈಯಲ್ಲಿ ವಸ್ತು ಇರುತ್ತದೆಯೋ ಆ ಮಗು ಆಟದಿಂದ ಹೊರಗೆ ಹೋಗಬೇಕು. ಕಡೆಯದಾಗಿ ಒಬ್ಬ ಆಟಗಾರ ಉಳಿಯುವ ತನಕ ಆಟವನ್ನು ಆಡಿಸಿರಿ.

## ಕೂಕಿ ಫೇಸ್



ಪರದೆಯ ಮೇಲೆ ಆಟವಾಡಲು ಕೆಲವು ಮಕ್ಕಳನ್ನು ಆಯ್ಕೆ ಮಾಡಿರಿ ಮತ್ತು ಪ್ರತಿಯೊಬ್ಬರಿಗೆ ಒಂದೊಂದು ಕೂಕಿ ಕೊಡಿರಿ. ಕೂಕಿ (ಬಿಸ್ಕಟ್) ತಲೆಯ ಮೇಲೆ ಇಟ್ಟುಕೊಳ್ಳುವ ಮೂಲಕ ಆಟವನ್ನು ಪ್ರಾರಂಭಿಸಬೇಕು. ಆಟವು ಪ್ರಾರಂಭವಾದಾಗ, ಆಟಗಾರರು ಕೂಕಿಯನ್ನು ಕೈಯಿಂದ ಮುಟ್ಟದೆ ಬಾಯ ಹತ್ತಿರಕ್ಕೆ ತರಬೇಕು. ಒಂದುವೇಳೆ ಕೂಕಿ ಕೆಳಗೆ ಬಿದ್ದರೆ ಆಟದಿಂದ ಹೊರಗೆ ಹೋಗಬೇಕು. ಪ್ರತಿಯೊಬ್ಬ ಆಟಗಾರನಿಗೆ ಒಂದು ಕೂಕಿಗೆ ಒಂದು ನಿಮಿಷ ಸಮಯ ಇರುತ್ತದೆ. ಎರಡು ನಿಮಿಷದೊಳಗೆ ಯಾರೆಲ್ಲಾ ಎರಡು ಕೂಕಿಗಳನ್ನು ಬಾಯ ಬಳಿಗೆ ತರುತ್ತಾರೋ ಅವರು ಗೆಲ್ಲುತ್ತಾರೆ.

## ಗಮನ ಸೆಳೆಯುವವರು / ಚಪ್ಪಾಳೆ 4

"ಧೈರ್ಯವು ತನಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುತ್ತದೆ"

1. ಜೊತೆಗಾರನೊಂದಿಗೆ, ಒಟ್ಟಾಗಿ ಬಲಗೈಯನ್ನು ತಟ್ಟಿರಿ, ನಂತರ ಕೈ ಹಿಂಭಾಗವನ್ನು, ನಂತರ ಮುಂಭಾಗದಲ್ಲಿ ಹಾಗೆ ಮಾಡಿರಿ
2. ಮುಷ್ಟಿಯನ್ನು ಬಿಗಿಯಾಗಿ ಹಿಡಿರಿ ಮತ್ತು ಮುಷ್ಟಿಯನ್ನು ಮೇಲೆ, ಕೆಳಗೆ, ನಂತರ ಮತ್ತೊಮ್ಮೆ ಮೇಲೆ ಗುದ್ದಿರಿ
3. ಆಕಾಶವನ್ನು ತೋರಿಸಿರಿ ಮತ್ತು ಭುಜಗಳು ಹಾಗು ಮೊಣಕೈಯನ್ನು ಮೂರು ಸಲ ಆಡಿಸಿರಿ

## ಕಂಠಪಾಠ ವಚನ 4

1 ಯೊವಾನ್ನನು 3:16 "ಕ್ರಿಸ್ತಯೇಸು ನಮಗೋಸ್ಕರ ತಮ್ಮ ಪ್ರಾಣವನ್ನೇ ತೆತ್ತರು. ಇದರಿಂದ ಪ್ರೀತಿ ಎಂತಹುದೆಂದು ನಾವು ಅರಿತುಕೊಂಡೆವು. ನಾವೂ ಕೂಡ ಸಹೋದರರಿಗಾಗಿ ಪ್ರಾಣಾರ್ಪಣೆ ಮಾಡಲು ಬದ್ಧರಾಗಿದ್ದೇವೆ."

## ನಾಟಕ 4: ಒಂಟೆ ಸೌಂದರ್ಯದ ಸ್ಪರ್ಧೆ

ಕಾಮೆಲಿಯಾ: ಓಹ್, ನನಗೆ ಬಹಳ ಗಾಬರಿಯಾಗುತ್ತಿದೆ!

ಕಾಮೆಲೊಟ್: ನೀನು ಯಾಕೆ ಗಾಬರಿಯಾಗಿರುವೆ, ಕಾಮೆಲಿಯಾ? ನೀನು ಉತ್ತಮವಾಗಿ ಕಾಣಿಸುವೆ ಎಂಬ ನಂಬಿಕೆ ನನಗಿದೆ.

ಕಾಮೆಲಿಯಾ: ಈ ಸೌಂದರ್ಯ ಸ್ಪರ್ಧೆಯನ್ನು ನಾನು ಗೆಲ್ಲಲು ಆಗುವದೇ ಇಲ್ಲ ಅನ್ನಿಸುತ್ತದೆ! ಡಾನ್ಸಿಂಗ್ ಸ್ಪರ್ಧೆ ಒಂದು ರೀತಿಯಾದರೆ, ಇದು ಇನ್ನೊಂದು ರೀತಿಯಾಗಿದೆ. ನನಗೆ ಇಷ್ಟು ದೊಡ್ಡ ಮೂಗು ಮತ್ತು ದೊಡ್ಡ ಕಾಲುಗಳು ಇಲ್ಲದೆ ಹೋಗಿದ್ದರೆ...! ನನ್ನ ದೊಡ್ಡ ಮೂಗು ಮತ್ತು ಕಾಲುಗಳ ನಿಮಿತ್ತ ಹುಡುಗಿಯರಲ್ಲದೆ ಹುಡುಗರು ಸಹ ಬಹಳ ಗೇಲಿ ಮಾಡುತ್ತಿದ್ದರು! ನಾನೇನು ಮಾಡಲಿ, ನಾನೇನು ಮಾಡಲಿ?

ಕಾಮೆಲೊಟ್: ಲೋಕದ ಮೇಲೆ ದೊಡ್ಡ ಹೆಜ್ಜೆ ಗುರುತನ್ನು ಬಿಡಲೇ? ಕಿಕ್-ಬಾಕ್ಸಿಂಗ್ ನಲ್ಲಿ ಗೆಲ್ಲಲೇ?

ಕಾಮೆಲಿಯಾ: ಹೇ! ನಾನು ನಿಜವಾಗಿಯೂ ಗೆಲ್ಲಬೇಕೆಂದು ಬಯಸುತ್ತಿದ್ದೇನೆ ಯಾಕಂದರೆ ನನ್ನ ಯಜಮಾನನು ಬಹುಮಾನವಾಗಿ ದೊರೆಯುವ ಹಣವನ್ನು ಸಮಾಜಸೇವೆಗೆ ಕೊಡಬೇಕೆಂದಿದ್ದಾರೆ. ಇದು ಬಹಳ ಪ್ರಾಮುಖ್ಯ!

ಕಾಮೆಲೊಟ್: ನೀನು ಹೊರಗೆ ಹೇಗೆ ಕಾಣಿಸುವೆ ಎಂಬದಕ್ಕಿಂತ ಒಳಗೆ ಹೇಗಿರುವೆ ಎಂಬದು ಪ್ರಾಮುಖ್ಯವಾಗಿದೆ ಎಂದು ನಿನಗೆ ಗೊತ್ತಿಲ್ಲವೇ?

ಕಾಮೆಲಿಯಾ: ನಿಜವಾಗಿಯೂ? ಆದರೆ ನನ್ನ ಮೂಗಿನ ವಿಷಯ ಏನು?

ಕಾಮೆಲೊಟ್: ನಿನ್ನ ಮೂಗಿನ ವಿಷಯದಲ್ಲಿ ಯೋಚನೆ ಮಾಡಬೇಡ. ನೀನು ಇಲ್ಲಿ ಉತ್ತಮವಾದ ಒಂಟೆಯಾಗಿ ಕಾಣಿಸಿಕೊಳ್ಳಲು ಬಂದಿರುವೆ ಮತ್ತು ಇತರರಿಗೆ ನೀನು ದಯೆ ತೋರಿಸುವಾಗ ಅವರು ದೇವರನ್ನು ತಿಳಿದುಕೊಳ್ಳುವರು! ದಯೆಯುಳ್ಳವನಾಗಿ ಮತ್ತು ಸ್ವಸ್ಥಬುದ್ಧಿಯುಳ್ಳವನಾಗಿ ತೋರ್ಪಡಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡು.

ಕಾಮೆಲಿಯಾ: ನನ್ನ ಸೌಂದರ್ಯದ ವಿಷಯ ಏನು?

ಕಾಮೆಲೊಟ್: ನಾನು ನಿನ್ನ ಮುಖಕ್ಕೆ ಸ್ವಲ್ಪ ಮೇಕಪ್ ಮಾಡಲು ಪ್ರಯತ್ನಿಸುತ್ತೇನೆ. (ಮಕ್ಕಳಿಗೆ ಗೊತ್ತಾಗುವಂತೆ ಗಾಳಿಯಲ್ಲಿ ಪೌಡರ್ ಚೆಲ್ಲಿರಿ. ಕಾಮೆಲೊಟ್ ಮತ್ತು ಕಾಮೆಲಿಯಾ ಇಬ್ಬರೂ ಕೆಮ್ಮಲಿ). ಬಹುಶಃ ಅದು ಬೇಡ ಅನ್ನಿಸುತ್ತದೆ. ಬಾಟಕ್ಸ್ ಇಂಜೆಕ್ಷನ್ ತೆಗೆದುಕೊಂಡರೆ ಹೇಗಿರುತ್ತದೆ?

ಕಾಮೆಲಿಯಾ: ಬೇಡ, ಅದು ಮೋಸ, ನಾವು ಅನರ್ಹರಾಗುತ್ತೇವೆ!

ಕಾಮೆಲೊಟ್: ಸರಿ, ನಾನು ಸ್ವಲ್ಪ ಐಲೈನರ್ ನಿನ್ನ ಕಣ್ಣುಗಳಿಗೆ ಹಾಕುತ್ತೇನೆ . . . (ಕಾಮೆಲೊಟ್ ತನ್ನ ಬಾಯೊಳಗೆ ಐಲೈನರ್ ಇಟ್ಟುಕೊಂಡು ಬಹಳ ಒರಟಾಗಿ ಕಾಮೆಲಿಯಾ ಬಳಿಗೆ ಹೋಗುತ್ತಾನೆ) ಅಲ್ಲಾಡಬೇಡ.

ಕಾಮೆಲಿಯಾ: ಅಯ್ಯೋ! ಬೇಡ, ಅದರ ಅವಶ್ಯಕತೆಯಿಲ್ಲ. ನನ್ನನ್ನು ಪ್ರೋತ್ಸಾಹಪಡಿಸಿದ್ದಕ್ಕೆ ಧನ್ಯವಾದಗಳು. ದೇವರು ನನ್ನನ್ನು ಉಂಟುಮಾಡಿರುವ ರೀತಿಯಲ್ಲಿಯೇ ಸೌಂದರ್ಯ ಸ್ಪರ್ಧೆಯಲ್ಲಿ ಭಾಗಿಯಾಗುವದು ಉತ್ತಮ ಎಂದು ನನಗೆ ಅನ್ನಿಸುತ್ತದೆ, ಇದಲ್ಲದೆ ಇತರರೊಂದಿಗೆ ಕರುಣೆಯುಳ್ಳವಳಾಗಿ ಮತ್ತು ಉತ್ತಮ ಆಲೋಚನೆಯುಳ್ಳವಳಾಗಿ ನಿನ್ನ ಮಾತಿನಂತೆ ನಡೆದುಕೊಳ್ಳುತ್ತೇನೆ. ಈಗ, ನನ್ನ ಸರದಿ ಬಂದಿದೆ. ಕಾಮೆಲಿಯಾ ವೇದಿಕೆಯಿಂದ ಹೊರಟು ಹೋದಳು.

ಕಾಮೆಲೊಟ್: ದೂರದಿಂದಲೇ ಊಟದ ವಾಸನೆ ಬರುತ್ತಿದೆ ಆದ್ದರಿಂದ ಊಟ ಎಲ್ಲಿದೆ ಎಂದು ನಾನು ನೋಡುತ್ತೇನೆ! ಹಿಹೀ! ನನಗೆ ಹಸಿವೆಯಾಗುತ್ತಿದೆ.

ಪ್ರಕಟಿಸುವವನು: 19.7 ಅಂಕಗಳೊಂದಿಗೆ ಗೆಲುವು ಸಾಧಿಸಿರುವವರು . . . ಕಾಮೆಲಿಯಾ! ತನ್ನ ವಿಶೇಷವಾದ ಮೂಗು ಮತ್ತು ಕಾಲುಗಳು ಒಂಟೆಯ ಪ್ರಮುಖ ಆಕರ್ಷಣೆಯಾಗಿರುವದರಿಂದ ಈ ಸೌಂದರ್ಯ ಸ್ಪರ್ಧೆಯಲ್ಲಿ ಅದನ್ನು ಪರಿಗಣಿಸಿ ವಿಜೇತನನ್ನು ಘೋಷಿಸಲಾಗಿದೆ.

## ಮುಖ್ಯ ಪಾಠ 4

ಮತ್ತೊಮ್ಮೆ ಸ್ವಾಗತ! ಇಂದು ನಾವು ಧೈರ್ಯದ ಬಗ್ಗೆ ಸ್ವಲ್ಪ ಹೆಚ್ಚಾಗಿಯೇ ತಿಳಿದುಕೊಳ್ಳೋಣ. ಬಾಬೆಲ್ ಸಾಮ್ರಾಜ್ಯವನ್ನು ಮೇದ್ಯರು ಮತ್ತು ಪಾರಸಿಯರು ಜಯಿಸಿದ್ದರು. ಕೆಲವು ಸಮಯದ ನಂತರ, ಅರಸನಾದ ಅಹಷ್ವೇರೋಷನು ತನ್ನ ರಾಜ್ಯವನ್ನು ಪ್ರದರ್ಶಿಸಲು ದೊಡ್ಡ ಔತಣವನ್ನು ಏರ್ಪಡಿಸಿದನು. ಅಂಥ ದೊಡ್ಡ ಔತಣದಲ್ಲಿ, ರಾಣಿಯಾಗಿದ್ದ ವಷ್ಟಿ ಅವಿಧೇಯಳಾದಳು. ಅರಸನು ಆಕೆಯನ್ನು ತಳ್ಳಿಬಿಟ್ಟನು ಮತ್ತು ಆಕೆಗೆ ಬದಲಾಗಿ ಬೇರೊಬ್ಬ ಸ್ತ್ರೀಗಾಗಿ ಹುಡುಕಾಟ ನಡೆಸಿದನು. ಯೌವನಸ್ಥಳಾಗಿದ್ದ ಯೆಹೂದ್ಯಳಾದ ಎಸ್ತೇರಳು ಸುಂದರವಾಗಿದ್ದಳು ಮತ್ತು ತನ್ನ ಸುತ್ತಮುತ್ತಲಿನಲ್ಲಿದ್ದವರೆದುರಿನಲ್ಲಿ ಸೌಮ್ಯ ಹಾಗೂ ಕೋಮಲ ಸ್ವಭಾವದವಳಾಗಿದ್ದಳು, ಅರಸನು ಆಕೆಯನ್ನು ರಾಣಿಯನ್ನಾಗಿ ಮಾಡಿದನು. ಹಿಂದಿನ ಪಾಠಗಳಲ್ಲಿ ಬಂದ ನಮ್ಮ ಸ್ನೇಹಿತರನ್ನು ನೆನಪಿನಲ್ಲಿದ್ದಾರೆಯೇ? ದೇವರ ಮಹಿಮೆ ಮತ್ತು ಇತರರ ಲಾಭಕ್ಕಾಗಿ ಅವರಿಗೆ ಉನ್ನತ ಸ್ಥಾನಗಳನ್ನು ಕೊಡಲಾಗಿತ್ತು. ಈ ಕಥೆ ಅದಕ್ಕಿಂತ ಭಿನ್ನವೇನಲ್ಲ; ಎಸ್ತೇರಳ ಸೌಂದರ್ಯ ಮತ್ತು ಆಕೆಯ ಸ್ಥಾನ ಇತರರ ಪ್ರಯೋಜನಕ್ಕಾಗಿ ಆಗಿತ್ತು. "ಧೈರ್ಯವು ತನಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ದುಷ್ಟನಾದ ಹಾಮಾನನು ಯೆಹೂದ್ಯರನ್ನೆಲ್ಲಾ ಕೊಲ್ಲಬೇಕೆಂದು ಯೋಚಿಸಿದನು. ರಾಜ್ಯದಲ್ಲಿರುವ ಯೆಹೂದ್ಯರನ್ನೆಲ್ಲಾ ಕೊಲ್ಲುವ ಒಂದು ದಿನವನ್ನು ನಿಗದಿಪಡಿಸಿ ಆಜ್ಞೆಯನ್ನು ಹೊರಡಿಸುವಂತೆ ಅವನು ಅರಸನ ಮನವೊಲಿಸಿದನು. ಎಲ್ಲರೂ ನಿರಾಸೆಯಲ್ಲಿದ್ದರು! ಎಸ್ತೇರಳನ್ನು ಬೆಳೆಸಿದ್ದ, ಆಕೆಯ ಚಿಕ್ಕಪ್ಪನಾದ ಮೊರ್ದೆಕೈ, ಈ ವಿಷಯವನ್ನು ಆಕೆಗೆ ತಿಳಿಸಿ ಮಧ್ಯಸ್ಥಿಕೆ ಮಾಡುವಂತೆ ಹೇಳಿದನು. ಅದು ಬಹಳ ಕಷ್ಟದ ಕೆಲಸವಾಗಿತ್ತು ಯಾಕಂದರೆ ಅನುಮತಿಯಿಲ್ಲದೆ ಯಾರಾದರೂ ಅರಸನ ಬಳಿಗೆ ಹೋದರೆ ಅವರಿಗೆ ಮರಣ ಶಿಕ್ಷೆ ಅನುಭವಿಸಬೇಕಾಗಿತ್ತು! ನೀನು ರಾಣಿಯಾಗಿರುವದು ನಮ್ಮ ಜನರನ್ನು ಕಾಪಾಡುವದಕ್ಕಾಗಿಯೇ ಆಗಿರಬಹುದು ಎಂದು ಮೊರ್ದೆಕೈ ಆಕೆಗೆ ಜ್ಞಾಪಕಪಡಿಸಿದನು. ನೀವು ಧೈರ್ಯವಾಗಿ ಇತರರಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳುವಾಗ ಅವರು ಪರಲೋಕದಲ್ಲಿ ಶಾಶ್ವತವಾಗಿರಬಹುದು, ಹಿಂಸೆಯನ್ನನುಭವಿಸುವವರ ಪರವಾಗಿ ಮಾತನಾಡಬಹುದು, ತಪ್ಪು ಮಾಡುವ ಬದಲು ಯೇಸು ಕ್ರಿಸ್ತನನ್ನು ಹಿಂಬಾಲಿಸುವಂತೆ ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಬಹುದು, ನಷ್ಟವಾದರೂ ಸತ್ಯವನ್ನೇ ಹೇಳಬಹುದು ಅಥವಾ ಒಂದುವೇಳೆ ಜನರು ನಿಮ್ಮ ಬಗ್ಗೆ ಕೆಟ್ಟದಾಗಿ ಮಾತನಡಿದರೂ ಯಾರಾದರೂ ಏಕಾಂಗಿಯಾಗಿದ್ದರೆ ಅವರಿಗೆ ಹಿತವನ್ನೇ ಮಾಡಬಹುದು. "ಧೈರ್ಯವು ತನಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ಎಸ್ತೇರಳು ಮೊರ್ದೆಕೈ ಮತ್ತು ಪಟ್ಟಣದಲ್ಲಿರುವ ಯೆಹೂದ್ಯರೆಲ್ಲರಿಗೆ ನನಗಾಗಿ ಪ್ರಾರ್ಥನೆ ಮಾಡಿರಿ ಎಂದು ಹೇಳಿದಳು. ಅಪಾಯಕಾರಿಯಾದ ಕಾರ್ಯವನ್ನು ಮಾಡುವ ಪರಿಸ್ಥಿತಿ ನಿಮಗೇನಾದರೂ ಎದುರಾದರೆ, ಧೈರ್ಯ ಮತ್ತು ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ! ನಂತರ ಎಸ್ತೇರಳು ಅಸಾಮಾನ್ಯ ಧೈರ್ಯ ಮಾಡಿ ಅರಸನ ಮುಂದೆ ಹೋದಳು. ಆಕೆಯ ಸಂತೋಷಕ್ಕೆ, ಅರಸನು ತನ್ನ ರಾಜದಂಡವನ್ನು ಆಕೆಯ ಕಡೆಗೆ ಚಾಚಿ ಆಕೆಯನ್ನು ಉಳಿಸಿದನು ಮತ್ತು ನಿನಗೆ ಏನು ಬೇಕು ಎಂದು ಕೇಳಿದನು. ಆಕೆ ಆತನನ್ನು ಔತಣ ಕೂಟಕ್ಕೆ ಆಹ್ವಾನಿಸಿದಳು, ನಂತರ ಔತಣ ಕೂಟದಲ್ಲಿ ಆಕೆ ಆತನನ್ನು ಇನ್ನೊಮ್ಮೆ ಔತಣ ಕೂಟಕ್ಕೆ ಬರುವಂತೆ ಆಹ್ವಾನಿಸಿದಳು. ಬಹುಶಃ ಆ ಕ್ಷಣದಲ್ಲಿ ಹಾಮಾನನ ಬಗ್ಗೆ ಆತನಿಗೆ ಹೇಳಲು ಹೆದರಿರಬಹುದು ಅಥವಾ ಆಕೆ ಮೊದಲೇ ಹೀಗೆ ಯೋಚಿಸಿಕೊಂಡಿರಬಹುದು. ನಮಗೆ ಗೊತ್ತಿಲ್ಲ. ಆದರೂ ಧೈರ್ಯವು ಸಂಪೂರ್ಣವಾಗಿರುವ ಅವಶ್ಯಕತೆಯಿಲ್ಲ. ಒಂದುವೇಳೆ ನೀವು

ಹೆದರಿಕೊಂಡು ವಾಂತಿ ಮಾಡಿಕೊಂಡರೆ? ಪರವಾಗಿಲ್ಲ! ಶೌಚಾಲಯಕ್ಕೆ ಹೋಗಿ ವಾಂತಿ ಮಾಡಿರಿ, ನಂತರ ಹಿಂದಿರುಗಿ ಬಂದು, ಇತರರಿಗೆ ಒಳಿತನ್ನು ಮಾಡಿರಿ. ನೀವು ಹೆದರಿಕೊಂಡಷ್ಟೂ, ಇತರರಿಗೆ ಒಳಿತನನ್ನು ಮಾಡುವಾಗ ಧೈರ್ಯಶಾಲಿಗಳಾಗುವಿರಿ. "ಧೈರ್ಯವು ತನಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

ಅರಸನು ಎಸ್ತೇರಳ ಮಾತುಗಳನ್ನು ಕೇಳಿದನು ಮತ್ತು ಹಾಮಾನನು ಮೊರ್ದೆಕೈಗಾಗಿ ಮಾಡಿಸಿದ ನೇಣು ಕಂಬಕ್ಕೆ ಹಾಮಾನನನ್ನೇ ನೇಣು ಹಾಕಿಸಿದನು. ಇದಲ್ಲದೆ ಯೆಹೂದ್ಯರು ತಮ್ಮನ್ನು ಸಮರ್ಥಿಸಿಕೊಳ್ಳಲು ಅರಸನು ಅವರಿಗೆ ಅನುಮತಿ ನೀಡಿದನು. ಹಾಮಾನನ ಮನಸ್ಸಿನಲ್ಲಿದ್ದ ದುಷ್ಟತನಕ್ಕೆ ಬದಲಾಗಿ, ಯೆಹೂದ್ಯರು ಇಡೀ ಸಾಮ್ರಾಜ್ಯದಲ್ಲಿ ಲಾಭವನ್ನು ಹೊಂದಿದರು. ನಂತರ ಅರಸನು ಮೊರ್ದೆಕೈಯನ್ನು ಇಡೀ ಸಾಮ್ರಾಜ್ಯದಲ್ಲಿ ಎರಡನೇ ದೊಡ್ಡ ಅಧಿಕಾರಿಯನ್ನಾಗಿ ಮಾಡಿದನು, ಅವನಾದರೋ ಯೆಹೂದ್ಯರ ಹಿತಕ್ಕಾಗಿ ಕಾರ್ಯಮಾಡಿದನು. ನೀವು ಧೈರ್ಯಶಾಲಿಗಳಾಗುವಾಗ ಖಂಡಿತವಾಗಿಯೂ ಹೀಗೇ ಕಾರ್ಯಗಳು ನಡೆಯುವದಿಲ್ಲ. ನೀವು ಅಂದುಕೊಳ್ಳುವ ಹಾಗೆ ಕಾರ್ಯಗಳು ಇರುವದಿಲ್ಲ. ಆದರೆ ನೀವು ಧೈರ್ಯದಿಂದ ನಿಮಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುವಾಗ ಮತ್ತು ಪ್ರೀತಿಯಿಂದ ದೃಢ ತೀರ್ಮಾನ ತೆಗೆದುಕೊಳ್ಳುವಾಗ, ಇಡೀ ಭ್ರಮಾಂಡದ ನೀತಿಯುಳ್ಳ ಅರಸನಾದ ಯೇಸು ಕ್ರಿಸ್ತನು ನಿಮ್ಮ ಜೀವನದಲ್ಲಿ ಮಹಿಮೆ ಹೊಂದುವನು. ಆತನು ನಿಮ್ಮಲ್ಲಿ ಕಾರ್ಯಮಾಡುವದನ್ನು ಪ್ರತಿಯೊಬ್ಬರು ನೋಡುವರು ಮತ್ತು ಮುಂದೊಂದು ದಿನ ನೀವು ಮಾಡುವ ಒಳ್ಳೆಯ ಕಾರ್ಯಗಳಿಗಾಗಿ ಅವರೆಲ್ಲರೂ ದೇವರನ್ನು ಸ್ತುತಿಸುವರು ಹಾಗೂ ಸರ್ವಶಕ್ತನಾದ ದೇವರಿಂದ ನೀವು ಹೊಗಳಿಕೆಯನ್ನು ಪಡೆಯುವಿರಿ. "ಧೈರ್ಯವು ತನಗಿಂತ ಮೊದಲು ಇತರರಿಗೆ ಆದ್ಯತೆಯನ್ನು ಕೊಡುತ್ತದೆ" ಎಂದು ಎಲ್ಲರೂ ಹೇಳಿರಿ.

## ಸಾಮ್ರಾಜ್ಯದಲ್ಲಿ ಕರಕುಶಲತೆ 4

### ಪಿಕ್ಚರ್ ಫ್ರೇಮ್





ಸಾಮಗ್ರಿಗಳು

- ಕಲರ್ ಪೇಪರ್ ನಿಂದ ಫ್ರೇಮ್ ಮಾದರಿ
- 3 ಪೇಪರ್ ಕಿರೀಟಗಳು
- “ನಾನು ಧೈರ್ಯಶಾಲಿ” ಪದಗಳು
- ½ ಕುಡಿಯುವ ಸ್ಟ್ರಾ
- ಕರ್ಲಿ ರಿಬ್ಬನ್
- ಗ್ಲೂ

ಸೂಚನೆಗಳು


- ಮಾದರಿ ವಿಧಾನವನ್ನು ಕತ್ತರಿಸಿರಿ ಮತ್ತು ಹೆಚ್ಚುವರಿ ಚೂರುಗಳನ್ನು ತೆಗೆದುಹಾಕಿರಿ.
- ಮಧ್ಯಭಾಗಕ್ಕೆ ಮಡಚಿರಿ ಮತ್ತು 4 ಮೂಲೆಗಳಲ್ಲಿ 3 ಮೂಲೆಗಳಿಗೆ ಗ್ಲೂ ಹಾಕಿರಿ. ಚಿತ್ರವನ್ನು ಹಾಕುವ ಸಲುವಾಗಿ 4 ನೇ ಮೂಲೆಯನ್ನು ತೆರೆದಿಡಿ ಮತ್ತು ಸ್ಟ್ರಾ ಇಡುವ ಸಲುವಾಗಿ ಮೇಲ್ಭಾಗದ ಬ್ಯಾಂಡ್ ಗಳನ್ನು ತೆರೆದಿಡಿರಿ.
- ಫೋಟೋ ಪ್ರಿಂಟ್ ಮಾಡುವ ಬಗ್ಗೆ ಯೋಚಿಸಿರಿ ಅಥವಾ ಮಕ್ಕಳಿಂದಲೇ ಎಸ್ತೇರಳ ಚಿತ್ರವನ್ನು ಬರೆಸಿ ಫ್ರೇಮ್ ನೊಳಗೆ ಹಾಕಿರಿ.
- ಕಿರೀಟಗಳು ಮತ್ತು “ನಾನು ಧೈರ್ಯಶಾಲಿ” ಎಂಬ ಪದಗಳನ್ನು ಅಲಂಕರಿಸಿರಿ.
- ಮುಗಿಸುವಾಗ, ಮೇಲ್ಭಾಗದಲ್ಲಿರುವ ಬ್ಯಾಂಡ್ ಗಳೊಳಗೆ ಸ್ಟ್ರಾ ಇಡಿರಿ ಮತ್ತು ಪಿಕ್ಚರ್ ಫ್ರೇಮ್ ತಗಲುಹಾಕಲು ಸ್ಟ್ರಾದ ಎರಡೂ ಕಡೆಗಳಿಗೆ ಕರ್ಲಿ ರಿಬ್ಬನ್ ಕಟ್ಟಿರಿ.

## ಅರಮನೆಯಲ್ಲಿ ತರಗತಿ 4












73





## ಪ್ರಶ್ನೆಗಳು ಮತ್ತು ಉತ್ತರಗಳು 4

1. **ಇಂದಿನ ಸತ್ಯವೇದದ ಕಥೆಯಲ್ಲಿ ಬರುವ ಜನ ಹೆಸರುಗಳೇನು?**
   **ಅಹಷ್ವರೋಷ್ ರಾಜನು, ವಷ್ಟಿ ರಾಣಿ, ಎಸ್ತೇರಳು, ಹಾಮಾನ್, ಮೊರ್ದೆಕೈ**
2. **ನಿಮ್ಮನ್ನು ಹೆದರಿಸುವದು ಯಾವುದು?**
   **ಸಾಧ್ಯವಿರುವ ಉತ್ತರಗಳು: ಕತ್ತಲೆ, ಜೇಡ, ನಾಯಿಗಳು, ಆಯುಧಗಳು, ಅಪರಿಚಿತರು, ಗಟ್ಟಿಯಾದ ಶಬ್ದಗಳು, ಪ್ರಖ್ಯಾತಿಯ ನಷ್ಟ, ಮನೆಗಳು ಅಥವಾ ಶಾಲೆಗಳನ್ನು ಬದಲಾಯಿಸುವದು.**
3. **ಎಸ್ತೇರಳು ಮಾಡಿದ ಧೈರ್ಯದ ಕೆಲಸ ಯಾವುದು?**
   **ರಾಣಿಯ ಸ್ಥಾನಕ್ಕೆ ಅರ್ಜಿ ಹಾಕಿದಳು, ಆಹ್ವಾನ ಇಲ್ಲದೆ ಅರಸನ ಮುಂದೆ ಹೋಗುವ ಮೂಲಕ ತನ್ನ ಪ್ರಾಣವನ್ನು ಅಪಾಯಕ್ಕೆ ಒಳಪಡಿಸಿದಳು, ಅವನನ್ನು ಔತಣ ಕೂಟಕ್ಕೆ ಕರೆದನು, ಯೆಹೂದ್ಯರನ್ನು ಕೊಲ್ಲಬೇಕೆಂಬ ಹಾಮಾನನ ಯೋಚನೆಯನ್ನು ತಿಳಿಸಿದಳು.**
4. **ನೀವು ಧೈರ್ಯದಿಂದ ಯಾವ ಕಾರ್ಯಗಳನ್ನು ಮಾಡಬಹುದು?**
   **ದೇವರಲ್ಲಿ ನಿಮಗಿರುವ ನಂಬಿಕೆಯನ್ನು ಇತರರಿಗೆ ಹೇಳುವದು, ಶಾಲೆಯಲ್ಲಿ ಎದುರಾಗುವ ತೊಂದರೆಗಳಿಗೆ ವಿರುದ್ಧವಾಗಿ ನಿಲ್ಲುವದು, ನಿಮ್ಮ ತಂದೆತಾಯಿಗಳೊಂದಿಗೆ ಪ್ರಾಮಾಣಿಕರಾಗಿರುವದು.**

5. **ಹಾಮಾನನ ಮಾತಿನ ಮೇರೆಗೆ ಅರಸನಾದ ಅಹಷ್ವರೋಷನು ತಾನು ಹೊರಡಿಸಿದ ಆಜ್ಞೆಯನ್ನು ಯಾಕೆ ಬದಲಾಯಿಸಲಿಲ್ಲ; ಅಂದರೆ ನಿಗದಿಪಡಿಸಿದ ದಿನದಲ್ಲಿ ಯೆಹೂದ್ಯರನ್ನು ಯಾಕೆ ಕೊಲ್ಲಿಸಲಿಲ್ಲ?**
   **ಬಾಬೆಲ್ ಸಾಮ್ರಾಜ್ಯವನ್ನು ಮೇದ್ಯರು ಮತ್ತು ಪಾರಸಿಯರು ಜಯಿಸಿದ್ದರು ಆದ್ದರಿಂದ ಅವರ ನಿಯಮಗಳನ್ನು ಬದಲಾಯಿಸುವಂತಿರಲಿಲ್ಲ.**

## ಅಸೈನ್ಮೆಂಟ್ 4

**ಧೈರ್ಯವನ್ನು ಅಭ್ಯಾಸ ಮಾಡಿರಿ ಮತ್ತು ನಾನು ಕ್ರೈಸ್ತನೆಂದು ಯಾರಿಗಾದರೂ ಹೇಳಿರಿ.**

ಟೀಚರ್: ಇಂದು ನಮ್ಮನ್ನು ಭೇಟಿ ಮಾಡಲು ಬೇರೊಬ್ಬರು ಬರುತ್ತಿದ್ದಾರೆ. ಎಲ್ಲರೂ, ದಯವಿಟ್ಟು ಎಸ್ತೇರ್ ರಾಣಿಯನ್ನು ಸ್ವಾಗತಿಸಿರಿ!

ಎಸ್ತೇರಳು: ಹಲೋ, ಎಲ್ಲರಿಗೂ ನಮಸ್ಕಾರ. ನಿಮ್ಮನ್ನು ಭೇಟಿ ಮಾಡುವ ಅವಕಾಶ ಸಿಕ್ಕಿದ್ದಕ್ಕೆ ನನಗೆ ಬಹಳ ಖುಷಿಯಾಗುತ್ತಿದೆ.

ಟೀಚರ್: ಇಂದು ನಾವು ನಿಮ್ಮ ಕಥೆಯನ್ನೇ ಕಲಿತುಕೊಳ್ಳುತ್ತಾ ಇದ್ದೇವೆ. ನೀವು ಹೇಗೆ ರಾಣಿಯಾದಿರಿ ಎಂದು ಹೇಳಿರಿ.

ಎಸ್ತೇರಳು: ಗಣ್ಯರೆದುರಿನಲ್ಲಿ ಅವಿಧೇಯಳಾಗಿ ತನ್ನನ್ನು ಅವಮಾನಪಡಿಸಿದ್ದಕ್ಕಾಗಿ ಅರಸನಾದ ಅಹಷ್ವರೋಷನು ತನ್ನ ಹೆಂಡತಿಯಾದ ವಷ್ಟಿಯನ್ನು ತೆಗೆದುಹಾಕಿದ ಸಮಯದಲ್ಲಿ ನಾನು ನನ್ನ ಚಿಕ್ಕಪ್ಪನಾದ ಮೊರ್ದೆಕೈ ಜೊತೆ ವಾಸಿಸುತ್ತಿದ್ದೆನು. ಯಾರು ರಾಣಿಯಾಗಬೇಕೆಂಬದನ್ನು ನಿಶ್ಚಯಿಸಲು ಹುಡುಗಿಯರನ್ನೆಲ್ಲಾ ಸೌಂದರ್ಯ ಸ್ಪರ್ಧೆಗೆ ಕರೆಸಿದರು. ಮೊರ್ದೆಕೈನನ್ನು ಬಿಟ್ಟು ಹೋಗಲು ನನಗೆ ಬಹಳ ಹೆದರಿಕೆಯಿತ್ತು, ಆದರೆ ಆತನು ನನ್ನನ್ನು ಪ್ರೋತ್ಸಾಹಪಡಿಸಿದನು. ನಾವು ಒಂದು ವರ್ಷಗಳಕಾಲ ಸಿದ್ಧತೆಗಳು ಮತ್ತು ಸೌಂದರ್ಯದ ಚಿಕಿತ್ಸೆಗಳಲ್ಲಿ ಭಾಗಿಯಾದೆವು. ಕೆಲವು ಹುಡುಗಿಯರು ಸ್ವಾರ್ಥರಾಗಿದ್ದರು, ಕೆಲವರು ಒಳ್ಳೆಯವರಾಗಿದ್ದರು ಮತ್ತು ಅನೇಕರು ನನಗಿಂತಲೂ ಸುಂದರವಾಗಿದ್ದಾರೆ ಎಂದು ನನಗೆ ಅನ್ನಿಸಿತು. ಆದರೆ ನಮ್ಮ ಮೇಲೆ ಮೇಲ್ವಿಚಾರಕನಾಗಿದ್ದ ವ್ಯಕ್ತಿಯ ಬಳಿ ನನಗೆ ದಯೆ ದೊರಕಿತು ಆದ್ದರಿಂದ ಅರಸನನ್ನು ಭೇಟಿಯಾಗುವ ನನ್ನ ಸರದಿ ಬಂದಾಗ ನಾನು ಆತನ ಸಲಹೆಗಳಂತೆ ನಡೆದುಕೊಂಡೆನು. ಆತನು ನನ್ನನ್ನು ಯಾಕೆ ಆರಿಸಿಕೊಂಡನೆಂಬದು ನನಗೆ ಗೊತ್ತಿಲ್ಲ, ಆದರೆ ನಾನೇ ಸಾಮ್ರಾಜ್ಯದ ರಾಣಿಯಾದೆನು.

ಟೀಚರ್: ಆಹಾ, ಕನಸು ನನಸಾದಂತಾಗಿರಬಹುದು! ರಾಣಿಯಾದ ನಂತರ ಜೀವನವು ಹೇಗಿದೆ?

ಎಸ್ತೇರಳು: ನಾನು ಅರಸನ ಸೇವೆ ಮಾಡುತ್ತೇನೆ ಮತ್ತು ಸಹಜವಾಗಿ ಆಗಾಗ ಔತಣ ಕೂಟಗಳು ಹಾಗೂ ಸಮಾರಂಭಗಳಿಗೆ ಹೋಗುತ್ತೇನೆ ಮತ್ತು ನಮ್ಮ ಸಾಮ್ರಾಜ್ಯದ ಆಯಾ ಭಾಗಗಳಿಂದ ಬರುವ ಅಧಿಕಾರಿಗಳ ಹೆಂಡತಿಯರಿಗೆ ಕೂಟಗಳನ್ನು ಏರ್ಪಡಿಸುತ್ತೇನೆ.

ಟೀಚರ್: ಹಾಮಾನನಿಗೆ ಏನಾಯಿತು?

ಎಸ್ತೇರಳು: ನಿರ್ದಿಷ್ಟವಾದ ಒಂದು ದಿನದಲ್ಲಿ ಯೆಹೂದ್ಯರನ್ನೆಲ್ಲಾ ಕೊಲ್ಲಬೇಕೆಂಬ ಆಜ್ಞೆಯನ್ನು ಅರಸನು ಹೊರಡಿಸುವಂತೆ ಅವನು ಮಾಡಿದನು. ನನ್ನ ಜನರ ವಿಷಯದಲ್ಲಿ ನನಗೆ ಬಹಳ ಗಾಬರಿಯಾಯಿತು, ಆದರೆ ಅರಮನೆಯಲ್ಲಿ ಯಾರಿಗೂ ಅದರ ಬಗ್ಗೆ ತಿಳಿದಿರಲಿಲ್ಲ ಯಾಕಂದರೆ ನಾನು ಯೆಹೂದ್ಯಳೆಂದು ಯಾರಿಗೂ ಹೇಳಿರಲಿಲ್ಲ. ನಂತರ ಎಲ್ಲವೂ ಕೈಮೀರಿ ಹೋಗಿತ್ತು. ಹಾಮಾನನು ನನ್ನ ಚಿಕ್ಕಪ್ಪನಾದ ಮೊರ್ದೆಕೈಯನ್ನು ಕೊಂದು ತನ್ನ ಮನೆಯ ಎದುರಿನ ನೇಣದ ಕಂಬಕ್ಕೆ ಹಾಕಿಸಬೇಕೆಂದು ತೀರ್ಮಾನಿಸಿದ್ದನು. ಆದರೆ ಒಂದುದಿನ ರಾತ್ರಿ ಅವನು ಅರಸನ ಅನುಮತಿಯನ್ನು ಕೇಳಲು ಹೋದನು, ಆಗ ಅರಸನು ಹಿಂದಿನ ದಾಖಲೆಗಳನ್ನು ಕೇಳಿಸಿಕೊಳ್ಳುತ್ತಿದ್ದನು ಮತ್ತು ನನ್ನ ಚಿಕ್ಕಪ್ಪನು ಕೆಲವು ದಿನದ ಹಿಂದೆ ಆತನ ಪ್ರಾಣ ಉಳಿಸಿದ್ದನ್ನು ನೆನಪು ಮಾಡಿಕೊಂಡನು. ಹಾಮಾನಾನು ಮೊರ್ದೆಕೈಯನ್ನು ಕೊಲ್ಲುವ ಬದಲು, ಹಾಮಾನನೇ ಮೊರ್ದೆಕೈಗೆ ರಾಜವಸ್ತ್ರಗಳನ್ನು ಹಾಕಿಸಿ ಅವನನ್ನು ಕುದುರೆಯ ಮೇಲೆ ಕೂರಿಸಿಕೊಂಡು ಇವನು ಅರಸನ ಸನ್ಮಾನಕ್ಕೆ ಯೋಗ್ಯನು ಎಂದು ಪಟ್ಟಣವೆಲ್ಲಾ ಸಾರಿ ಹೇಳಿಸು ಎಂದು ಅರಸನು ಆಜ್ಞಾಪಿಸಿದನು.

ಟೀಚರ್: ಅದರಿಂದ ನಿನ್ನ ಜನರು ತಪ್ಪಿಸಿಕೊಂಡರೇ?

ಎಸ್ತೇರಳು: ಇಲ್ಲ, ಯಾಕಂದರೆ ಮೇದ್ಯ ಮತ್ತು ಪಾರಸಿಯ ಸಾಮ್ರಾಜ್ಯದಲ್ಲಿ ಯಾವುದೇ ಆಜ್ಞೆಯನ್ನು ಹೊರಡಿಸಿದರೂ ಅದನ್ನು ಬದಲಾಯಿಸಲು ಆಗುವದಿಲ್ಲ. ಘೋರವಾದ ಆ ಆಜ್ಞೆಯ ಅಪಾಯ ನಮ್ಮ ಮೇಲೆ ಇನ್ನೂ ಇತ್ತು.

ಟೀಚರ್: ನೀವೇನು ಮಾಡಿದಿರಿ?

ಎಸ್ತೇರಳು: ಮೊರ್ದೆಕೈ ನನ್ನನ್ನು ಮತ್ತೊಮ್ಮೆ ಪ್ರೋತ್ಸಾಹಪಡಿಸಿದನು ಮತ್ತು ಸಹಾಯಕ್ಕಾಗಿ ಅರಸನ ಬಳಿಗೆ ಹೋಗುವಂತೆ ಹೇಳಿದನು. ಅದು ಬಹಳ ಅಪಾಯದ ಕೆಲಸವಾಗಿತ್ತು. ನಾನು ರಾಣಿಯಾಗಿದ್ದರೂ, ಅರಸನು ಕರೆಯಲಿಲ್ಲವೆಂದರೆ ಆತನ ಬಳಿಗೆ ಹೋಗುವ ಅನುಮತಿ ನನಗೆ ಇರಲಿಲ್ಲ, ಒಂದುವೇಳೆ ಹೋದರೆ ಮರಣದಂಡನೆ ಅನುಭವಿಸಬೇಕಾಗಿತ್ತು. ಆದರೆ ಮೊರ್ದೆಕೈ ನನಗೆ ನೀನು ಈ ಸಂದರ್ಭಕ್ಕಾಗಿಯೇ ರಾಣಿಯಾಗಿರಬಹುದು ಆದ್ದರಿಂದ ಧೈರ್ಯವಾಗಿರು ಎಂದು ಹೇಳಿದನು. ಕೆಲವು ದಿನಗಳ ಕಾಲ ಯೆಹೂದ್ಯರೆಲ್ಲರಿಗೂ ನನಗೋಸ್ಕರ ಉಪವಾಸವಿದ್ದು ಪ್ರಾರ್ಥನೆ ಮಾಡಿರಿ ಎಂದು ಹೇಳಿದೆನು. ನಂತರ ನಾನು ಸಿದ್ಧಳಾಗಿ ಅರಸನ ಬಳಿಗೆ ಹೋದೆನು. ನನ್ನ ನೋವನ್ನು ತೋರಿಸಿಕೊಳ್ಳದಿರಲು ನಾನು ಪ್ರಯತ್ನಿಸಿದೆನು, ಆದರು ನಡುಗುತ್ತಾ ಇದ್ದೆನು. ಅರಸನು ನಗುಮುಖದಿಂದ, ನನ್ನನ್ನು ಉಳಿಸಲು ತನ್ನ ರಾಜದಂಡವನ್ನು ಚಾಚಿದನು, ಆತನ ಎದುರಿನಲ್ಲಿ ನಿಂತುಕೊಂಡಿರುವದು ನನಗೆ ಬಹಳ ಕಷ್ಟವಾಗಿತ್ತು. ನಂತರ ನಾನು ಅರಸನನ್ನು ಮತ್ತು ಹಾಮಾನನನ್ನು ಔತಣಕೂಟಕ್ಕೆ ಆಹ್ವಾನಿಸಿದೆನು, ಆಮೇಲೆ ಇನ್ನೊಂದು ಔತಣಕೂಟಕ್ಕೂ ಬರುವಂತೆ ಹೇಳಿದೆನು. ಅಂತಿಮವಾಗಿ, ಮತ್ತೊಂದು ಕ್ಲುಪ್ತವಾದ ಪ್ರಾರ್ಥನೆಯ ನಂತರ, ನಾನು ಅರಸನಿಗೆ ಆಜ್ಞೆ ಮತ್ತು ನನ್ನ ಜನರ ಬಗ್ಗೆ ಹೇಳಿದೆನು. ಹಾಮಾನನು ಅಧಿಕಾರದಲ್ಲಿ ಎರಡನೇ ಸ್ಥಾನವುಳ್ಳವನಾಗಿದ್ದನು, ಆದ್ದರಿಂದ ಅರಸನು ನನ್ನನ್ನು ಮತ್ತು ನನ್ನ ಜನರನ್ನು ಉಳಿಸುವ ಬದಲು ಹಾಮಾನನನ್ನೇ ಉಳಿಸುವನೇನೋ ಎಂಬ ಭಯ ನನಗೆ ಬಹಳ ಇತ್ತು. ಆದರೆ ಅರಸನು ರೌದ್ರವುಳ್ಳವನಾಗಿ, ಹಾಮಾನನು ಮೊರ್ದೆಕೈಗಾಗಿ ಸಿದ್ಧಮಾಡಿಸಿದ್ದ ನೇಣು ಕಂಬಕ್ಕೆ ಅವನನ್ನೇ ಹಾಕಿಸಿದನು. ನಂತರ ಅರಸನು ಮೊರ್ದೆಕೈಯನ್ನು ಅವನ ಸ್ಥಾನಕ್ಕೆ ತಂದನು, ಮತ್ತು ನಮ್ಮ ಜನರು ಕೊಲ್ಲಲ್ಪಡದೆ ತಮ್ಮನ್ನು ಸಮರ್ಥಿಸಿಕೊಳ್ಳಲು ಅರಸನ ಪರವಾಗಿ ನಾವು ಮತ್ತೊಂದು ಆಜ್ಞೆಯನ್ನು ಹೊರಡಿಸಿದೆವು.


ಟೀಚರ್: ಎಸ್ತೇರ್, ಬಂದದ್ದಕ್ಕಾಗಿ ಧನ್ಯವಾದಗಳು.

ಎಸ್ತೇರ್: ನನ್ನನ್ನು ಕರೆಸಿಕೊಂಡದ್ದಕ್ಕಾಗಿ ನಿಮಗೂ ಧನ್ಯವಾದಗಳು.

## ಚಟುವಟಿಕೆ 4

### ಇತರರಿಗೆ ಆದ್ಯತೆಯನ್ನು ಕೊಡುವದು

ಇತರರಿಗೆ ಆದ್ಯತೆ ಕೊಡುವದು ಹೇಗೆ ಎಂಬ ವಿಷಯದಲ್ಲಿ ಜನರಿಗೆ ಸಹಾಯ ಮಾಡಲು, ಪೇಪರ್ ಬಾಲ್ ಮಾಡಿರಿ ಮತ್ತು ಅದನ್ನು ಪ್ರತಿಯೊಬ್ಬ ವ್ಯಕ್ತಿಗೂ ಎಸೆಯುವಂತೆ ಮಕ್ಕಳಿಗೆ ಹೇಳಿರಿ. ಯಾರ ಕೈಗೆ ಚೆಂಡು ಸಿಗುತ್ತದೆಯೋ ಅವರು ಇತರರಿಗೆ ಆದ್ಯತೆ ಕೊಡುವದು ಹೇಗೆ ಎಂದು ಹೇಳಬೇಕು. ಉದಾಹರಣೆಗೆ, ನನ್ನ ಜೊತೆಯಲ್ಲಿ ಓದುವವನಿಗೆ ತರಗತಿಯೊಳಗೆ ಮೊದಲು ಹೋಗುವ ಅವಕಾಶ ಕೊಡುವ ಮೂಲಕ ನಾನು ಆತನಿಗೆ ಆದ್ಯತೆಯನ್ನು ಕೊಡಬಹುದು.



## ರಾಜಮನೆತನದ ಔತಣ 4

### ರಾಣಿಯ ವಿಶಾಲ ಹೃದಯ





ಸಾಮಗ್ರಿಗಳು:

- ಹೃದಯದ ಆಕಾರದಲ್ಲಿ ಕೂಕಿ ಕಟ್ಟರ್ ಅಥವಾ ಕಾರ್ಡ್ ಸ್ಟಾಕ್ ಮತ್ತು ಕತ್ತಿ.
- ಕೊಯ್ದಿರುವ ಹಣ್ಣು
- ಕಡ್ಡಿಗಳು

ಸೂಚನೆಗಳು:

1. ಕೂಕಿ ಕಟ್ಟರ್ ನಿಂದ ಹಣ್ಣನ್ನು ಹೃದಯದ ಆಕಾರದಲ್ಲಿ ಕತ್ತರಿಸಿರಿ. ಒಂದುವೇಳೆ ನಿಮ್ಮ ಹತ್ತಿರ ಹೃದಯದ ಆಕಾರದಲ್ಲಿ ಕತ್ತರಿಸುವ ಕೂಕಿ ಕಟ್ಟರ್ ಇಲ್ಲದಿರುವದಾದರೆ, ಕಾರ್ಡ್ ಬೋರ್ಡ್ ಅಥವಾ ಕಾರ್ಡ್ ಸ್ಟಾಕ್ ನಿಂದ ಹೃದಯದ ಆಕಾರವನ್ನು ಕತ್ತರಿಸಿರಿ. ಕಾರ್ಡ್ ಬೋರ್ಡ್ ಹೃದಯವನ್ನು ಹಣ್ಣಿನ ಮೇಲೆ ಇಡಿರಿ ಮತ್ತು ಕತ್ತಿಯಿಂದ ಅದನ್ನು ಕತ್ತರಿಸಿರಿ.
2. ಹಣ್ಣಿನಲ್ಲಿ ಕತ್ತರಿಸಲಾಗಿರುವ ಹೃದಯದ ಆಕಾರವನ್ನು ಕಡ್ಡಿಗಳಿಗೆ ಚುಚ್ಚಿರಿ.

ಎಸ್ತೇರ್ ರಾಣಿಯು ಇತರರ ವಿಷಯದಲ್ಲಿ ವಿಶಾಲ ಹೃದಯಿಯಾಗಿದ್ದನ್ನು ನೆನಪಿಸಿಕೊಂಡು ಸುಂದರವಾಗಿರುವ ಪದಾರ್ಥಗಳನ್ನು ಸವಿಯಿರಿ!




## ತೋಟದ ಆಟಗಳು 4

### ಬಿಂಗೊ ಲಿಂಗೊ



ತರಗತಿಯ ಸಹಾಯದಿಂದ, ಪಾಠದಲ್ಲಿರುವ 50 ಅಥವಾ 60 ಪ್ರಮುಖ ಪದಗಳ ಪಟ್ಟಿಯನ್ನು ಮಾಡಿರಿ. ಸುಲಭವಾಗಿ ಕಾಣಿಸುವ ಸ್ಥಳದಲ್ಲಿ ಪಟ್ಟಿಯನ್ನು ಹಾಕಿರಿ. ಪ್ರತಿಯೊಂದು ಪದವನ್ನು ಸಣ್ಣ ಹಾಳೆಯ ಮೇಲೆ ಬರೆಯಿರಿ, ಅದನ್ನು ಮಧ್ಯಕ್ಕೆ ಮಡಚಿರಿ, ಮತ್ತು ಅದನ್ನು ಯಾವುದಾದರು ಕ್ಯಾನ್ ಅಥವಾ ಕಂಟೇನರ್ ಒಳಗೆ ಹಾಕಿರಿ. ಮಕ್ಕಳೇ ತಮ್ಮ ಬಿಂಗೊ ಕಾರ್ಡ್ ಗಳನ್ನು ಮಾಡಬೇಕು, ಅಂದರೆ ಒಂದು ಹಾಳೆಯನ್ನು ಎರಡು ಸಲ ಮಧ್ಯಕ್ಕೆ ಪ್ರತಿಯೊಂದು ದಿಕ್ಕಿನಲ್ಲಿ ಮಡಚುವ ಮೂಲಕ ತಮ್ಮ ಹಾಳೆಯಲ್ಲಿ 16 ಚತಷ್ಕೋನಗಳನ್ನು ಮಾಡಬೇಕು. ಪ್ರತಿಯೊಂದು ಚತುಷ್ಕೋನದಲ್ಲಿ ಅವರು ಒಂದು ಪದವನ್ನು ಬರೆಯಬೇಕು. ಬೀನ್ಸ್, ಕಲ್ಲುಗಳು, ಇತ್ಯಾದಿ. ಇವುಗಳನ್ನು ಮಾರ್ಕರ್ ಗಳಾಗಿ ಉಪಯೋಗಿಸಬಹುದು. ಅವರು ತಮ್ಮ ಕಾರ್ಡ್ ಅನ್ನು ಹಲವು ಸಲ ಉಪಯೋಗಿಸ ಬಹುದು ಅಥವಾ ಜೊತೆಗಾರರೊಂದಿಗೆ ಬದಲಾಯಿಸಿಕೊಳ್ಳಬಹುದು. ಟೀಚರ್ ಕ್ಯಾನ್ ಒಳಗಿನಿಂದ ಒಂದು ಪದವನ್ನು ತೆರೆಯಬೇಕು ಮತ್ತು ಅದನ್ನು ಜೋರಾಗಿ ಹೇಳಬೇಕು. ಒಂದುವೇಳೆ ಯಾವುದಾದರು ಮಗುವಿನ ಬಳಿ ಕಾರ್ಡ್ ಮೇಲೆ ಆ ಪದ ಇರುವದಾದರೆ, ಅವನು ಅದನ್ನು ಮಾರ್ಕರ್ ಮೂಲಕ ಮುಚ್ಚಬೇಕು. ಯಾವ ವ್ಯಕ್ತಿ ತನ್ನ ಕಾರ್ಡ್ ಅನ್ನು ಮೊದಲು ತುಂಬಿಸುತ್ತಾನೋ ಅವನು “ಬಿಂಗೊ ಲಿಂಗೊ” ಎಂದು ಕೂಗಬೇಕು. ಅವನೇ/ಅವಳೇ ಆಟದಲ್ಲಿ ಗೆಲ್ಲುತ್ತಾರೆ.

### ಕ್ಯಾಮಲ್ ರೇಸ್



10-15 ಮಕ್ಕಳನ್ನು ಹೊಂದಿರುವ ಸಮಾನವಾದ ತಂಡಗಳನ್ನು ರೂಪಿಸಿರಿ. ಆಟವಾಡಲು ಅವರು ನಿಲ್ಲುವಾಗ ಅವರ ನಡುವೆ ಹೆಚ್ಚು ಅಂತರವಿರಬೇಕು. ಕೋಣೆಯ ಮತ್ತೊಂದು ಕಡೆಯಲ್ಲಿ ಗುರಿಯನ್ನು ನಿಗದಿಪಡಿಸಿರಿ. ಆಟ ಪ್ರಾರಂಭವಾದ ನಂತರ, ಸಾಲಿನಲ್ಲಿ ನಿಂತಿರುವ ಮೊದಲನೆಯ ಆಟಗಾರನು ಓಡಬೇಕು ಮತ್ತು ಒಂಟೆಯಂತೆ ಗುರಿಯ ಕಡೆಗೆ ಹೋಗಿ, ಹಿಂದಿರುಗಿ ಮತ್ತೆ ತನ್ನ ತಂಡದ ಬಳಿಗೆ ಬರಬೇಕು. ಹಿಂದಿರುಗಿ ಬರುವವನು ಸಾಲಿನಲ್ಲಿರುವ ನಂತರ ಆಟಗಾರನ ಕೈ ಕುಲುಕುವಾಗ, ಆ ಆಟಗಾರನು ರಿಲೇ ಓಟವನ್ನು

ಮುಂದುವರೆಸಬೇಕು. ಯಾವ ತಂಡದಲ್ಲಿರುವ ಆಟಗಾರರೆಲ್ಲರೂ ರಿಲೆಯನ್ನು ಮುಗಿಸುತ್ತಾರೋ ಆ ತಂಡವು ಗೆಲ್ಲುವದು. ಓಟದ ವಿಧಾನವನ್ನು ಬದಲಾಯಿಸುವ ಮೂಲಕ ಅಂದರೆ, ಒಂದೇ ಕಾಲಿನಲ್ಲಿ ಜಿಗಿಯುತ್ತಾ ಸಾಗಿ, ಮುಕ್ತಾಯದ ಗೆರೆಯ ಹತ್ತಿರಕ್ಕೆ ಹಿಂದಿರುಗಿ ಬರುವದು ಇತ್ಯಾದಿ ಆಟವನ್ನು ಮತ್ತೆ ಆಡಿಸಿರಿ.

# 5. ಧೈರ್ಯವು ರಕ್ಷಿಸುತ್ತದೆ

## ದಾನಿಯೇಲ 5: ಅನುದಿನದ ಪ್ರಾರ್ಥನೆಗಳು ಮತ್ತು ಸಿಂಹದ ಗವಿ

### ಗಮನ ಸೆಳೆಯುವವರು / ಚಪ್ಪಾಳೆ 5

“ಧೈರ್ಯವು ತಾಳ್ಮೆಯುಳ್ಳದ್ದಾಗಿರುತ್ತದೆ”

1. ಜೊತೆಗಾರನೊಂದಿಗೆ, ಎರಡು ಕೈಗಳಿಂದ ಚಪ್ಪಾಳೆ ಹೊಡೆಯಿರಿ
2. ಕೈಗಳನ್ನು ಎದುರುಬದುರಾಗಿ ಇಡಿರಿ ಮತ್ತು ಇನ್ನೊಮ್ಮೆ ಚಪ್ಪಾಳೆ ಹೊಡೆಯಿರಿ
3. ಮೊದಲನೆಯ ಚಪ್ಪಾಳೆಯನ್ನು ಪುನರಾವರ್ತಿಸಿರಿ
4. ಬಲಗೈಯಿಂದ ಒಟ್ಟಾಗಿ ಚಪ್ಪಾಳೆ ಹೊಡೆಯಿರಿ, ನಂತರ ಎಡ, ನಂತರ ಬಲ
5. ಅಂತಿಮವಾಗಿ ಎರಡೂ ಕೈಗಳಿಂದ ಒಟ್ಟಾಗಿ ಚಪ್ಪಾಳೆ ಹೊಡೆಯುವ ಮೂಲಕ ಮುಗಿಸಿರಿ

### ಕಂಠಪಾಠ ವಚನ 5

ಹಿಬ್ರಿಯರಿಗೆ 10:36 “ದೇವರ ಚಿತ್ತವನ್ನು ನೆರವೇರಿಸಿ, ಅವರು ವಾಗ್ದಾನಮಾಡಿರುವುದನ್ನು ಪಡೆದುಕೊಳ್ಳುವಂತೆ, ನೀವೂ ದೃಢಮನಸ್ಕರಾಗಿರಬೇಕು.”

### ನಾಟಕ 5: ಕ್ಯಾಮೆಲ್ ಕಾರವಾನ್ (ಗುಂಪುಗಳಲ್ಲಿ ಪ್ರಯಾಣ ಮಾಡುವದು)

ಕಾಮೆಲಿಯಾ: ಅಬ್ಬಾ, ಈ ಮರಳುಕಾಡಿನ ಉರಿ ಬಿಸಿನಿಂದ ಖಂಡಿತವಾಗಿಯೂ ನನ್ನ ಸುಂದರವಾದ ತ್ವಚೆ ಹಾಳಾಗುತ್ತದೆ!

ಕಾಮೆಲೊಟ್: ನೀನು ನಿನ್ನ ಕೋಟ್ ಹಾಕಿಕೊಂಡರೆ ಒಳ್ಳೇದು.

ಕಾಮೆಲಿಯಾ: ಬಿಸಿಲಿನ ತಾಪ ಬಹಳ ಇದೆ ಎಂದು ನನಗೆ ಗೊತ್ತು. ಆದರೂ ನಾವು ಯಾಕೆ ಇಲ್ಲಿಗೆ ಬಂದಿದ್ದೇವೆ? ನಾನು ಪರ್ಶಿಯಾದಲ್ಲಿರುವ ಮನೆಗೆ ಹೋಗಬೇಕು. ಹೀಗೇ ಗುಂಪಿನಲ್ಲಿ ನಾವು ಇನ್ನೆಷ್ಟು ದೂರ ನಡೆಯಬೇಕು?

ಕಾಮೆಲೊಟ್: ಇಡೀ ದಿನ. ಮತ್ತು ನಾಳೆ ನಾವೇನು ಮಾಡಬೇಕೆಂದು ನಿನಗೆ ಗೊತ್ತಿದೆ ಎಂದು ನೆನೆಸುತ್ತೇನೆ?

ಕಾಮೆಲಿಯಾ: ನಡೆಯಬೇಕು?

ಕಾಮೆಲೊಟ್: ಅದು ಸರಿ! ಮಾರಣೆಯ ದಿನ ಏನು ಮಾಡಬೇಕು ಗೊತ್ತೇ?

ಕಾಮೆಲಿಯಾ: ಮಾರಣೆಯ ದಿನವೂ ನಡೆಯಬೇಕೇ?

ಕಾಮೆಲೊಟ್: ಹೌದು! ಇದೆಲ್ಲಾ ನಿನಗೆ ಹೇಗೆ ಗೊತ್ತಾಯಿತು?

ಕಾಮೆಲಿಯಾ: ಆಹಾ! ಪ್ರತಿದಿನ ಮುಂಜಾನೆ ನಾವು ಏಳುತ್ತೇವೆ ಮತ್ತು ಒಂದೇ ತಿಂಡಿಯನ್ನು ತಿನ್ನುತ್ತೇವೆ ನಂತರ ಒಟ್ಟಾಗಿ ಪ್ರಾರ್ಥನೆ ಮಾಡುತ್ತೇವೆ, ಆಮೇಲೆ ನಡೆಯುತ್ತಲೇ ಇರುತ್ತೇವೆ, ಮತ್ತೆ ಊಟಕ್ಕಾಗಿ ನಿಲ್ಲುತ್ತೇವೆ ಮತ್ತು ಅದೇ ಊಟವನ್ನು ತಿಂದು, ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇವೆ, ಮತ್ತೆ ನಡೆಯುವದನ್ನು ಶುರು ಮಾಡುತ್ತೇವೆ, ಆಮೇಲೆ ರಾತ್ರಿ ಅದೇ ಊಟ ತಿಂದು, ಪ್ರಾರ್ಥನೆ ಮಾಡಿ, ಮಲಗಿಕೊಳ್ಳುತ್ತೇವೆ. ಮಾಡಿದ ಕಾರ್ಯಗಳನ್ನೇ ಮಾಡಿ ಮಾಡಿ ನನಗೆ ಸಾಕಾಗಿದೆ! ಮಲಗಿದಾಗಲೂ ನಡೆಯುವ ಕನಸೇ ಬೀಳುತ್ತಿವೆ! ಈಗ ನನಗೇನಾಗುತ್ತಿದೆ ಗೊತ್ತಾ? ನನಗೆ ಬಹಳ ಬಾಯಾರಿಕೆಯಾಗಿದೆ! ಅದು ಬಹುತೇಕ ಎಂದಿಗೂ ಆಗುವದಿಲ್ಲ! ಈಗ ನಾನು ಸ್ವಲ್ಪ ನಿಲ್ಲಲೇ?

ಕಾಮೆಲೊಟ್: ಏನು, ಇಲ್ಲಿ ನಿಲ್ಲುವದೋ? ನೋಡೋಣ . . . ಅಲ್ಲಿ ನೀರು ಇಲ್ಲ. ನೋಡು! ಅಲ್ಲಿಯೂ ಇಲ್ಲ. ಅಲ್ಲೇನಿದೆ ನೋಡು? ಅಲ್ಲಿಯೂ ನೀರು ಇಲ್ಲ. ಈ ಜಾಗದಲ್ಲಿ ನಿಲ್ಲುವುದರಿಂದ ಯಾವುದೇ ಪ್ರಯೋಜನ ಇಲ್ಲ.

ಕಾಮೆಲಿಯಾ: ಅಯ್ಯೋ ... ಅಥವಾ ನಾವು ನಿಲ್ಲುವ ಕಡೆಗಳಲ್ಲಿ ಪ್ರಾರ್ಥನೆ ಮಾಡುವದು ಬೇಡ? ಮಾಡಿಮಾಡಿ ಸಾಕಾಗಿದೆ. ಇದಲ್ಲದೆ ನಮ್ಮ ಬಹುತೇಕ ನಡಿಗೆಯು ಪ್ರಾರ್ಥನೆ ಮಾಡುವದನ್ನು ನಿಲ್ಲಿಸಿದೆ ಮತ್ತು ಅದನ್ನು ಮುಂದುವರೆಸಿ ಸಾಕಾಯಿತೆಂದು ಯೋಚಿಸುತ್ತಿದೆ. ಇದರಿಂದ ದೊಡ್ಡ ವ್ಯತ್ಯಾಸವೇನೂ ಆಗುವದಿಲ್ಲ ಅಲ್ಲವೇ?

ಕಾಮೆಲೊಟ್: ಇದು ಮನೋರಂಜನೆಯ ವಿಷಯವಲ್ಲ. ನಮಗೆ ಎಲ್ಲಾ ಸಮಯಗಳಲ್ಲಿಯೂ ದೇವರ ಸಹಾಯ ಬೇಕು!

ಕಾಮೆಲಿಯಾ: ನೀರಿಗಿಂತಲೂ ದೇವರು ಮುಖ್ಯವೇ?

ಕಾಮೆಲೊಟ್: ಹೌದು, ಸನ್ ಸ್ಕ್ರೀನ್. ಅಥವಾ ಮೊಬೈಲ್ ಗಿಂತಲೂ ಹೆಚ್ಚು.

ಕಾಮೆಲಿಯಾ: ನನ್ನಿಂದ ಆಗುವದಿಲ್ಲ, ಇನ್ನು ಮುಂದೆ ನೀನೇ ನನ್ನನ್ನು ಹೊತ್ತುಕೊಂಡು ಹೋಗಬೇಕು.

ಕಾಮೆಲೊಟ್: ಅಯ್ಯೋ! ನನಗೆ ಬಾಯಾರಿಕೆಯಾಗಿದೆ. ಒಂದೊಂದೇ ಹೆಜ್ಜೆ ಮುಂದೆ ಇಟ್ಟು ನಿಧಾನವಾಗಿ ನಡೆ.

ಪ್ರಕಟಿಸುವಾತನು: ಬಹಳ ಸಮಯದ ನಂತರ, ಅವರು ಓಯಸಿಸ್ ಬಳಿಗೆ ಬಂದರು.

ಕಾಮೆಲಿಯಾ: ಅಬ್ಬಬ್ಬಾ! ನಾನಂತೂ ಸತ್ತು ಹೋಗುತ್ತೇನೆ ಅಂದುಕೊಂಡಿದ್ದೆನು!

ಕಾಮೆಲೊಟ್: (ಅಗಿಯುತ್ತಾ) ನಾವೆಲ್ಲರೂ ಸಾಯುತ್ತೇವೆ!!! (ವೇದಿಕೆಯ ಕೆಳಗೆ ತಿನ್ನಲು ಮೂಗು ಅದ್ದುತ್ತದೆ)

ಕಾಮೆಲಿಯಾ: ಆ ಒಂಟೆಗಳು ಮಾತನಾಡುವದು ನಿನಗೆ ಕೇಳಿಸುತ್ತಿದೆಯೇ?

ಕಾಮೆಲೊಟ್: ಬೇರೆ ರಾಜ್ಯಗಳಿಂದ ಬಂದು ಪರವಾನಗಿ ಪತ್ರಗಳನ್ನು ಹೊಂದಿರುವವುಗಳೋ?

ಕಾಮೆಲಿಯಾ: ಹೌದು. ಅವರು ನಮಗಿಂತ ಮುಂಚೆ ನಿನ್ನೆಯೇ ಬಂದಿದ್ದಾರೆ, ಅವರು ಎಲ್ಲಾ ರೀತಿಯ ಹಾವುಗಳು, ದರೋಡೆಕೋರರು ಮತ್ತು ಮರಳು ಕಾಡಿನ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದರು. . .

ಕಾಮೆಲೊಟ್: ಸೀನುತ್ತದೆ ಮತ್ತು ಕಾಲುಗಳನ್ನು ಕೆರೆಯುತ್ತದೆ ಮತ್ತು ವೈಫೈ ಸಹ ಇಲ್ಲ ಎಂದು ಗುಣುಗುತ್ತಾ (ತಿನ್ನುವದನ್ನು ಮುಂದುವರೆಸುತ್ತದೆ)

ಕಾಮೆಲಿಯಾ: ದೇವರು ಎಲ್ಲಾ ಸಮಯಗಳಲ್ಲಿಯೂ ನಮ್ಮನ್ನು ಕಾಯುತ್ತಾರೆಯೇ ಎಂದು ನನಗೆ ಯೋಚನೆಯಾಗುತ್ತದೆ. ನಿನಗೊಂದು ವಿಷಯ ಗೊತ್ತೇ? ಊಟ ಮತ್ತು ನೀರು ಇರುವ ಓಯಸಿಸ್ ನಲ್ಲಿ ನನಗೆ ಆರಾಮಾಗಿದೆ . . . ಈಗ ದೇವರ ಬಗ್ಗೆ ಎಷ್ಟು ಬೇಕಾದರು ನಾನು ಮಾತನಾಡುತ್ತೇನೆ. ಕಷ್ಟದ ಸಮಯದಲ್ಲಿ ನಾವು ತಾಳ್ಮೆಯಿಂದ ದೇವರೊಂದಿಗೆ ಸಮಯ ಕಳೆದ ಕಾರಣ ಈಗ ಆತನು ಎಲ್ಲವನ್ನು ಸುಲಭವನ್ನಾಗಿಸಿದ್ದಾನೆ.

ಕಾಮೆಲೊಟ್: ಹೌದು, ನನಗೂ ಹಾಗೆ ಅನ್ನಿಸುತ್ತಿದೆ. ನೀನು ಊಟ ಮಾಡಲು ಬರುವೆಯಾ? ನನಗೆ ಹಸಿವೆಯಾಗುತ್ತಿದೆ.

## ಮುಖ್ಯ ಪಾಠ 5

ಈ ವಿಬಿಎಸ್ ಗೆ ಮತ್ತೊಮ್ಮೆ ಸ್ವಾಗತ! ನಾವು ಈ ವಾರ ಧೈರ್ಯದ ಕುರಿತಾಗಿರುವ ಎಲ್ಲಾ ರೀತಿಯ ವಿಷಯಗಳನ್ನು ಕಲಿತುಕೊಂಡಿದ್ದೇವೆ. ಇಂದು ನಾವು ಧೈರ್ಯವು ರಕ್ಷಿಸುತ್ತದೆ ಎಂಬದನ್ನು ಕಲಿತುಕೊಳ್ಳೋಣ. “ಧೈರ್ಯವು ರಕ್ಷಿಸುತ್ತದೆ” ಎಂದು ಎಲ್ಲರೂ ಹೇಳಿರಿ. ರಕ್ಷಣೆ ಹೊಂದುವದೆಂದರೆ ನೀವು ಮಾಡುತ್ತಿರುವ ಒಳ್ಳೆಯ ಕಾರ್ಯಗಳನ್ನು ಮುಂದುವರೆಸುವದು. ನಿನ್ನೆ ನೀವು ಏನು ಮಾಡಿರುವಿರಿ ಎಂಬದು ಮುಖ್ಯವಲ್ಲ. ಒಂದುವೇಳೆ ನೀವು ಉತ್ತಮವಾಗಿ ಯೇಸು ಕ್ರಿಸ್ತನನ್ನು ಹಿಂಬಾಲಿಸಿರುವದಾದರೆ, ಧನ್ಯವಾದಗಳು! ಆದರೆ ನಿನ್ನೆಯ ಮೇಲೆ ಭರವಸೆಯನ್ನಿಡಬೇಡಿರಿ; ಇಂದು ಮತ್ತೆ ಒಳ್ಳೆಯ ಕಾರ್ಯವನ್ನು ಮಾಡಿರಿ. ಒಂದುವೇಳೆ ನೀವು ಉತ್ತಮವಾಗಿ ಯೇಸು ಕ್ರಿಸ್ತನನ್ನು ಹಿಂಬಾಲಿಸದೆ ಇರುವದಾದರೆ, ಚಿಂತಿಸಬೇಡಿರಿ ಯಾಕಂದರೆ ಆತನು ನಿಮ್ಮ ಪಾಪಗಳಿಗೆ ಪೂರ್ಣ ಕ್ರಯವನ್ನು ಪಾವತಿಸಿದ್ದಾನೆ. ಆದರೆ ನಿನ್ನೆ ನೀವು ಮಾಡಿರುವ ಕೆಟ್ಟ ಕಾರ್ಯವು ಇಂದು ಒಳ್ಳೆಯ ಕಾರ್ಯ ಮಾಡದಂತೆ ನಿಮ್ಮನ್ನು ತಡೆಯುವದಕ್ಕೆ ಅವಕಾಶ ಕೊಡಬೇಡಿರಿ! “ಧೈರ್ಯವು ರಕ್ಷಿಸುತ್ತದೆ” ಎಂದು ಎಲ್ಲರೂ ಹೇಳಿರಿ.

ಧೈರ್ಯವು ದೇವರಿಗೆ ಪ್ರಥಮ ಸ್ಥಾನವನ್ನು ಕೊಡುವದು ಮಾತ್ರವಲ್ಲ ಬದಲಾಗಿ ರಕ್ಷಿಸುತ್ತದೆ ಮತ್ತು ಪ್ರತಿದಿನ ದೇವರಿಗೆ ಪ್ರಥಮ ಸ್ಥಾನವನ್ನು ಕೊಡುತ್ತದೆ. ಕೇವಲ ಒಮ್ಮೆ ಮಾತ್ರವಲ್ಲ ಬದಲಾಗಿ ಪ್ರತಿದಿನ ದೇವರಲ್ಲಿ ಭರವಸೆಯನ್ನಿಡಿರಿ. ಕೇವಲ ಒಮ್ಮೆ ಮಾತ್ರವಲ್ಲ ಬದಲಾಗಿ ಯಾವಾಗಲೂ ಸತ್ಯವನ್ನೇ ಹೇಳಿರಿ. ಕೇವಲ ಒಮ್ಮೆ ಮಾತ್ರವಲ್ಲ ಬದಲಾಗಿ ಯಾವಾಗಲೂ ಇತರರಿಗೆ ಆದ್ಯತೆಯನ್ನು ಕೊಡಿರಿ. ನಾವು ಪ್ರತಿದಿನ ನಮ್ಮ ಜೀವನಗಳನ್ನು ಆತನಿಗೆ ಒಪ್ಪಿಸಬೇಕು, ಆತನಿಗೆ ನಮ್ಮನ್ನು ಸಮರ್ಪಿಸಿ, ನಮಗೆ ಇಷ್ಟವಿಲ್ಲದಿದ್ದರೂ ಒಳ್ಳೆಯ ಕಾರ್ಯಗಳನ್ನೇ ಮಾಡಬೇಕು ಎಂದು ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ. ನಾವು ಮೊದಲನೆಯ ದಿನದಲ್ಲಿ ಕಲಿತುಕೊಂಡು ದಾನಿಯೇಲನು, ಪ್ರತಿದಿನ ತಪ್ಪದೆ ದಿನಕ್ಕೆ ಮೂರಾವರ್ತಿ ಪ್ರಾರ್ಥನೆ ಮಾಡುತ್ತಿದ್ದನು. ಅದೇ ಸಮಯದಲ್ಲಿ,

ಅವನು ಉತ್ತಮ ಆಡಳಿತಗಾರನಾದ ಕಾರಣದ ಅರಸನಾದ ದರ್ಯಾವೇಷನು ಅವನು ಇಡೀ ರಾಜ್ಯದ ಮೇಲೆ ಮೇಲ್ವಿಚಾರಕನನ್ನಾಗಿ ನೇಮಿಸಬೇಕೆಂದು ಬಯಸಿದನು. ಇದರಿಂದ ಅನೇಕರು ಹೊಟ್ಟೆಕಿಚ್ಚುಪಟ್ಟು ದಾನಿಯೇಲನ ಪ್ರಾರ್ಥನೆಯ ವಿಷಯದಲ್ಲಿ ಅರಸನಿಗೆ ಗೊತ್ತಾಗದಂತೆ ವಿರುದ್ಧವಾಗಿ ಆಜ್ಞೆಯನ್ನು ಅರಸನಿಂದ ಹೊರಡಿಸಿದರು. "ಧೈರ್ಯವು ರಕ್ಷಿಸುತ್ತದೆ" ಎಂದು ಎಲ್ಲರೂ ಹೇಳಿರಿ.

ಅರಸನ ಆಜ್ಞೆಗೆ ಹೆದರಿಕೊಳ್ಳದೆ, ದಾನಿಯೇಲನು ತನ್ನ ಕೋಣೆಯೊಳಗೆ ಹೋಗಿ ಯಥಾಪ್ರಕಾರ ದಿನಕ್ಕೆ ಮೂರಾವರ್ತಿ ಪ್ರಾರ್ಥನೆ ಮಾಡುತ್ತಾ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಿದ್ದನು. ಸರ್ವಶಕ್ತನಾಗಿರುವ ದೇವರು ಅರಸರು ಮತ್ತು ಆಜ್ಞೆಗಳಿಗಿಂತ ದೊಡ್ಡವನು ಎಂಬದನ್ನು ನೀವು ಅರಿತುಕೊಳ್ಳುವಾಗ, ಎಲ್ಲಾ ಒಳ್ಳೇ ಕಾರ್ಯಗಳು ದೇವರಿಂದ ಬರುತ್ತವೆ ಎಂಬದನ್ನು ನೀವು ಅರಿತುಕೊಳ್ಳುವಿರಿ ಮತ್ತು ಕಷ್ಟದ ಸಮಯದಲ್ಲಿಯೂ ದೇವರಿಗೆ ಕೃತಜ್ಞತೆ ಸಲ್ಲಿಸುವಿರಿ. ಒಂದುದಿನ, ದಾನಿಯೇಲನು ಪ್ರಾರ್ಥನೆ ಮಾಡುತ್ತಾ, ದೇವರ ಸಹಾಯವನ್ನು ಬೇಡಿಕೊಳ್ಳುತ್ತಿದ್ದನು. ಆ ಸಮಯದಲ್ಲಿ, ಅವನ ವೈರಿಗಳು ಅವನನ್ನು ಹಿಡಿದರು ಮತ್ತು ಆಜ್ಞೆಯನ್ನು ಮೀರಿ ಪ್ರಾರ್ಥನೆ ಮಾಡುತ್ತಿರುವ ಆರೋಪವನ್ನು ಅವನ ಮೇಲೆ ಹೊರಿಸಿದರು. ಅವನು ದೇವರ ಬಳಿ ಸಹಾಯ ಬೇಡುವಾಗಲೇ ಅವನಿಗೆ ತೊಂದರೆ ಎದುರಾಯಿತು! ಇದರಿಂದ ಅರಸನಾದ ದರ್ಯಾವೇಷನಿಗೆ ಬಹಳ ಬೇಸರವಾಯಿತು, ಅವನು ದಾನಿಯೇಲನನ್ನು ಕಾಪಾಡಲು ಪ್ರಯತ್ನಿಸಿದರೂ ಆಗಲಿಲ್ಲ. ನಮ್ಮ ಜೀವನದಲ್ಲಿ ಸಹಜವಾಗಿ, ನಾವು ಸುತ್ತಮುತ್ತ ನೋಡುತ್ತೇವೆ ಮತ್ತು ನಮ್ಮ ಸಮಸ್ಯೆಗಳಿಂದ ಹೊರಬರಲು ನಮಗೆ ಮಾರ್ಗವೇ ಕಾಣಿಸುವದಿಲ್ಲ. 2ನೇ ದಿನದ ಪಾಠ ನಿಮಗೆ ನೆನಪಿದೆಯೇ? ಏನೇಆದರೂ ದೇವರಲ್ಲಿ ಭರವಸೆಯನ್ನಿಡಿರಿ, ಯಾಕಂದರೆ ದೇವರು ಸರ್ವಜ್ಞಾನಿಯಾಗಿದ್ದಾನೆ ಮತ್ತು ಯಾರಿಂದಲೂ ಪರಿಹಾರ ಕೊಡಲು ಆಗದೆ ಇರುವದರಿಂದ ಆತನು ಪರಿಹಾರವನ್ನು ಕೊಡುತ್ತಾನೆ. "ಧೈರ್ಯವು ರಕ್ಷಿಸುತ್ತದೆ" ಎಂದು ಎಲ್ಲರೂ ಹೇಳಿರಿ.

ದಾನಿಯೇಲನನ್ನು ಸಿಂಹದ ಗವಿಯೊಳಗೆ ಹಾಕಿದರು ಮತ್ತು ಇಡೀ ರಾತ್ರಿ ಅದರೊಳಗೆ ಇದ್ದನು. ಎಷ್ಟು ಭಯವಾಗಿರಬಹುದಲ್ಲವೇ! ನೀವು ಸಿಂಹವನ್ನು ಹತ್ತಿರದಿಂದ ನೋಡಿದ್ದೀರೋ? ಅದರ ಒಂದು ಸಣ್ಣ ಘರ್ಜನೆಯಿಂದ ಭೂಮಿಯೇ ನಡುಗುತ್ತದೆ. ಆದರೆ ದೇವರು ಸಿಂಹಗಳ ಬಾಯಿಗಳನ್ನು ಕಟ್ಟಲು ದೇವದೂತರನ್ನು ಕಳುಹಿಸುವ ಮೂಲಕ ಆ ಗವಿಯೊಳಗೆ ದಾನಿಯೇಲನನ್ನು ಕಾಪಾಡಿದನು. ದಾನಿಯೇಲನು ಇಡೀ ರಾತ್ರಿ ಸಿಂಹಗಳೊಂದಿಗೆ ಇದ್ದನು. ಮುಂಜಾನೆಯಲ್ಲಿ, ಅರಸನಾದ ದರ್ಯಾವೇಷನು ಸಿಂಹದ ಗವಿಯ ಬಳಿಗೆ ಬಂದು ದಾನಿಯೇಲನು ಸುರಕ್ಷಿತನಾಗಿರುವದನ್ನು ತಿಳಿದುಕೊಂಡನು. ಅವನು ದಾನಿಯೇಲನ ವೈರಿಗಳನ್ನು ಸಿಂಹದ ಗವಿಯೊಳಗೆ ಹಾಕಿದನು, ಅವರು ನೆಲದ ಮೇಲೆ ಬೀಳುವ ಮೊದಲೇ ಸಿಂಹಗಳು ಅವರನ್ನು ಕೊಂದು ಹಾಕಿದವು. ಇದಲ್ಲದೆ, ಅರಸನಾದ ದರ್ಯಾವೇಷನು ತನ್ನ ಸಾಮ್ರಾಜ್ಯದಲ್ಲಿರುವವರೆಲ್ಲರಿಗೆ ದಾನಿಯೇಲನ ದೇವರಿಗೆ ಭಯಪಡಿರಿ ಎಂದು ಹೇಳಿದನು ಮತ್ತು ದಾನಿಯೇಲನಿಗೆ ಉನ್ನತ ಸ್ಥಾನವನ್ನು ಅನುಗ್ರಹಿಸಿದನು. "ಧೈರ್ಯವು ರಕ್ಷಿಸುತ್ತದೆ" ಎಂದು ಎಲ್ಲರೂ ಹೇಳಿರಿ.

ದೇವರು ಯಾರು ಅಂದರೆ ಆತನು ಸರ್ವಾಧಿಕಾರವುಳ್ಳವನು ಮತ್ತು ಸರ್ವಶಕ್ತನು ಎಂದು ತಿಳಿದುಕೊಳ್ಳುವದು, ಕಷ್ಟದ ಕಾರ್ಯಗಳನ್ನು ಮಾಡಲು ಅಂದರೆ ದೇವರಲ್ಲಿ ಭರವಸೆಯಿಟ್ಟು, ಆತನಿಗೆ ವಿಧೇಯರಾಗಲು ಮತ್ತು ಕಷ್ಟವಾದರೂ ಇತರರನ್ನು ಪ್ರೀತಿಸಲು ನಮಗೆ ಧೈರ್ಯವನ್ನು ಕೊಡುತ್ತದೆ. ದೇವರು ಯಾರೆಂದು ನಾವು ಹೆಚ್ಚೆಚ್ಚಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ದಾನಿಯೇಲನ ಹಾಗೆ ನಾವು ಆತನೊಂದಿಗೆ ಪ್ರತಿದಿನ ಸಮಯವನ್ನು ಕಳೆಯಬೇಕು. ನೀವು ಏಕಾಂಗಿಯಾಗಿರುವಾಗ ಸತ್ಯವೇದವನ್ನು ಓದಿರಿ, ಪ್ರಾರ್ಥನೆ ಮಾಡಿರಿ, ಆತನಿಗೆ ಹಾಡುಗಳನ್ನು ಹಾಡಿರಿ. ಈ ಕಾರ್ಯಗಳನ್ನು ಮಾಡುವಾಗ, ದೇವರು ಎಷ್ಟು ದೊಡ್ಡವನು ಎಂಬದನ್ನು ನೀವು ತಿಳಿದುಕೊಳ್ಳುವಿರಿ ಮತ್ತು ಆತನಿಗಾಗಿ ಜೀವಿಸಲು ಧೈರ್ಯ ಪಡೆಯುವಿರಿ. "ಧೈರ್ಯವು ರಕ್ಷಿಸುತ್ತದೆ" ಎಂದು ಎಲ್ಲರೂ ಹೇಳಿರಿ.

# ರೊಟೇಷನ್ ಸ್ಟೇಷನ್ಸ್

## ಸಾಮ್ರಾಜ್ಯದಲ್ಲಿ ಕರಕುಶಲತೆ 5

**ಲಯನ್ ಮಾಸ್ಕ್ (ಸಿಂಹದ ಮುಖವಾಡ)**



**ಸಾಮಗ್ರಿಗಳು**

- ಪೇಪರ್ ಮಾಸ್ಕ್ ಮಾದರಿ
- ಮುಖದ ರೂಪವಿರುವ ಹಳದಿ ಪೇಪರ್
- ಕಿವಿ, ಹುಬ್ಬು ಮತ್ತು ಮೂಗಿನ ರೂಪವಿರುವ ಆರೆಂಜ್ ಪೇಪರ್
- ಮುಖದ ರೂಪವಿರುವ ಬಿಳಿ ಪೇಪರ್
- ಕರ್ಲಿ ರಿಬ್ಬನ್, 50cm
- ಬಣ್ಣಗಳು
- ಗ್ಲೂ

**ಸೂಚನೆಗಳು**

- ಮುಖ ಚಿತ್ರದ ಮಾದರಿಯನ್ನು ಕತ್ತರಿಸಿರಿ ಮತ್ತು ಅದಕ್ಕೆ ಬಣ್ಣ ಹಚ್ಚಿರಿ.
- ಮೇಲೆ ಚಿತ್ರದಲ್ಲಿ ಇರುವ ಹಾಗೆಯೇ ಹಳದಿ ಪೇಪರ್ ಮೇಲ್ಭಾಗದಲ್ಲಿ ಅಂಟಿಸಿರಿ.
- ಅದರ ಮೇಲೆ ಮುಖ ಮತ್ತು ಮೂಗಿನ ಚಿತ್ರಣವನ್ನು ಅಂಟಿಸಿರಿ. ಹಾಗೆಯೇ ಫೋಟೋದಲ್ಲಿ ಇರುವ ಹಾಗೆ ಕಿವಿಗಳು ಮತ್ತು ಹುಬ್ಬುಗಳನ್ನು ಅಂಟಿಸಿರಿ.
- ಎರಡೂ ಕಡೆಗಳಲ್ಲಿ ಕರ್ಲಿ ರಿಬ್ಬನ್ ಕಟ್ಟಿರಿ, ಮಗುವಿನ ತಲೆಗೆ ಕಟ್ಟಲು ಅನುಕೂಲವಾಗಿರಬೇಕು.

## ಅರಮನೆಯಲ್ಲಿ ತರಗತಿ 5













| | | |
|---|---|---|
| 4 | 2 | 14 |
| 9 | 15 | 3 |
| 1 | 11 | 8 |
| 10 | 5 | 7 |
| 12 | 13 | 6 |



1 2 3 4 5 6 7 8



## ಪ್ರಶ್ನೆಗಳು ಮತ್ತು ಉತ್ತರಗಳು 5

1. **"ರಕ್ಷಣೆ ಹೊಂದುವದು" ಎಂದರೆ ಏನು?**
   ಇದರ ಅರ್ಥ ಬಿಟ್ಟುಬಿಡುವದಲ್ಲ ಬದಲಾಗಿ ಕಷ್ಟವಾದರು ನಾವು ಮಾಡುವ ಕಾರ್ಯವನ್ನು ಮುಂದುವರೆಸುವದು. ದಾನಿಯೇಲನು ಪ್ರಾರ್ಥನೆ ಮಾಡುವದನ್ನು ನಿಲ್ಲಿಸಲಿಲ್ಲ.
2. **ಸಿಂಹಗಳು ಹಸಿವೆಯಲ್ಲಿದ್ದರೂ, ದಾನಿಯೇಲನನ್ನು ಯಾಕೆ ತಿನ್ನಲಿಲ್ಲ?**
   ದೇವರು ಕಳುಹಿಸಿದ ದೂತನು ಬಂದು ಅವುಗಳ ಬಾಯಿ ಕಟ್ಟಿದ್ದರಿಂದ ಅವುಗಳಿಂದ ಏನೂ ತಿನ್ನಲು ಆಗಲಿಲ್ಲ.
3. **ಈ ಸಮಯಗಳಲ್ಲಿ ಅರಸನಾದ ದರ್ಯಾವೇಷನು ಯಾವ ರೀತಿಯ ಆಲೋಚನೆಯುಳ್ಳವನಾಗಿದ್ದನು: ತನಗೆ ಬದಲು ದೇವರಿಗೆ ಪ್ರಾರ್ಥನೆ ಮಾಡುವದು ಅಪರಾಧ ಎಂದು ಅವನನ್ನು ವಂಚಿಸಿದಾಗ? ದಾನಿಯೇಲನನ್ನು ಹಸಿವೆಯಲ್ಲಿದ್ದ ಸಿಂಹದ ಗವಿಯೊಳಗೆ ಹಾಕಿದಾಗ? ದಾನಿಯೇಲನಿಗೆ ಯಾವುದೇ ತೊಂದರೆ ಆಗದೆ ಇದ್ದಾಗ? ಅವನು ಅಧಿಕಾರಿಗಳನ್ನು ಗವಿಯೊಳಗೆ ಹಾಕಲು ತೀರ್ಮಾನಿಸಿದಾಗ?**
   ಸಾಧ್ಯವಿರುವ ಉತ್ತರಗಳು: ಪ್ರಾರ್ಥನೆ ಮಾಡಿಸಿಕೊಳ್ಳುವಷ್ಟು ಗರ್ವ ಮತ್ತು ವಿಶೇಷತೆ, ದಾನಿಯೇಲನು ಸಾಯುವನೇನೋ ಎಂಬ ದುಃಖ, ದಾನಿಯೇಲನು ಬದುಕಿರುವದನ್ನು ಕೇಳಿ ಸಂತೋಷ, ದಾನಿಯೇಲನಿಗೆ ಕೇಡು ಮಾಡಲು ತನ್ನನ್ನು ವಂಚಿಸಿದ ಅಧಿಕಾರಿಗಳ ಮೇಲೆ ಕೋಪ.
4. **ನಿಮ್ಮ ಜೀವನದಲ್ಲಿ ಯಾವ ಕಾರ್ಯವನ್ನು ಮಾಡಲು ನಿಮಗೆ ಕಷ್ಟವಾಗುತ್ತಿದೆ?**
   ಸಾಧ್ಯವಿರುವ ಉತ್ತರಗಳು: ಪ್ರಾರ್ಥನೆ, ಸತ್ಯವೇದ ಓದುವದು, ದೇವರಿಗೆ ಹಾಡುಗಳನ್ನು ಹಾಡುವದು, ತಾಯಿಗೆ ಅಡುಗೆ ಮಾಡುವಾಗ ಸಹಾಯ ಮಾಡುವದು, ಸಹೋದರರೊಂದಿಗೆ ಆಟವಾಡುವದು, ವಾದವಿವಾದಗಳ ಸಮಯದಲ್ಲಿ ಇತರರ ಬಗ್ಗೆ ಯೋಚಿಸುವದು, ನಿಮ್ಮ ಹೃದಯ ಮತ್ತು ಆಲೋಚನೆಗಳನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳುವದು, ಎಲ್ಲರೂ ಮಾಡುತ್ತಿರುವ ಕಾರ್ಯ ತಪ್ಪು ಎಂದು ಗೊತ್ತಿದ್ದರೂ ಅದನ್ನು ತಡೆಯದೆ ಇರುವದು.
5. **ಅರಸನು ದಾನಿಯೇಲನನ್ನು ಗವಿಯೊಳಗಿಂದ ತೆಗೆಸಿದ ನಂತರ ಏನಾಯಿತು?**
   ದಾನಿಯೇಲನ ದೇವರಿಗೆ ಭಯಪಡಿರಿ ಎಂದು ಅರಸನಿಗೆ ಜನರೆಲ್ಲರಿಗೆ ಹೇಳಿದನು. ದಾನಿಯೇಲನು ರಾಜ್ಯದಲ್ಲಿ ಉನ್ನತ ಸ್ಥಾನಕ್ಕೆ ಬಂದನು. ದಾನಿಯೇಲನ ವೈರಿಗಳು ಸಿಂಹಗಳಿಗೆ ಆಹಾರವಾದರು.

## ಅಸೈನ್ಮೆಂಟ್ 5

**ದಾನಿಯೇಲನ ಹಾಗೆ, ದಿನಕ್ಕೆ 3 ಸಲ ಪ್ರಾರ್ಥನೆ ಮಾಡಿರಿ.**

ಟೀಚರ್: ದಾನಿಯೇಲನೇ, ನಿಮಗೆ ಮತ್ತೊಮ್ಮೆ ಸ್ವಾಗತ.

ದಾನಿಯೇಲ: ಧನ್ಯವಾದಗಳು. ಇನ್ನೊಂದು ದಿನ ನಿಮ್ಮ ಬಳಿ ಬಂದದ್ದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ಎಸ್ತೇರ್ ರಾಣಿಯನ್ನು ಭೇಟಿ ಮಾಡಿ ಹೇಗನ್ನಿಸಿತು?

ಟೀಚರ್: ಎಸ್ತೇರಳ್ ರಾಣಿಯ ಭೇಟಿ ಬಹಳ ಆಸಕ್ತಿಕರವಾಗಿತ್ತು. ಇಂದು ನಾವು ನಿಮ್ಮನ್ನು ಸಿಂಹದ ಗವಿಯೊಳಗೆ ಹಾಕಿದರೆಂದು ಕೇಳಿದೆವು. ನಿಜವೇ?

ದಾನಿಯೇಲ: ಹೌದು ನಿಜ. ಒಮ್ಮೆ ನಾನು ಇಡೀ ರಾತ್ರಿ ಸಿಂಹಗಳ ಜೊತೆಯಲ್ಲಿದ್ದೆನು. ಇಲ್ಲಿಯ ತನಕ ನಾನು ಅರಸನಾದ ನೆಬೂಕದ್ನೇಚ್ಚರನು ಆಳ್ವಿಕೆ ಮಾಡುತ್ತಿದ್ದ ಸಮಯದಲ್ಲಿ ನಡೆದ ಘಟನೆಗಳನ್ನು ಹೇಳುತ್ತಿದ್ದೆನು. ನಂತರದಲ್ಲಿ, ಮೇದ್ಯರು ಮತ್ತು ಪಾರಸಿಯರು ಬಂದು ಬಾಬೆಲನ್ನು ವಶಪಡಿಸಿಕೊಂಡರು. ಮತ್ತೊಮ್ಮೆ, ಅಧಿಕಾರದ ಬದಲಾವಣೆಯಾದ್ದರಿಂದ, ಮತ್ತೊಮ್ಮೆ ಸೆರೆವಾಸಕ್ಕೆ ಹೋದಂತೆ, ಹೊಸ ಸಂಸ್ಕೃತಿಯನ್ನು ಮತ್ತು ಆಡಳಿತ ಪದ್ಧತಿಯನ್ನು ಕಲಿತುಕೊಳ್ಳುವಂತೆ ಆಯಿತು. ಆದರೆ ಅರಸನಾದ ದರ್ಯಾವೇಷನು ನನ್ನನ್ನು ಗುರುತಿಸಿದನು ಮತ್ತು ನನ್ನನ್ನು ಹಾಗೂ ಇನ್ನಿಬ್ಬರನ್ನು ವಿವಿಧ ಪ್ರಾಂತ್ಯಗಳ ಮೇಲೆ ಅಧಿಕಾರಿಗಳನ್ನಾಗಿ ನೇಮಿಸಿದನು. ಸ್ವಲ್ಪ ಸಮಯದ ನಂತರ, ಅವನು ನನ್ನನ್ನು ಇಡೀ ಸಾಮ್ರಾಜ್ಯದ ಮೇಲೆ ಅಧಿಕಾರಿಯನ್ನಾಗಿ ನೇಮಿಸಲು ಯೋಚಿಸಿದನು. ಇತರೆ ಅಧಿಕಾರಿಗಳು ನನ್ನ ಮೇಲೆ ಹೊಟ್ಟೆಕಿಚ್ಚುಪಟ್ಟರು ಮತ್ತು ನನಗೆ ತೊಂದರೆ ಕೊಡಲು ತೀರ್ಮಾನಿಸಿದರು. ಒಂದುದಿನ ನಾನು ಹಾದುಹೋಗುವಾಗ ಅವರು ಏನೋ ಮಾತನಾಡುವದು ನನ್ನ ಕಿವಿಗೆ ಬಿತ್ತು, ಆಗ ಅವರು ನನಗೆ ವಿರುದ್ಧವಾಗಿ ಏನೋ ಒಳಸಂಚು ನಡೆಸುತ್ತಿದ್ದಾರೆ ಎಂಬದು ನನಗೆ ಅರಿವಾಯಿತು. ಒಂದುದಿನ ಅರಸನಾದ ದರ್ಯಾವೇಷನು, ಒಂದು ತಿಂಗಳ ಕಾಲ ತನಗೆ ಬಿಟ್ಟರೆ ಬೇರೆ ಯಾವ ದೇವರಿಗೆ ಅಥವಾ ಮಾನವನಿಗೆ ಯಾರೂ ಪ್ರಾರ್ಥನೆ ಮಾಡಬಾರದು, ಒಂದುವೇಳೆ ಹಾಗೇನಾದರು ಯಾರಾದರೂ ಮಾಡಿದರೆ ಅವರನ್ನು ಸಿಂಹದ ಗವಿಯೊಳಗೆ ಹಾಕಲಾಗುವದು ಎಂಬ ಆಜ್ಞೆಯನ್ನು ಹೊರಡಿಸಿದನು. ಜನರು ಸಣ್ಣ ವಸ್ತುಗಳನ್ನು ಆರಾಧನೆ ಮಾಡಲು ಅಥವಾ ಪ್ರಾರ್ಥನೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರ ಈಗ, ಒಬ್ಬ ಜೀವಂತ ಮನುಷ್ಯನನ್ನೇ ಆರಾಧಿಸಲು ಪ್ರಯತ್ನಿಸಿದರು. ಆದರೆ ಅದರಿಂದ ನನಗೆ ಕಿರಿಕಿರಿಯಾಯಿತು, ಆದರೆ ಹೊಸ ಸಾಮ್ರಾಜ್ಯದಲ್ಲಿ ಆಜ್ಞೆಗಳನ್ನು ಬದಲಾಯಿಸಲು ಯಾರಿಂದಲೂ ಆಗುತ್ತಿರಲಿಲ್ಲ. ಆದರೂ ನನ್ನ ಅನುದಿನದ ಚಟುವಟಿಕೆಯಂತೆ, ನಾನು ಪ್ರತಿದಿನ ಪ್ರಾರ್ಥನೆ ಮಾಡುತ್ತಾ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೆನು. ಆತನು ಜೀವನಪರ್ಯಂತರ ನನಗೆ ಸಹಾಯ ಮಾಡುತ್ತಾ ಬಂದಿದ್ದಾನೆ, ಆದ್ದರಿಂದ ನನ್ನ ಕೆಲಸವನ್ನು ಉತ್ತಮವನ್ನಾಗಿ ಮಾಡಲು ಆತನ ಸಹಾಯದ ಅವಶ್ಯಕತೆ ಮುಖ್ಯವಾಗಿದೆ. ಒಂದುದಿನ ನಾನು ಪ್ರಾರ್ಥನೆ ಮಾಡುತ್ತಾ ದೇವರ ಸಹಾಯ ಬೇಡಿಕೊಳ್ಳುತ್ತಿದ್ದೆನು ಆಗ ಅಧಿಕಾರಿಗಳೆಲ್ಲರೂ ನನ್ನ ಕೋಣೆಯೊಳಗೆ ಬಂದು ನಾನು ಪ್ರಾರ್ಥನೆ ಮಾಡುತ್ತಿರುವಾಗಲೇ ನನ್ನನ್ನು ಹಿಡಿದರು. ಅವರು ನನ್ನನ್ನು ಅರಸನಾದ ದರ್ಯಾವೇಷನ ಬಳಿಗೆ ಕರದುಕೊಂಡು ಬಂದರು. ನಾನು ಮಾಡಿದ ಕಾರ್ಯವನ್ನು ಅವನಿಗೆ ತಿಳಿಸಿದರು ಅವನಿಗೆ ಬಹಳ ಬೇಸರವಾಯಿತು. ಹೊಸ ಅರಸನ ಸೇವೆಮಾಡುತ್ತಾ, ಸಾಮ್ರಾಜ್ಯದಾದ್ಯಂತ ಜನರ ಪ್ರಯೋಜನಾರ್ಥಕವಾಗಿ ದುಡಿಯಲು ಹೇಗಾದರು ಆ ಪರಸ್ಥಿತಿಯಿಂದ ಹೊರಬರಲು ನಾನು ಬಯಸಿದೆನು.

ಅರಸನಾದ ದರ್ಯಾವೇಷನು ಇಡೀ ದಿನ ನನ್ನನ್ನು ಕಾಪಾಡಲು ಪ್ರಯತ್ನಿಸುತ್ತಿದ್ದನು. ಆತನಿಗೆ ನನ್ನ ಮೇಲೆ ಬಹಳ ಪ್ರೀತಿಯಿದೆ ಎಂಬದು ನನಗೆ ತಿಳಿದಿರಲಿಲ್ಲ. ಆದರೆ, ರಾತ್ರಿಯಾದ ಮೇಲೆ, ಹೊರಬರಲು ಆಗುವದಿಲ್ಲವೆಂದು ದೃಢವಾದ ನಂತರ ಅವರು ನನ್ನನ್ನು ಸಿಂಹದ ಗವಿಯೊಳಗೆ ಹಾಕಿದನು. ನಾನು ಆ ಸ್ಥಳ, ಅಲ್ಲಿನ ವಾಸನೆ, ಅಲ್ಲಿದ್ದ ಸಿಂಹಗಳನ್ನು ಎಂದಿಗೂ ಮರೆಯುವದಿಲ್ಲ. ಅವುಗಳ ಗಂಟಲಿನೊಳಗಿಂದ ಬರುವ ಸಣ್ಣ ಘರ್ಜನೆಯು ನೆಲವನ್ನೆಲ್ಲಾ ಅಲ್ಲಾಡುವಂತಿತ್ತು. ಆದರೆ ನನ್ನ ಮೇಲೆ ದಾಳಿಮಾಡಲು ಅಥವಾ ನನ್ನನ್ನು ತಿನ್ನಲು ಅಥವಾ ಇಡೀ ರಾತ್ರಿ ಏನಾದರು ತಿನ್ನಲು ಅವುಗಳು ಪ್ರಯತ್ನಿಸಲಿಲ್ಲ. ನನ್ನ ಸ್ನೇಹಿತರೊಂದಿಗೆ ಧಗಧಗನೆ ಉರಿಯುವ ಬೆಂಕಿಯೊಳಗೆ ಆದ ಅನುಭವದಂತೆಯೇ ಅಲ್ಲಿ ನನ್ನ ಸಂಗಡ ದೇವದೂತನು ಇದ್ದನು. ಮುಂಜಾನೆಯಲ್ಲಿ


ಅರಸನಾದ ದರ್ಯಾವೇಷನು ಗವಿಯ ಬಳಿಗೆ ಬಂದು, ನೀನು ಸುರಕ್ಷಿತವಾಗಿದೆಯೋ, ನಿನ್ನ ದೇವರು ನಿನ್ನನ್ನು ಕಾಪಾಡಿದನೋ ಎಂಬದಾಗಿ ಕೇಳುವ ಸ್ವರವನ್ನು ನಾನು ಕೇಳಿಸಿಕೊಂಡೆನು. ನಾನು ದೇವದೂತನ ಬಗ್ಗೆ ಅವನಿಗೆ ತಿಳಿಸಿದೆನು ಮತ್ತು ನಾನು ಅವನಿಗೆ ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿದೆನು. ಅವನು ನನಗೆ ವಿರುದ್ಧವಾಗಿ ಒಳಸಂಚು ಮಾಡಿದವರನ್ನು ಗವಿಯೊಳಗೆ ಹಾಕಿಸಿದನು ಮತ್ತು ಸಿಂಹಗಳು ಅವರನ್ನು ಕೂಡಲೇ ತಿಂದುಬಿಟ್ಟವು. ನಂತರ ಅವನು ತನ್ನ ರಾಜ್ಯದಲ್ಲಿರುವ ಪ್ರತಿಯೊಬ್ಬನು ನಮ್ಮ ದೇವರಿಗೆ ಭಯಭಕ್ತಿಯುಳ್ಳವನಾಗಿ ನಡೆದುಕೊಳ್ಳಬೇಕೆಂಬ ಆಜ್ಞೆಯನ್ನು ಹೊರಡಿಸಿದನು. ನೋಡಿ ನಮ್ಮ ದೇವರು ತನ್ನ ಬಗ್ಗೆ ಗೊತ್ತಿಲ್ಲದ ಅರಸನಿಗೆ ತಾನು ಯಾರು ಎಂಬದನ್ನು ತಿಳಿಯಪಡಿಸಿದನು. ಇದಲ್ಲದೆ, ನಮ್ಮ ಸೆರೆವಾಸದ ಸಮಯದಲ್ಲಿಯೂ ದೇವರು ನಮ್ಮ ಸಂಗಡ ಇರುವದನ್ನು ಮತ್ತೊಮ್ಮೆ ದೃಢಪಡಿಸಿದನು.

ಟೀಚರ್: ನೀನು ಪ್ರಾರ್ಥನೆಯ ಮೂಲಕ ಹೇಗೆ ರಕ್ಷಣೆ ಹೊಂದಿದೆ ಎಂಬ ವಿಷಯವು ನಿಜವಾಗಿಯೂ ಪ್ರೋತ್ಸಾಹದಾಯಕವಾಗಿದೆ.

ದಾನಿಯೇಲ: ನಾವು ಸುಲಭವಾಗಿ ಮರೆತುಹೋಗುತ್ತೇವೆ, ಆದರೆ ನಮಗೆ ಅನುದಿನವು ಆತನ ಸಹಾಯದ ಅವಶ್ಯಕತೆಯಿದೆ. ಆತನು ಖಂಡಿತವಾಗಿ ಎಲ್ಲಾ ಸಮಯಗಳಲ್ಲಿಯೂ ನನಗೆ ಸಹಾಯ ಮಾಡುತ್ತಾನೆ ಆದ್ದರಿಂದ ನಾನು ಆತನಿಗೆ ಯಾವಾಗಲೂ ಕೃತಜ್ಞತೆಯುಳ್ಳವನಾಗಿದ್ದೇನೆ.

## ಚಟುವಟಿಕೆ 5

### ನನ್ನ ಸಮಯವನ್ನು ಕ್ರಮಪಡಿಸಿಕೊಳ್ಳುವದು



ಪ್ರತಿಯೊಂದು ಮಗುವಿಗೆ ಒಂದು ಹಾಳೆಯನ್ನು ಕೊಡಿರಿ. ಪ್ರಾರ್ಥನೆ ಮಾಡುತ್ತಾ, ಸತ್ಯವೇದವನ್ನು ಓದುತ್ತಾ ಅಥವಾ ದೇವರನ್ನು ಸ್ತುತಿಸುತ್ತಾ ವಾರದಲ್ಲಿ ಸಿಗುವ ಸಮಯದ ಬಗ್ಗೆ ಯೋಚಿಸುವಂತೆ ಮಕ್ಕಳಿಗೆ ಹೇಳಿರಿ. ಅವರು ತಮಗಿರುವ ಫ್ರೀ ಸಮಯದ ಬಗ್ಗೆ ಹಾಳೆಯ ಮೇಲೆ ಬರೆಯಲಿ ಮತ್ತು ದೇವರೊಂದಿಗೆ ಸಮಯವನ್ನು ಕಳೆಯಲು ಅವರಿಗೆ ಪ್ರೋತ್ಸಾಹಪಡಿಸಿರಿ. ಪ್ರಾರಂಭದಲ್ಲಿ ಅದು 2 ನಿಮಿಷಗಳಾದರೂ ಸರಿಯೇ, ಆದರೆ ನಂತರದಲ್ಲಿ ಅದು ಅಭಿವೃದ್ಧಿಯಾಗಬೇಕು.

## ರಾಜಮನೆತನದ ಔತಣಕೂಟ 5

### ಸಿಂಹ



ಸಾಮಗ್ರಿಗಳು:

- ನಿಮ್ಮ ಆಯ್ಕೆಯ ಹಳದಿ ಹಣ್ಣು (ಪೈನ್ ಆಪಲ್, ಮಾವಿನ ಹಣ್ಣು, ಇತ್ಯಾದಿ)
- ಆರೆಂಜ್ ಹಣ್ಣು ಅಥವಾ ತರಕಾರಿ (ಕಡು ಮರದ ಅವಶೇಷಗಳು ಅಥವಾ ಕ್ಯಾರೆಟ್)
- ಒಂದೊಂದು ಬಾಳೆ ಹಣ್ಣಿನ ತುಂಡು (ಕಿವಿಗಳಿಗೆ)
- ಕತ್ತಿ
- ಬ್ಲೂಬೆರೀಸ್

ಸೂಚನೆಗಳು:

1. ಸಿಂಹದ ಮುಖವನ್ನು ಮಾಡಲು ಹಳದಿ ಹಣ್ಣನ್ನು ವೃತ್ತಾಕಾರದಲ್ಲಿ ಕತ್ತಿಯಿಂದ ಕತ್ತರಿಸಿರಿ.
2. ಸಿಂಹಕ್ಕೆ ಕೇಸರಿ ಬಣ್ಣವನ್ನು ಕೊಡಲು ಆರೆಂಜ್ ಹಣ್ಣು ಅಥವಾ ತರಕಾರಿಯನ್ನು ಉಪಯೋಗಿಸಿರಿ.
3. ಸಿಂಹದ ಕಿವಿಗಳನ್ನು ಸೂಚಿಸಲು ಬಾಳೆಹಣ್ಣು ತುಂಡುಗಳನ್ನು ಉಪಯೋಗಿಸಿರಿ.

4. ಸಿಂಹದ ಕಣ್ಣುಗಳಿಗೆ ಬ್ಲೂಬೆರ್ರಿಗಳನ್ನು ಇಡಿರಿ.
5. ಸಿಂಹದ ಮೀಸೆಗಾಗಿ ಕ್ಯಾರೆಟ್ ಅನ್ನು ಸಣ್ಣದಾಗಿ ಕತ್ತರಿಸಿ ಉಪಯೋಗಿಸಿರಿ.

ಸಿದ್ಧವಾಗಿದೆ! ದಾನಿಯೇಲನ ಹಾಗೆ ಧೈರ್ಯವಾಗಿರುವದನ್ನು ನೆನಪಿಸಿಕೊಳ್ಳಲು ನಾವು ಸ್ವಾದಿಷ್ಟವಾದ ಸಿಂಹವನ್ನು ಸವಿಯೋಣ.




## ತೋಟದ ಆಟಗಳು 5

### ಮುಖಗಳು ಮತ್ತು ಮುಖಭಾವಗಳು



ಸಣ್ಣ ಹಾಳೆಗಳ ಮೇಲೆ ವಿಬಿಎಸ್ ನಲ್ಲಿ ನಾವು ಕಲಿತುಕೊಂಡಿರುವ ಸತ್ಯವೇದದ ಪಾತ್ರಧಾರಿಗಳು ಮತ್ತು ವಸ್ತುಗಳಾದ ದಾನಿಯೇಲ, ಎಸ್ತೇರಳು, ಅರಸನಾದ ನೆಬೂಕದ್ನೇಚ್ಚರನು, ಬೆಂಕಿ, ಸಿಂಹ ಇತ್ಯಾದಿ. ಇವುಗಳ ಹೆಸರುಗಳನ್ನು ಬರೆಯಿರಿ. ಪೇಪರ್ ಚೂರುಗಳನ್ನು ಪಾತ್ರೆಯೊಳಗೆ ಹಾಕಿರಿ. ಮಕ್ಕಳ 2 ತಂಡಗಳನ್ನು ಮಾಡಿರಿ. ಪ್ರತಿಯೊಂದು ತಂಡದ ಪ್ರತಿನಿಧಿಯು ಮುಂದೆ ಬಂದು ತಮ್ಮ ಪಾತ್ರವನ್ನು ನಿಭಾಯಿಸಬೇಕು. ಒಂದು ಪೇಪರ್ ಚೂರನ್ನು ತೆಗೆದು ಅವರೇನು ಮಾಡುತ್ತಿದ್ದಾರೆಂದು ತಿಳಿದುಕೊಳ್ಳಿರಿ. ಒಂದು ಪದವನ್ನು ಹೇಳದೆ ಅಥವಾ ಯಾವುದೇ ಶಬ್ದವನ್ನು ಮಾಡದೆ, ಇಬ್ಬರು ಮಕ್ಕಳು ವಸ್ತುವಿನಂತೆ ಅಥವಾ ಪಾತ್ರದಂತೆ ನಟಿಸಬೇಕು, ಉಳಿದ ಮಕ್ಕಳು ಅದು ಯಾರು ಅಥವಾ ಏನು ಎಂಬದನ್ನು ಗುರುತಿಸಬೇಕು. ಆಟವನ್ನು ಮತ್ತೆ ಆಡಿಸಿರಿ, ಆದರೆ ಪಾತ್ರಧಾರಿಗಳ ಸಂಖ್ಯೆಯನ್ನು ಕಡಿಮೆಗೊಳಿಸಿರಿ. ಯಾವ ತಂಡದವರು ಹೆಚ್ಚು ಗುರುತಿಸುತ್ತಾರೋ ಅವರು ಗೆಲ್ಲುತ್ತಾರೆ.

### ಕಪ್ ಗೋಪುರ



ಮಕ್ಕಳನ್ನು ತಂಡವನ್ನಾಗಿ ಮಾಡಿರಿ ಮತ್ತು ಮುಂದೆ ಬಂದು ಆಡುವಂತೆ ಪ್ರತಿಯೊಂದು ತಂಡದಿಂದ ಪ್ರತಿನಿಧಿಯನ್ನು ಕಳುಹಿಸಿರಿ. ಮಕ್ಕಳಿಗೆ ಸಮಾನ ಸಂಖ್ಯೆಯ ಲೋಟಗಳನ್ನು ಕೊಡಿರಿ ಮತ್ತು ಅವರ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿರಿ. ಆಟಗಾರರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡೇ ಗೋಪುರವನ್ನು ಕಟ್ಟಬೇಕು. ಒಂದುವೇಳೆ ಗೋಪುರವು ಬಿದ್ದರೆ, ಆಟಗಾರನು ಸೋತುಹೋಗುತ್ತಾನೆ. ಗೋಪುರ ಬೀಳದೆ ಆಟವನ್ನು ಮುಗಿಸುವ ಆಟಗಾರನು ಆಟದಲ್ಲಿ ಗೆಲ್ಲುತ್ತಾನೆ.